R. N. 1026

॥ ಶ್ರೀ ಶಿವಯೋಗಿವೃಂದವಂದ್ಯ ॥

ಧರ್ಮೋತ್ತೇಜಕ ಸಭೆಯವತಿಯಿಂದ ಪ್ರಕಟ...

ವೀರಶೈವ

ಧರ್ಮತರಂಗಿಣಿ

ಎಂಬ

ಮಾಸಪತ್ರಿಕೆಯು.

ವರ್ಷ ೪.
ತಕೆ ೧೮೩೭
ಜ್ಯೇಷ್ಠ

ಸಂಚಿಕೆ ೭.
ಜೂನ
೧೯೧೫ ಇಸ್ವಿ

ಶ್ರೀಮಂತ ಲಿಂಗಪ್ಪ ಬಾಯಪ್ಪ ಸ... ಯಿ ಶಿರಸಂಗಿಕರ.

ಸತ್ಕರ್ಮಸಸ್ಯ ಶುಭಾವ್ಯಾಪ್ತ್ಯೈ । ದುಷ್ಕರ್ಮಕಪ್ರಶಮನಪ್ರವಾಹಃ ॥
ಪುಷ್ಯತ್ಪುಮರ್ಥಾಬುಜ ಸತ್ಸಮೂಹಾ । ರಾಜತ್ಸುಧರ್ಮತರಂಗಿಣೀಹ ॥

Printed by H. S. Shivaling Shastri
at the Dharmatarangini Press
Mangalwara Petta Dharwar

1915.

ವರ್ಷಕ್ಕೆ ಚಂದಾ ಅಂಚೆವೆಚ ಸಮೇತ ರೂ. ೧-೪-೦. ಪ್ರತಿ ಒಂದಕ್ಕೆ ೨ ಅಣೆ.

ವಾಚಕರಿಗೊಂದು ಸೂಚನೆ.

ಈವೊದಲು ಪ್ರಕಟವಾದ ವೃಷೇಂದ್ರಪದಭೂಷಣದ ೨ ಅಧ್ಯಾಯಗಳನ್ನು ವಾಚಕರು ಅವಲೋಕಿಸಿರಬಹುದು. ಈ ಸಂಚಿಕೆಯಲ್ಲಿ ೩ನೆಯ ಅಧ್ಯಾಯವು ಉದಯ ಭವಾಗಿರುವದು. ಈ ಅಧ್ಯಾಯದಲ್ಲಿ ಶ್ರುತಿಸ್ಮೃತ್ಯಾಗಮಗಳ ಆಧಾರದಿಂದ ವೀರ ಶೈವಮತ ಸಿದ್ಧಾಂತವು ಪ್ರತಿಪಾದಿಸಲ್ಪಡುವದು. ಆದ್ದರಿಂದ ಸುಲಭವಾಗುವ ಹಾಗೆ ಎಷ್ಟು ಪ್ರಯತ್ನಿಸಿದರೂ ಪ್ರಮಾಣಕ್ಕೋಸುಗ ವೇದೋಪನಿಷದಾದಿಗಳ ವಚನಗಳು ಸಮ್ಮಿಲಿತವಾಗುವದರಿಂದ ಸ್ವಲ್ಪ ಕಠಿಣವೇ ಆಗಬಹುದು. ಆದರೂ ವಾಚಕರು ಚಿತ್ತಗೊಟ್ಟು ಓದಿ ದುರ್ಜ್ಞೇಯವಾದ ವಿಷಯಗಳನ್ನು ಬಲ್ಲವರಿಂದಲಾದರೂ ತಿಳಿದು ಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ. ಆಂದರೆ ಗ್ರಂಥಕರ್ತರ ಪರಿಶ್ರಮಕ್ಕೆ ಸಾಫಲ್ಯ ವುಂಟಾಗುವದು. ಸದ್ಯಕ್ಕೆ ತರಂಗಿಣಿಯಲ್ಲಿ ಕಥೆ–ಕಾದಂಬರಿಗಳಿಗಿಂತ ಇಂಥ ವಿಷ ಯಗಳು ಅವಶ್ಯವಾಗಿ ಪ್ರಕಟವಾಗಬೇಕೆಂಬದನ್ನು ತಿಳಿಸುವ ಅವಶ್ಯವಿಲ್ಲ. ಈ ವಿಷ ಯದ ೨ ಅಧ್ಯಾಯಗಳ ಪುಸ್ತಕವು ಅಥವಾ ಬೇರೆ ಬೇರೆ ಫಾರ್ಮಗಳು ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುವವು.

ವಿಷಯಾನುಕ್ರಮಣಿಕೆಯು.

ವಿಷಯ.		ಹೆಸರು	ಪುಟ.
೧ ಸಮಾಜವೂ ಧರ್ಮವೂ		ಸಂಪಾದಕ	೧–೮
೨ ವೃಷೇಂದ್ರಪದಭೂಷಣ.	}	ಮ. ರಾ. ಸಿದ್ಧರಾಮಪ್ಪ ವಾವಟೆ B. A. L. L. B. ವಕೀಲ	೧೦೭–೧೧೪
೩ ಇಂದುಕಲಾ ಅಥವಾ ಅಲೌಕಿಕ ಶೌರ್ಯ	}	ಮ. ರಾ. ಗು. ಶಿ. ಸಾಂಬ್ರಾಣಿ	೧೭–೨೪
೪ ವೇಣು ಅಥವಾ ದುಷ್ಟ ಸಮಾಜ	}	ಮ. ರಾ. ಬಸವಾರ್ಯ ಬೂದಿ ಹಾಳ ಶಾಳಾ ಮಾಸ್ತರ ಪೆಡ್ಲೇರಿ	೯೭–೧೧೨

ಜಾಹಿರಾತು.

ಅಪೂರ್ವ! ಅಪೂರ್ವ!! ಅಪೂರ್ವ!!!

ಹೊಸ ಗ್ರಂಥಗಳು.

ಮಹಾಶಿವರಾತ್ರಿ ಕಥೆ– ಸಟೀಕ ದೊಡ್ಡದು ೧೫ ಚಾಣಕ್ಯ ಶತಕ ೧೪ ವೀರಶೈವಾಚಾರಣೆ ೧೫ ಪಾದೋದಕದರ್ಪಣ ೧೫ ಈಶ್ವರನಿಷ್ಠ [illegible]ಷ ೧೫ ಶ್ರೀ ವೀರಭದ್ರ ಸಹಸ್ರನಾಮಾವಳಿ ೧೫ ರಾ. ಬ. ಶ್ರೀಮಂತ ಮಲ್ಲಪ್ಪಾ ಅಂ ಪಾ ವಾರದ ಸೊಲಾಪೂರ ಇವರ ಸಾಗ[illegible] ಚರಿತ್ರ[illegible]ಲ ಹಾಸ್ಯವಿನೋದ ೧೫.

ಹುಲುಬಾಜ

ಅಲಭ್ಯ ಲಾಭ! ಅಲಭ್ಯ ಲಾಭ!! ಅಲಭ್ಯ ಲಾಭ!

ಅಪರೂಪವಾದ ನಾಲ್ಕು ಪುಸ್ತಕಗಳು.

(ಇವುಗಳಲ್ಲಿಯೂ ಅತ್ಯಂತ ಮಹತ್ವದ್ದಾದ ಹಾಗೂ ರಾವಸಾಹೇಬ ವೀರಭದ್ರಪ್ಪ ಬಸಪ್ಪ ಹಾಲಬಾವಿ ಬಿ. ಎ. ಎಲ್. ಎಲ್. ಬಿ. ಮುನಸೂಫ ಹುಬ್ಬಳ್ಳಿ ಇವರ ಅನುಭವದ ಪ್ರಸ್ತಾವನೆಯಿಂದಲೂ ಕೂಡಿದ)

ಸಚಿತ್ರ

೧ ಬೇನಿಗರ ಲಘು ಚಿಂತಾಮಣಿ

ಅಥವಾ

ನನ್ನಲ್ಲಿ ಬೇನೆಯುಂಟೋ? ಏನು ಇಲ್ಲವೋ?

ಇದ್ದರೆ

ಅದನ್ನು ಕಳೆದುಕೊಳ್ಳುವ ಹಗುರಾದ ಹಂಬಿಸಿ ಯಾವುದು?

ಎಂಬ

ಔಷಧ ಮತ್ತು ಶಸ್ತ್ರಪ್ರಯೋಗ ಇವುಗಳ ಹೊರತು ರೋಗಗಳನ್ನು ಕಳೆಯುವ

ನವೀನ ಸಂಕ್ಷಿಪ್ತ ಶಾಸ್ತ್ರವು.

ಕನ್ನಡದಲ್ಲಿ ಈವರೆಗೂ ಆಗದಿದ್ದ ಮತ್ತು ಅವಶ್ಯಕವಾಗಿ ಆಗಲೇ ಬೇಕಾಗಿದ್ದ "ಸರ್ವರೋಗ ನಿವಾರಕ ಹಾಗೂ ಆರೋಗ್ಯಮಾರ್ಗದರ್ಶಕ" ಪುಸ್ತಕವು ಮೇಲಿನ ಹೆಸರಿನಿಂದ ಸಂಪೂರ್ಣ ಅನುಭವದೊಂದಿಗೆ ಈಗೀಗ ಸಿದ್ಧವಾಗಿದೆ. "ಸಾವಿರಾರು ಗಡಿಗೆಗಳಿಗೂ ಒಂದೇ ಒಂದು 'ಡೊಸ್ಣಿ" ಎಂಬಂತೆ ಸಕಲ ರೋಗಗಳ ಸಂಹಾರಕ್ಕೂ ಒಂದೇ ಒಂದು ತುಂಬ ಮನೆಗಂಡ ಹಾಗೂ ಹಗುರಾದ ಚಿಕಿತ್ಸೆಯು ಇದರಲ್ಲಿ ವಿವರಿಸಲ್ಪಟ್ಟಿದೆ. ಈ ಚಿಕಿತ್ಸೆಯಿಂದ ಕ್ಷಯ ಕುಷ್ಠ ಮುಂತಾದ ದೊಡ್ಡ ದೊಡ್ಡ ರೋಗಗಳೇ ನಾಶವಾಗುವವು. ಅಂದಬಳಿಕ ಉಳಿದ ಅಂತಿಂತಹ ಬೇನೆಗಳ ಬಗ್ಗೆ ಬೇರೆ ಹೇಳುವ ಕಾರಣವೇ ಇಲ್ಲ! ಗುಡ್ಡವೇ ಬುಡಮೇಲಾಗಿ ಬಿದ್ದು ಉರುಳಿ ಹೋಗುವಾಗ ಗುಂಡು ಕಲ್ಲಿನ ಪಾಡೆಂದರೇನು" ಬಹಳ ಹೇಳುವದೇನು, ಈ ಪುಸ್ತಕ ಒಂದಿದ್ದರೆ ಸಾಕು ಒಬ್ಬ ದೊಡ್ಡ ನಿಸರ್ಗ (ಖಾಜ) ರಾಜವೈದ್ಯನೇ ಮನೆಯಲ್ಲಿದ್ದಂತೆ" ಈ ಚಿಕಿತ್ಸೆಯಿಂದ ಯುರೋಪ ಆಫ್ರಿಕಾ [illegible]ಕ

[redacted]ಗನ ಎಷ್ಟೋ ಅಸಂಖ್ಯ ಮಹಾ ಮಹಾ ರೋಗಿಗಳು ಬಳ್ಳಿಳ್ಳಿ
ಷ್ಟೆರೆಂಬವರಿಗೆ ವಿೂರಿನಿಂತ ಕ್ಷಯ, ಕುಷ್ಟ, ಉಪದಂಶ, ಬಹುಮೂತ್ರ,
ಮಧುಮೇಹ, ಮುಷ್ಟ್ಯಮೈಥುನ, ಪ್ರಮೇಹ, ಪ್ರದರ, ಫುಪ್ಫುಸರೋಗ
ಮುಂತಾದ ತಮ್ಮ ರೋಗಗಳ್ಳಿಂದ ಮುಕ್ತರಾಗಿದ್ದಾರೆ. ಮತ್ತು ಆಗುತ್ತ
ಲಿದ್ದಾರೆ. ಆದರಂತೆ ನನ್ನಲ್ಲಿಯು ಈ ಚಿಕಿತ್ಸೆಯು ತನ್ನ ಬೆಳಕನ್ನು ಬೀ
ರುತ್ತ ನಡೆದದೆ. ಒಂದೊಂದು ಕಾಲದಲ್ಲಿ ಒಂದೊಂದು ರೀತಿಯಿಂದ ಉಂ
ಟಾಗಿ ದೇಶೀಯ ವಿದೇಶೀಗಳೆನ್ನಿಸಿದ ಯಾವಮದ್ದಿಗೂ ಮಣಿಯದೆ ಸುಮಾರು
ಇಪ್ಪತ್ತೈದು ವರ್ಷಗಳಿಂದ ನನ್ನನ್ನು ಕಾಡುತ್ತ ಬಂದಂತಹ ಭಯಂಕರ
ಧಾತುಕ್ಷಯ, ಅಜೃತಸ್ವಪ್ನಾವಸ್ಥೆ, ಅಗ್ನಿಮಾಂದ್ಯ, ಮಲಬದ್ಧತೆ, ಸರ್ವಾಂ
ಗದಾಹ, ಕಡಕೆ, ಜೀರ್ಣಜ್ವರ, ನರಗಳ ಶಿಥಿಲತೆ, ಗಂಟಲಿನಿಂದ ರಕ್ತಬೀ
ಳೋಣ, ಬಿಸಿಲು ಆಗದಿರೋಣ, ತಲೆಶೂಲಿ ಇವೇ ಮುಂತಾದ ಬಗೆಬಗೆಯ
ಬೇನೆಗಳನ್ನು ಈ ಚಿಕಿತ್ಸೆಯು ಓಡಿಸಿ ಆರೋಗ್ಯಸೌಖ್ಯವನ್ನುಂಟು ಮಾಡಿ
ರುವದು. ಪ್ರಾಥಮಿಕ ಶಾಲಾ ವಿದ್ಯಾರ್ಥಿಯಿಂದ ರಾಷ್ಟ್ರದ ಪ್ರಧಾನ ಮಂತ್ರಿ
ಹೆಗೂ ಮುಖ್ಯ ನ್ಯಾಯಾಧೀಶ ಇವರ ವರೆಗೆ ಮಾನಸಿಕ ಶ್ರಮಮಾಡುವವರಿ
ಗಂತೂ ಈ ಚಿಕಿತ್ಸೆಯು ಸಂಜೀವನಿಯಂತಿರುವದೆಂದರೆ ತಪ್ಪಾಗುವಂತಿಲ್ಲ.
ನನ್ನಂತೆಯೇ ಈ ಚಿಕಿತ್ಸೆಯಿಂದ ಗುಣಹೊಂದಿದವರ ನಾಮಾವಳಿ ಹೇಳ
ಲಿಕ್ಕೆ ಒಬ್ಬ ಭಟ್ಟಂಗಿಯೇ ಬೇಕಾದೀತು. ಮತ್ತು ಅದರಿಂದ ಹೇಳ ಕೇಳು
ವವರಿಬ್ಬರಿಗೂ ಬೇಸರ ಬಂದೀತು. ಆದ್ದರಿಂದ ಹಾಗೆ ಮಾಡದೆ ನನ್ನಲ್ಲಿ
ಯೇ ಗುಣಹೊಂದಿದವರಲ್ಲಿ ಈ ಸಂಬಂಧ ಕೆಲವರ ಅಭಿಪ್ರಾಯಗಳನ್ನು
ಪಡಿಕಟ್ಟಾಗಿ ಪುಸ್ತಕದಲ್ಲಿ ಕೊಟ್ಟಿದೆ. ಅವನ್ನು ನೋಡಿದರೆ ಈ ಪುಸ್ತಕವು
ಚಿಕಿತ್ಸೆಯ ಮಹತ್ವವು ಎಷ್ಟಿರುವದೆಂಬದು ತಾನೇ ಸಹಜ ತಿಳಿಯುವದು,
ಬೇರೆ ಬಣ್ಣಿಸುವ ಕಾರಣವಲ್ಲ.

ಅಮೌಲ್ಯವಾದ ಗಂಥ ಪುಟದ ಈ ಗ್ರಂಥದ ಬೆಲೆ ತೀರ ತುಸು
ಎಂದರೆ ಏರೇ ೧೫ ಆಣೆ ಇಡಲ್ಪಟ್ಟಿರುವದು. (ಮೊದಲು ೮ ಆಣೆಯೆಂದು
ಹುಲುಬಿಸಿತ್ತು. ಆದರೆ ಮೊದಲು ಗೊತ್ತು ಮಾಡಿದಕಿಂತ ವಿಷಯವನ್ನು
ವಿಸ್ತಾರವಾಗಿ ಬರೆಯುವ ಅವಶ್ಯಕತೆಯುಂಟಾದ್ದರಿಂದಲೂ, ಮತ್ತು ಕಾಗ
ದಗಳ ಬೆಲೆಯು ಏರಿದ ಹಾಗು ಹೆಚ್ಚಿಗೆ ಚಿತ್ರ ಹಾಕಿದ ಈ ಮುಂತಾದ
ಬೇರೆ ಕಾರಣಗಳಿಂದಲೂ, ನಿರುಪಾಯದಿಂದ ಬೆಲೆಯು ಹೆಚ್ಚಿ ಸಲ್ಪಟ್ಟಿತು.)
ಇದನ್ನು ಹೊರತು ಅಂಚೆವೆಚ್ಚ ಎರಡಾಣೆ.

ಇವೆಲ್ಲದೆ ನಮ್ಮಲ್ಲಿ ಪಂಚಸೂತ್ರಕ್ಕೆ ಸರಿಯಾಗಿಯೂ ಶ್ರೀ ಷ್ಠಾನಗಳ್ಳ ಕುವಾರ ಸ್ವಾಮಿಗಳವರಿಂದ ಬಹುಮಾನವನ್ನು ಹೊಂದಿದ ಪ್ರಖ್ಯಾತವಾದ ಲಿಂಗಗಳೂ, ಪೂಜಾರ್ಹವಾದ ಶ್ರೀ ಬಸವೇಶ್ವರ ಮೂರ್ತಿಗಳೂ ಯೋಗ್ಯ ರ್ಯಕ್ಕೆ ದೊರೆಯುವವು. ಬೇಕಾದವರು ತರಿಸಿಕೊಳ್ಳಬಹುದು. ವಿಶೇಷ ಮಾಹಿತಿಯನ್ನು ಅಪೇಕ್ಷಿಸುವವರು ಪತ್ರವ್ಯವಹಾರದಿಂದ ತಿಳಿದುಕೊಳ್ಳಬಹುದು.

ಜ್ವರಾಂಕುಶ ಮಾತ್ರೆ ೩೨ ಗುಳಿಗೆಗೆ ೧ ರೂ. ಮೂಲವ್ಯಾಧಿ ತೈಲ ಒಂದು ಕುಪ್ಪಿಗೆ ೫ ಚಾತುರ್ಥಕ ಭೈರವ ಭಸ್ಮ ೧ ತೊಲೆಗೆ ೫ ವೀರ್ಯವೃದ್ಧಿ ಚೂರ್ಣ ಒಂದು ಡಬ್ಬಿಗೆ ೧ ರೂ. ವಿವರಕ್ಕೆ ಮೂಲಮೂ ೫ ಇವೆಲ್ಲಕ್ಕೂ ಟಪಾಲು ವಿ. ಪಿ. ಚಾರ್ಜು ಬೇರೆ.

ವಿಶೇಷ ಸೂಚನೆ—ನಾವು ಕೆಲವು ಮಹನೀಯರ ಚರಿತ್ರೆಗಳನ್ನು ಶೋಧ ಮಾಡಿ ಪ್ರಿಂಟು ಮಾಡಿಸುವ ಕಾರ್ಯವನ್ನು ಕೈಕೊಂಡಿರುತ್ತೇವೆ. ಆದರೆ ಈ ಸತ್ಕಾರ್ಯಕ್ಕೆ ಮತಾಭಿಮಾನಿಗಳಾದ ತಾವೆಲ್ಲರೂ ತಮಗೆ ಗೊತ್ತಿದ್ದಷ್ಟರ ಮಟ್ಟಿಗೆ ಅಂಥ ಯೋಗ್ಯ ಸ್ವಾಮಿಗಳ ಪೂರ್ತು, ಸಭ್ಯ ಗೃಹಸ್ಥರ ಚರಿತ್ರೆಗಳನ್ನು ನಮಗೆ ಇಪತ್ತಿನಿಂದ ಎರಡು ತಿಂಗಳೊಳಗಾಗಿ ತಿಳುಹಿಸಿ ಪುಣ್ಯಶಾಲಿಗಳಾಗಬೇಕೆಂದು ಅಪೇಕ್ಷಿಸುತ್ತೇವೆ. ೧೨–೩

ತಾ. ೯–೨–೧೯೧೫ಈ. } ಸೆಕ್ರೆಟರಿ ಶ್ರೀಮದ್ವೀರಶೈವ ವಾಚನಾಲಯ,
ಮುಕ್ಕಾಂ ಇಟಗಿ, ತಾ. ಖಾನಾಪೂರ, ಡಿ. ಬೆಳಗಾವ.

ಧಾರವಾಡ ಧರ್ಮಜಾಗರಂಗಿಣಿ ಪ್ರೆಸ್ಸಿನಲ್ಲಿ ದೊರೆಯುವ ಪುಸ್ತಕಗಳು.

ಪ್ರಭುಲಿಂಗಲೀಲೆಯು.

ಈ ಅತ್ಯುತ್ತಮವಾದ ಗ್ರಂಥವು ಇಷ್ಟುವರೆಗೆ ಸಂಸ್ಕೃತದಲ್ಲಿಯೂ ಹಳೆಗನ್ನಡದಲ್ಲಿಯೂ ಪದ್ಯರೂಪವಾಗಿದ್ದು ಜನರಿಗೆ ಓದಿಕೊಳ್ಳಲು ಅಶಕ್ಯವಾಗಿತ್ತು. ಅದರಲ್ಲಿಯ ವಿಷಯಗಳು ಎಲ್ಲ ಜನರಿಗೆ ಸುಬೋಧವಾಗಲೆಂದು ಅಚ್ಚಗನ್ನಡದಿಂದ ವಚನರೂಪವಾಗಿ ರಚಿಸಿ ಮುದ್ರಿಸಿದ್ದೇವೆ. ಇಷ್ಟ-ಪ್ರಾಣ-ಭಾವಲಿಂಗಗಳು ಏಕಸ್ವರೂಪವಾಗಿವೆ. ಇಷ್ಟಲಿಂಗವನ್ನು ದೇಹದಿಂದ ಅಗಲಿಸಿರಬಾರದು. ಜ್ಞಾನಿಯು ಇಷ್ಟಲಿಂಗವನ್ನು ತ್ಯಜಿಸಲಾಗದು. ಜ್ಞಾನಿಗೂ ಕ್ರಿಯೆಗಳು ಬೇಕು. ವೀರಶೈವ ಮತೋತ್ಕರ್ಷ-ವೀರಶೈವನು ಯಾವನು? ಮಹಾತ್ಮರ ಸಂದರ್ಶನೆ ಲಾಭ-ಶಿವಪೂಜೆ ಫಲ ಮುಂತಾದ ಜ್ಞಾನಪ್ರದ ವಿಷಯಗಳೂ, ಮುಕಾಯಿ-ಗೋಗಾರ್ಯ-ಸಿದ್ಧರಾಮೇಶ್ವರ ಮೊದಲಾದ ಅ

ನೇಕ ಮುಖಮುಖರ ಕಥೆಗಳೂ ಇದರಲ್ಲಿರುವವು. ಗ್ಲೇಜ ಕಾಗದದ ಒಟ್ಟು ೨೦೦ ಪುಟಗಳು. ಸುಂದರ ಬಾಯಿಂಡಿಂಗಾಗಿರುವದು. ಕ್ರಯ ೧ ರೂಪಾಯಿ. ಅಂಚೆವೆಚ್ಚ ಬೇರೆ.

(ವಿನಂತಿ.) ಪ್ರವೋದಿನಿ ಕಾದಂಬರಿಯು.

ತರಂಗಿಣಿಯ ಚಂದಾದಾರರಿಗೆ ಪ್ರವೋದಿನಿಯ ಬಗ್ಗೆ ವಿಶೇಷ ಪರಿಚೆಯವನ್ನು ಕೊಡಬೇಕಾದ ಅವಶ್ಯವಿಲ್ಲ. ಈಗ ಆ ಪ್ರವೋದಿನಿಯು ಬೇರೆ ಉತ್ತಮ ರೀತಿಯಿಂದ ಬಾಯಿಂಡಾಗಿ ಮಾರಾಟಕ್ಕೆ ಸಿದ್ಧವಾಗಿರುವದು. ಪುಸ್ತಕದ ಆದಿಭಾಗದಲ್ಲಿ ರಾವಸಾಹೇಬ ಶ್ರೀ ಶಿವಮೂರ್ತಿ ಸ್ವಾಮಿಗಳವರ ಸುಮನೋಹರ ಭಾವಚಿತ್ರಪಟವನ್ನು ಇಟ್ಟಿರುವದು. ಗ್ರಂಥದ ಭಾಷಾಶೈಲಿಗೂ ಕಥಾಸಂವಿಧಾನಕ್ಕೂ ಎಷ್ಟೋ ಜನ ಪಂಡಿತರು ತಮ್ಮ ಪ್ರಶಂಸಾ ಪತ್ರಿಕೆಗಳನ್ನಿತ್ತಿರುವರು. ಅಲ್ಲದೆ ಈ ಗ್ರಂಥಕರ್ತರ ಬೇರೆ ಕೆಲವು ಪುಸ್ತಕಗಳಿಗೆ ಈ. ವಿ. ವೆ. ಸಂಘದವರು ಬಹುಮಾನವನ್ನಿತ್ತಿರುವರು. ಅಗಷ್ಟ ತಿಂಗಳ ಅಂತ್ಯದ ವರೆಗೆ ಈ ಪ್ರವೋದಿಯನ್ನು ಬರೇ ಮುದ್ರಣದ ಖರ್ಚನ್ನಷ್ಟೇ ತೆಗೆದುಕೊಂಡು ನಮ್ಮ ತರಂಗಿಣಿಯ ವರ್ಗಣಿದಾರರಿಗೆ ಮಾತ್ರ ಕೊಡಬೇಕೆಂದು ನಿಶ್ಚಯಿಸಿರುವದು. ಪುಸ್ತಕದ ಪೂರ್ಣ ಬೆಲೆಯು ೫ಕ್ಕೆ ಅಂದರೆ ೪ ಆಣೆಗೇ ಕೊಡುವೆವು. ಪುಸ್ತಕಗಳು ತೀರಸ್ವಲ್ಪವಿರುವವು. ಭಾಷಾಭಿಮಾನಿಗಳೂ ಧರ್ಮಾಭಿಮಾನಿಗಳೂ ಗ್ರಂಥಕರ್ತನ ಪರಿಶ್ರಮದ ಕಡೆಗೆ ಲಕ್ಷಗೊಟ್ಟು ಸ್ವಹಸ್ತ ಪರಹಸ್ತಗಳಿಂದ ಸಹಾಯವಾಡಬೇಕೆಂದು ಬೇಡುವೆವು. ಇಂಥ ಸುಸಂಧಿಯನ್ನು ಯಾರೂ ಕಳೆದುಕೊಳ್ಳಬಾರದು. ಟಪಾಲ ಚಾರ್ಜ ಬೇರೆ ಬೀಳುವದು. ಪುಸ್ತಕಗಳು ತರಂಗಿಣಿಯ ಆಫೀಸಿನಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು.

ಮುಸಲ್ಮಾನ ಜನರಿಗೆ ಅವಶ್ಯವಾಗಿ ಬೇಕಾಗುವ

ನೂರುಲ್ ಹಿದಾಯಾ ಕಿ. ೨ ಆಣೆ. ವಫಾತನಾಮಾ ಕಿ. ೩ ಆಣೆ. ಜರೂರಿಯಾತ್ತಿ ದ್ದೀನ ೪ ಆಣೆ. ಬಹಾರೆ ರಂಗೀನ ಕಿ. ೧॥ ಆಣೆ.

ಧರ್ಮತರಂಗಿಣಿ ಆಫೀಸ, ಧಾರವಾಡ

ಸಮಾಜವೂ ಧರ್ಮವು.

ಲೇಖಾಂಕ ೧.

ತ್ತಿತ್ತಲಾಗಿ ಹತ್ತೆಂಟು ವರ್ಷಗಳೀಚಿಗೆ ಸಮಾಜ, ಸಮಾಜ ಸೇವೆ, ಸಮಾಜ ಸೇವಕರು, ಸಮಾಜ ಚಾಲಕರು, ಸಮಾಜ ಸುಧಾರಣ; ಈಮೊದಲಾದ ಶಬ್ದಗಳು ವಿಶೇಷ ಪ್ರಚಾರದಲ್ಲಿ ಬಂದಿರುವವು. ಇದು ನಮ್ಮ ಸುದೈವ ಸೂಚಕವೆಂದು ಬಹು ಆನಂದದಿಂದ ಹೇಳುತ್ತೇವೆ. ಆದರೆ ನಮ್ಮಲ್ಲಿಯ ಕೆಲವು ನಿರಾಭೂರಿ ನಿರಂಜನ ಸ್ವಾಮಿಗಳವರು, ಮಠಸ್ಥಾಪನಾಚಾರ್ಯರು, ದೇಸಾಯಿ ದೇಶಪಾಂಡ್ಯವತನದಾರರು ಮತ್ತು ಶ್ರೀಮಂತ ಸಾವಕಾರ ವ್ಯಾಪಾರಿ ಮೊದಲಾದವರು ಸಮಾಜದ ಕಡೆಗೆ ಕೊಡತಕ್ಕಷ್ಟು ಲಕ್ಷವನ್ನು ಇನ್ನೂ ಕೊಟ್ಟಿಲ್ಲವೆಂಬದು ದುಃಖದ ಸಂಗತಿಯಾಗಿರುವದು. ಇರಲಿ. ಮೇಲೆ ಹೇಳಿದ ಶಬ್ದಗಳು ಒಳ್ಳೆ ಮಹತ್ವವಾದವುಗಳಿದ್ದು ಅವುಗಳ ಯಥಾರ್ಥವು ಎಷ್ಟೋ ಜನರಿಗೆ ತಿಳಿಯದೇ ಇದ್ದರೂ ಇರಬಹುದು. ಅದನ್ನೇ ವಿವೇಚನ ಮಾಡುವಾ:

ಸಮಾಜ.

ಸಮಾಜವೆಂದರೆ ಒಂದು ದೊಡ್ಡ ಕುಟುಂಬವೆನ್ನಬಹುದು. ಯಾಕಂದರೆ ಮನುಷ್ಯನು ವಿಕಾಕೆಯಾಗಿರಲಾರನು. ಅವನಿಗೆ ಪ್ರತಿದಿನ ಅನೇಕ ತೊಂದರೆಗಳೂ, ಸಂಕಟಗಳೂ ಒದಗುವದುಂಟು. ಅವು ಒಬ್ಬನಿಂದ ಪರಿಹಾರವಾಗದೆ ಬಹು ಜನರಿಂದ ನಿವಾರಣವಾಗುವಂತಿರುವವು. ಆದಕಾರಣ ಅವನು ತನ್ನ ಸಂಸಾರ ಚಕ್ರವನ್ನು ನಡಿಸುವ ಸಲುವಾಗಿ ಒಂದು ಕುಟುಂಬವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಮೇಲೆ ಹೇಳಿದುದಕ್ಕಿಂತ ಹೆಚ್ಚಿನ್ನ ತೊಂದರೆಗಳೂ, ಅಡಚಣೆಗಳೂ ಧಾರ್ಮಿಕ ಮೊದಲಾದ ಶುಭಾಶುಭಕಾರ್ಯಗಳೂ ಒಂದು ಕುಟುಂಬದಿಂದ ಸಾಗುವಹಾಗಿರುವದಿಲ್ಲ. ಆದ್ದರಿಂದ ಅನೇಕರು ಕೂಡಿ ತಂತಮ್ಮ ಧರ್ಮ, ನೀತಿ-ವರ್ತನೆಗಳನ್ನು ಹೋಲುವಂಥ

ಬಹು ಕುಟುಂಬಗಳನ್ನು ಒಟ್ಟುಗೂಡಿಸಿಕೊಂಡಿರಬೇಕಾಗುತ್ತದೆ. ಆದಕಾರಣ ಅನೇಕ ಕುಟುಂಬಗಳ ಗುಂಪಿಗೆ ಸಮಾಜವೆನ್ನುವದುಂಟು. ಅಥವಾ ಮನುಷ್ಯ ಜಾತಿಯ ವ್ಯಕ್ತಿಗಳು ಹಾಗೂ ಮನುಷ್ಯ ಜಾತಿಯ ಬೇರೆ ಬೇರೆ ವರ್ಗಗಳು ಪರಸ್ಪರ ಸ್ನೇಹದಿಂದಲೂ ಪ್ರೀತಿಯಿಂದಲೂ ಕೂಡಿಕೊಂಡಿರುವ ಒಂದು ಸಮುದಾಯಕ್ಕೆ ಸಮಾಜವೆಂದರೂ ಅಡ್ಡೀ ಇಲ್ಲ. " ಸಮಜಂತೆ ಅತ್ರ ಇತಿ ಸಮಾಜಃ " (ಇದರಲ್ಲಿ ಅನೇಕರು ಒಟ್ಟುಗೂಡಿರುತ್ತಾರೆ.) ಎಂದು ಶಬ್ದನಿಷ್ಪತ್ತಿಯಾದರೂ ಇರುವದು. ಅಂದಬಳಿಕ ಸಮಾಜವೆಂದರೆ ಒಂದು ದೊಡ್ಡ ಕುಟುಂಬವೆಂದು ಹಿಂದೆ ಹೇಳಿರುವದು ವಾಚಕರಿಗೆ ಯುಕ್ತವೆನಿಸಬಹುದು. ಇಂಥ ಸಮಾಜಗಳ ಉನ್ನತಿಯೂ, ಅವನತಿಯೂ ಆಯಾಯ ಸಮಾಜದೊಳಗಿನ ಪ್ರತ್ಯೇಕ ಜನರ ಉನ್ನತಿ ಅವನತಿಗಳನ್ನವಲಂಬಿಸಿರುವದೆಂದು ಬಿಡಿದು ಹೇಳುವ ಕಾರಣವಿಲ್ಲ. ಅಂದರೆ ಸಮಾಜದೊಳಗಿನ ಜನರು ಉನ್ನತಿಯಲ್ಲಿದ್ದರೆ ಸಮಾಜವು ಉನ್ನತಿಯನ್ನೂ, ಅವನತಿಯಲ್ಲಿದ್ದರೆ ಅದ್ದು ಅವನತಿಯನ್ನೂ ಹೊಂದುತ್ತದೆಂದು ವ್ಯಕ್ತವಾಗುತ್ತದೆ.

ಸಮಾಜದ ಅನನತಿ.

ಸಧ್ಯದಲ್ಲಿ ಸಮಾಜದೊಳಗೆ ಅನೇಕರು ಬಡತನಕ್ಕೆ ಗುರಿಯಾಗಿಯೂ ಕೆಲವರು ರೋಗಕ್ಕೆ ತುತ್ತಾಗಿಯೂ ಎಷ್ಟೋ ಜನರು ವಿದ್ಯಾಬುದ್ಧಿಗಳಿಲ್ಲದೆ ಅಜ್ಞಾನಕ್ಕೆ ಆಹುತಿಯಾಗಿಯೂ ಹಲವರು ನೈತಿಕ ವರ್ತನವಿಲ್ಲದೆ ವ್ಯಸನಬದ್ಧರಾಗಿಯೂ ಕೆಲವರು ಸ್ವಧರ್ಮಜ್ಞಾನವಿಲ್ಲದೆ ಪರಧರ್ಮ ಜಾಲಕ್ಕೆ ಬೀಳುವವರಾಗಿಯೂ ಇರುವರು. ಈತರದ ಜನರೇ ಸಮಾಜದಲ್ಲಿ ವಿಶೇಷವಾಗಿ ತುಂಬಿಕೊಂಡಿದ್ದ ಮೇಲೆ ಅದರ ಅವನತಿಯನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಸರಿ.

ಸಮಾಜ ಸೇವೆ.

ಸಮಾಜಕ್ಕೆ ತೊಡಗಿನೆ ಈತರದ ದಾರಿದ್ರ್ಯ-ರೋಗ-ಅಜ್ಞಾನ-ವ್ಯಸನಬದ್ಧತೆ ಮೊದಲಾದ ದುಃಖಗಳು ಜನರ ದುರ್ವರ್ತನೆಯಿಂದಲೂ ಸೃಷ್ಟಿಸಿಯಮಕ್ಕೆ ಪ್ರತಿಕೂಲವಾಗಿ ವರ್ತಿಸುವದರಿಂದಲೂ ಬದಗುತ್ತವೆ. ಈ ಪ್ರತಿಕೂಲಸ್ಥಿತಿಯನ್ನು ತೆಗೆದುಹಾಗಿ ಅನುಕೂಲ ಸಾಧನಗಳನ್ನು ಕೈಕೊಂಡು

ಜನರು ಸಂಪತ್ತಿನಿಂದಲೂ ಆರೋಗ್ಯದಿಂದಲೂ ನಿರ್ವ್ಯಸನದಿಂದಲೂ ಜ್ಞಾನ ತೇಜಸ್ಸಿನಿಂದಲೂ ಕೂಡಿಕೊಂಡಿರುವಂತೆ ಮಾಡುವದೇ ಸಮಾಜಸೇವೆಯೆ ನಿಸುವದು.

ಸಮಾಜ ಸೇವಕರು.

ಸಮಾಜಸೇವಾ ರೂಪವಾದ ಈ ಮಹತ್ಕಾರ್ಯವನ್ನು ಕೈಕೊಂಡ ಮೆಹಾಪುರುಷರು ಸಮಾಜ ಸೇವಕರೆನಿಸುವರು. ಇವರು, ಸ್ವೋದರಪೂರ ಕರೂ ಸ್ವಂತ ಕುಟುಂಬ ಪೋಷಕರೂ ಸ್ವಾರ್ಥಪರಾಯಣರೂ ಆದ ಇತರ ಸೇವಕರಂತೆಲ್ಲ. ಇವರ ವರ್ತನೆಯೇ ಬಂದು ರೀತಿಯಾಗಿರುವದು. ಸಮಾಜವೇ ತಮ್ಮ ಕುಟುಂಬವೆಂದು ಭಾವಿಸುವರು. ಸಮಾಜದೊಳಗಿನ ದುಃಖಗಳನ್ನು ನೋಡಿ ದುಃಖಪಡುವರು. ಸುಖಿಗಳನ್ನು ನೋಡಿ ಆನಂದಿಸುವರು. ಸಮಾಜದ ಸಲುವಾಗಿ ತನು-ಮನ-ಧನಗಳನ್ನು ಸೂರೆಮಾಡುವರು. ಈತರದ ಜನರು ನಮ್ಮ ಸಮಾಜದಲ್ಲಿ ಅಲ್ಪಸ್ವಲ್ಪಾಗಿರುವರು. ಆದ್ದರಿಂದ ಸಮಾಜದ ಪ್ರಗತಿಯು ಮಂದಗತಿಯಿಂದ ಸಾಗಿರುವದು. ಆರಂಭದಲ್ಲಿ ಹೇಳಿದ ಮಹಾನುಭಾವ-ಮಹಾನೀಯರೆಲ್ಲರು ಸುಧಾರಣ ಕಾರ್ಯದಲ್ಲಿ ಜಾಗ್ರತರಾದರೆ ಸಮಾಜವು ಬೇಗನೆ ಉನ್ನತಿಯನ್ನು ಹೊಂದಬಹುದು. ಅಂಥ ಸುದಿನವನ್ನು ಪರಮಾತ್ಮನು ಬೇಗನೆ ಒದಗಿಸಲೆಂದು ಪ್ರಾರ್ಥಿಸುತ್ತೇವೆ.

ಸುಧಾರಣೋಪಾಯಗಳು.

ವಿಚಾರ ಮಾಡಿ ನೋಡಲು ಸಮಾಜಕ್ಕೆ ಈತರದ ಹಾನಿಗಳು ಜನರಲ್ಲಿ ಶಾರೀರಿಕಬಲ-ಮಾನಸಿಕಬಲ-ನೈತಿಕ ನಡಾವಳಿ-ಧಾರ್ಮಿಕ ವರ್ತನೆಗಳಿಲ್ಲದೇ ಸಂಭವಿಸಿರುವವೆಂದು ಹಿಂದೆ ಹೇಳಿದ್ದೇವೆ. ಇವು ಜನರಲ್ಲಿ ನೆಲೆಗೊಂಡರೆ ಸಮಾಜವು ಸುಸ್ಥಿತಿಯನ್ನು ಹೊಂದುವೆದೆಂದು ಬೇರೆ ಹೇಳುವ ಅವಶ್ಯವಿಲ್ಲ. ಇವು ನೆಲೆಗೊಳ್ಳಬೇಕಾದರೆ ಯಾವ ಉಪಾಯವನ್ನು ಕೈಕೊಳ್ಳಬೇಕೆಂಬದೇ ವಿಚಾರಣೀಯವಾಗಿರುವದು. ಕೆಲವರು ಉಪದೇಶಕರನ್ನು ನೇಮಿಸಿ ಅಲ್ಲಲ್ಲಿ ಉಪದೇಶ ಮುಖದಿಂದ ಜನರನ್ನು ಸುಧಾರಿಸಬೇಕೆಂದು ಅನ್ನುತ್ತಿರುವರು. ಹೆಲವರು ಪುಸ್ತಕಾಲಯ (ಲಾಯಬ್ರರಿ) ಗಳನ್ನು ಸ್ಥಾಪಿಸಿ ಧರ್ಮ-ನೀತಿ ಗ್ರಂಥಗಳನ್ನು ಸಂಗ್ರಹಿಸಿ ಜನರಲ್ಲಿ ವಾಚನಾಭಿರುಚಿ

ಯನ್ನು ಹುಟ್ಟಿಸುತ್ತಿರುವರು. ಅನೇಕರು ಅಲ್ಲಲ್ಲಿ ಸಭೆಗಳನ್ನು ಕೂಡಿಸಿ ವಾಖ್ಯಾನಕಾರರಿಂದ ಉಪನ್ಯಾಸ ಮಾಡಿಸಿ ಜನರನ್ನು ಜಾಗೃತಿಗೊಳಿಸುತ್ತಿರುವರು. ಅನೇಕ ಧರ್ಮಾಭಿಮಾನಿಗಳು ತಮ್ಮ ಊರುಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿ ವೈದಿಕ ವಿದ್ಯೆಯನ್ನು ಪ್ರಬಲಿಸುತ್ತಿರುವರು. ಕೆಲವರು ವರ್ತಮಾನಪತ್ರ ಮಾಸಿಕಪುಸ್ತಕಗಳನ್ನು ಹೊರಡಿಸಬೇಕೆಂದು ಹೇಳುತ್ತಿರುವರು. ನಿಜವಾಗಿ ನೋಡಿದರೆ ಇವೆಲ್ಲವು ಸುಧಾರಣೆಯ ಉಪಾಯಗಳಿಂದೇ ಹೇಳಬಹುದು. ಆದರೆ ನೂರಾರು ವರ್ಷಗಳಿಂದ ಅಧೋಗತಿಗೆ ಇಳಿಯುತ್ತ ಬಂದಿರುವ ಸಮಾಜದ ದುಸ್ಥಿತಿಯು ಅಲ್ಪ ಸ್ವಲ್ಪ ಸಾಧನಗಳಿಂದ ಸುಧಾರಿಸಲಾರದು. ಮಹತ್ತರವಾದ ಉಪಾಯಗಳೇ ಬೇಕಾಗುವವು. ಸದ್ಯದ ಪೂರ್ತಿಗಾಗಿ ಬೇರೆ ಕೆಲವು ಉಪಾಯಗಳನ್ನು ಕೈಕೊಂಡರೆ ಮೇಲೆ ವಿವರಿಸಿದ ಸಂಕಟಗಳು ನಿವಾರಣವಾಗದೆ ಅಥವಾ ನಿವಾರಣವಾದರೂ ಪುನಃ ಉತ್ಪನ್ನವಾಗುವದರಿಂದ ಸಮಾಜದ ಸುಸ್ಥಿತಿಯು ಚಿರಸ್ಥಾಯಿಯಾಗಲಾರದು. ಮುಖ್ಯವಾಗಿ ಸದ್ಧರ್ಮ-ಸದಾಚಾರಗಳು ಸಮಾಜದಲ್ಲಿ ಪ್ರಸಾರವಾಗುವದು ಲೇಸು. ಯಾಕಂದರೆ ಧರ್ಮಭ್ರಷ್ಟರಲ್ಲಿ ನೀತಿಯೂ, ನೀತಿಭ್ರಷ್ಟರಲ್ಲಿ ಸದ್ವರ್ತನವೂ ಇರಲಾರದು. ಆದಕಾರಣ ವಿವೇಕಾನಂದರವರು ಬಂದು ಸಾರಿ ತಮ್ಮ ಉಪನ್ಯಾಸದಲ್ಲಿ Religion is the back baon of the Society (ಧರ್ಮವು ಸಮಾಜದ ಬೆನ್ನೆಲಬಾಗಿರುವದೆಂದು) ಇದೇ ಅಭಿಪ್ರಾಯದ ಮೇಲಿಂದ ಹೇಳಿರುವರು. ಒಟ್ಟಿನ ಮೇಲಿಂದ ಧರ್ಮಸುಧಾರಣೆವು ಎಲ್ಲ ಉಪಾಯಗಳಿಗೆ ಮೂಲವಾಗಿರುವದೆಂದರೆ ತಪ್ಪಾಗಲ್ಲಾರದು. ಆದಕಾರಣ "ಧ್ರಿಯತೇಅನೇನಲೋಕಃ ಧರ್ಮಃ" (ಯತನವಾಗುವಂಥ ಜನರು ಇದರಿಂದ ಹಿಡಿಯಲ್ಪಡುವರು) ಎಂಬ ಅನ್ವರ್ಥವು ಅದಕ್ಕೆ ಬಂದಿರುವದು.

ಹೀಗಿದ್ದು ಅನೇಕರು "ಸ್ವಭಾವಕ್ಕೂ ಧರ್ಮಕ್ಕೂ ಯಾವತರದ ಸಂಬಂಧವಿಲ್ಲ. ಸ್ವಭಾವ ಸುಧಾರಿಸುವದು ನೀತಿಶಾಸ್ತ್ರದ ಕೆಲಸವು. ಆದ ಕಾರಣ ನೈತಿಕ ಶಿಕ್ಷಣದಿಂದಲೇ ಸಮಾಜ ಸುಧಾರಣ ಕಾರ್ಯವಾಗುವದು. ಧರ್ಮ-ಧರ್ಮಸಂಸ್ಕಾರ ಇವುಗಳಲ್ಲಿ ಏನೂ ಅರ್ಥವಿಲ್ಲ" ಎಂದು ಅನ್ನುತ್ತಿರುವರು. ಆದರೆ ಧರ್ಮ ಮತ್ತು ನೀತಿ ಇವುಗಳೊಳಗೆ ಭೇದ ಕಲ್ಪನೆಯು

ಇತ್ತಿತ್ತಲಾಗಿನ ಜನರಲ್ಲಿ ಉತ್ಪನ್ನವಾಗಿರುವದು. ಅವರು ಯಾವ ಆಧಾರದ ಮೇಲಿಂದ ಇದನ್ನು ಹೇಳುತ್ತಿರುವರೋ ಅವರಿಗೆ ಗೊತ್ತು. ಧರ್ಮಸೂತ್ರಗಳ ಮೇಲಿಂದ ನೋಡಿದರೆ ಧರ್ಮನೀತಿಗಳಲ್ಲಿ ವಿಶೇಷ ಭೇದವೂ ಕಂಡು ಬರುವದಿಲ್ಲ. ಅದು ಹ್ಯಾಗಂದರೆ—ಸತ್ಯವನ್ನೇ ನುಡಿಯಬೇಕು, ಪರದ್ರವ್ಯವನ್ನು ಅಪಹಾರ ಮಾಡಬಾರದು, ಶಾಂತನಾಗಿರಬೇಕು, ಶುಚಿವಂತನಾಗಿರಬೇಕು, ಗುರುಹಿರಿಯರಿಗೆ ನಮ್ರವಾಗಿ ನಡಿಯಬೇಕು, ವ್ಯಭಿಚಾರ ಮಾಡಬಾರದು, ಪ್ರಾಣಿಗಳನ್ನು ಪೀಡಿಸಬಾರದು, ಇವೇ ನೀತಿಶಾಸ್ತ್ರದ ಮುಖ್ಯ ತತ್ವಗಳು. ಇನ್ನು ಧರ್ಮಶಾಸ್ತ್ರದ ಮುಖ್ಯ ತತ್ವಗಳಂದರೆ:—

ಸತ್ಯಮಸ್ತೇಯಮಕ್ರೋಧೋ । ಹ್ರೀಃಶೌಚಮಧೀರ್ಧೃತಿಃಕ್ಷಮಾ ॥
ಸಂಯತೇಂದ್ರಿಯತಾವಿದ್ಯಾಧರ್ಮಃ ಸರ್ವಉದಾಹೃತಃ ॥

ತಾತ್ಪರ್ಯ—ಸತ್ಯ, ಕಳವು ಮಾಡದಿರೋಣ, ಶಾಂತತೆ, ವಿನಯ, ಶುಚಿತ್ವ, ತಿಳಿವಳಿಕೆ, ಧೈರ್ಯ, ಸ್ವಾವಲಂಬನ, ಇಂದ್ರಿಯನಿಗ್ರಹ, ವಿದ್ಯಾ ಈ ಹತ್ತು ಲಕ್ಷಣಗಳ ಸಮುದಾಯವೇ ಧರ್ಮವು. ಅಂದಮೇಲೆ ನೀತಿ, ಹಾಗೂ ಧರ್ಮ, ಇವುಗಳಲ್ಲಿ ಎಷ್ಟು ತಾರತಮ್ಯವಿರುವದು? ನೀತಿಯ ಶಿಖರವೇ ಧರ್ಮ, ಧರ್ಮದ ಮೂಲ ಸ್ವರೂಪವೆ ನೀತಿಯೆಂದರೂ ಸಲ್ಲುವದು.

ಮನಸ್ಸು ಎಲ್ಲ ಸದ್ಗುಣಗಳಿಗೂ ದುರ್ಗುಣಗಳಿಗೂ ಮೂಲ ಕಾರಣವಾಗಿರುವದು. ಮನಸ್ಸಿನ ಚಾಂಚಲ್ಯ ಸಂಕುಚಿತ ವೃತ್ತಿಗಳಿಂದಲೆ ಕಾಮ, ಕ್ರೋಧ, ಲೋಭ ಮೊದಲಾದ ದುರ್ಗುಣಗಳು ಹುಟ್ಟುವವು. ಮನಸ್ಸಿನ ಸ್ಥಿರತ್ವ-ವಿಶಾಲತ್ವಗಳಿಂದ ಶಾಂತಿ, ಸಂತೋಷ, ತೃಪ್ತಿ, ವಿವೇಕ ಮೊದಲಾದ ಸುಗುಣಗಳು ಉತ್ಪನ್ನವಾಗುವವು. ಆದಕಾರಣ ಮನಸ್ಸನ್ನು ತಿದ್ದುವದೇ, ಧರ್ಮಸಂಸ್ಕಾರಗಳ ಕೆಲಸವಾಗಿರುವದು. ಪ್ರತಿಯೊಂದು ಧರ್ಮದಲ್ಲಿ ಹೇಳುವ ದೇವತಾಧ್ಯಾನ,-ಮಂತ್ರ-ತಂತ್ರ ಮೊದಲಾದವುಗಳು ಇಂದ್ರಿಯನಿಗ್ರಹ, ಮನೋನಿಗ್ರಹಗಳ ಸಲುವಾಗಿಯೇ ಇರುವವು. ಮನಸ್ಸೊಂದು ಸ್ಥಿರಗೊಂಡರೆ ಎಲ್ಲ ಸದ್ಗುಣಗಳು ವಾಸಿಸಿದವೆಂದು ತಿಳಿಯಬೇಕು.

ಸದ್ಯದಲ್ಲಿ ಬೇರೆ ಬೇರೆ ಧರ್ಮದವರೂ ಬೇರೆ ಬೇರೆ ಮೂರ್ತಿಪೂಜಕರಾಗಿಬಂದೇ ಧರ್ಮದೊಳಗಿನ ಪ್ರತ್ಯೇಕ ಪ್ರತ್ಯೇಕ ವರ್ಗದವರೂ ನಮ್ಮ

ಧರ್ಮ ಹೆಚ್ಚು ನಿಮ್ಮ ಧರ್ಮ ಕಡಿಮೆ, ನಮ್ಮ ದೇವರು ಶ್ರೇಷ್ಠ ನಿಮ್ಮ ದೇವರು ಕನಿಷ್ಠವೆಂದು ಬಡದಾಡುತ್ತಿರುವವು. ಹಾಗೂ ಒಂದೇ ವರ್ಗದೊಳಗಿನ ಜನರು ಸಹ ನನ್ನ ಮಾತು ಯೋಗ್ಯ ನಿನ್ನ ಮಾತು ಅಯೋಗ್ಯ, ನಾನು ಹೆಚ್ಚು ನೀನು ಕಡಿಮೆ ಎಂದು ಪಟವಡಿ ಪಂಗಡಗಳನ್ನು ಕಟ್ಟಿಕೊಂಡು ಜಗಳಾಡುತ್ತಿರುವರು. ಇದು ದೇಶಕ್ಕೂ ಸಮಾಜಕ್ಕೂ ಎಷ್ಟು ಹಾನಿಕರವೆಂದು ಹೇಳುವ ಹಾಗಿಲ್ಲ. ವಾಸ್ತವಿಕವಾಗಿ ನೋಡಿದರೆ ಇವೆಲ್ಲವು ಸ್ವಾರ್ಥ ಸ್ವಂತ ಉತ್ಕರ್ಷದ ಸಲುವಾಗಿದ್ದು ಧರ್ಮದ ಮೇಲೆ ಆರೋಪಿತವಾಗಿರುವವು. ಇದನ್ನು ನೋಡಿ ರಾಷ್ಟ್ರಹಿತಚಿಂತಕರೂ ಸಮಾಜೋತ್ಕರ್ಷಕಾಂಕ್ಷಿಗಳೂ ಕಳವಳಗೊಳ್ಳುತ್ತಿರುವರು. ಸಮಾಜದಲ್ಲಿ ಶಾಂತಿ ಸಮಾಧಾನಗಳಿಲ್ಲದೆ ಐಕ್ಯವೇ ಭಂಗವಾಗುತ್ತಿರುವದೆಂದು ಮಿಡುಕುತ್ತಿರುವರು. ಸಮಾಜಪ್ರಮುಖರಲ್ಲಿಯಾಗಲಿ ಗ್ರಾಮ-ಪಟ್ಟಣಗಳ ಮುಖಂಡರಲ್ಲಿಯಾಗಲಿ ಏಕಾಭಿಪ್ರಾಯವಿರಲೇಬೇಕಾಗುತ್ತದೆ. ಅಂದರೆ ಎಲ್ಲರೂ ಕೂಡಿ ಒಮ್ಮನಸಿನಿಂದ ತಮ್ಮ ಸಮಾಜದ ಸಂಬಂಧಿಯದಾಗಲಿ ಗ್ರಾಮಸಂಬಂಧಿಯದಾಗಲಿ ಕಲ್ಯಾಣ ಕಾರ್ಯವನ್ನು ಮಾಡಲನುಕೂಲವಾಗುವದು. ಆದ್ದರಿಂದ ಐಕ್ಯವೆ ಎಲ್ಲ ಸುಧಾರಣೆಗೂ ಮೂಲಮಂತ್ರವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅದೊಂದಿಲ್ಲದ್ದರಿಂದಲೆ ಸಮಾಜಗಳಲ್ಲಿಯು ಸುಧಾರಣೆಯ ಕಾರ್ಯಗಳು ನಂದೋರಾಜಾ ಭವಿಷ್ಯತಿಯಾಗಿರುವವು. ಸಮಾಜಗಳಲ್ಲಿ ಶಾಂತಿ ಸಮಾಧಾನಗಳುಂಟಾಗುವವರೆಗೂ ಐಕ್ಯವುತ್ಪನ್ನವಾಗಲಾರದು. ಐಕ್ಯವಿಲ್ಲದೆ ವಿನಹಾ ಸಮಾಜಕ್ಕೆ ಕಲ್ಯಾಣವಾಗಲಾರದು. ಇದನ್ನು ನೋಡಿ ಸಮಾಜದ ಪ್ರಮುಖರಲ್ಲನೇಕರು ಜನರಲ್ಲಿ ಧಾರ್ಮಿಕ ವರ್ತನವಿಲ್ಲದೆ ಈ ರೀತಿಯಾಗಿರುವದೆಂದು ತಿಳಿದು ಧರ್ಮಪ್ರಸಾರ ಮಾಡಲಿಚ್ಛಿಸುತ್ತಿರಲು ಸಮಾಜ ಹಿತಚಿಂತಕರಲ್ಲಿ ಎಷ್ಟೋ ಜನರು ಧರ್ಮದಿಂದೆ ಈ ಹಾಡಾಗಿರುವದೆಂದು ಧರ್ಮವನ್ನು ಜೂರಿ ಅದನ್ನು ಆದಷ್ಟು ಮೆಟ್ಟಿಗೆ ಮೂಲಿಗೆ ಬಿಗಿಯಲಿಕ್ಕೆ ಬಯಸುತ್ತಿರುವರು. ನಿಜವಾಗಿ ನೋಡಿದರೆ ಧರ್ಮದಿಂದ ಈ ಬಗೆಯು ಆಗಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಯಾಕಂದರೆ, ಸತ್ಯ-ಅಸ್ತೇಯ-ಶಾಂತತೆ-ಅಹಿಂಸೆ-ಇಂದ್ರಿಯನಿಗ್ರಹವೆಂಬ ಗುಣಗಳು ಧರ್ಮದ ಆರಂಭದ ಲಕ್ಷಣಗಳಿಂದು ಹಿಂದೆ ಹೇಳಿದ್ದೇವೆ. ಈ ತರದ ಲಕ್ಷಣಗಳು

ಳ್ಳವರೇ ಧಾರ್ಮಿಕರೆಂದು ಹೇಳಬಹುದು. ಇಂಥ ಸಜ್ಜನರಲ್ಲಿ ಪರಪೀಡೆ ಅಸತ್ಯ-ಸ್ವಾರ್ಥ-ದುರಭಿಮಾನ ಮೊದಲಾದ ದುರ್ಗುಣಗಳು ಹುಟ್ಟುವದೆಂದರೆ ಸಮುದ್ರದಲ್ಲಿ ಅಗ್ನಿ ಹುಟ್ಟಿದಂತೆ ಅಸಂಭವವೇ ಸರಿ.

ಧರ್ಮಶೂನ್ಯರ ಮನಸ್ಸಿಗೆ ಶಾಂತಿಯು ದೊರೆಯಲಾರದು; ಆ ಶಾಂತಿಯೇ ಇಲ್ಲದ ಮೇಲೆ ಸುಖವೆಲ್ಲಿಂದ ಬರುವದು? ಈ ಮಾತಿನ ಸತ್ಯತೆಯು ಪರಮ ಪವಿತ್ರವಾದ ನಮ್ಮ ಧರ್ಮಭೂಮಿಯಲ್ಲಿ ಬಹು ಜನರ ಅನುಭವಕ್ಕೆ ಬಂದಿದ್ದರೂ ಇತ್ತಿತ್ತಲಾಗಿ ಅನುಭವವಿಲ್ಲದ ಎಷ್ಟೋ ಜನರು ಧರ್ಮದಲ್ಲಿ ಏನು ಅರ್ಥವಿಲ್ಲೆಂದು ತಿಳಿಯುತ್ತಾರೆ. ಕೆಲವರಂತೂ ನಮ್ಮ ದೇಶದ ಅವನತಿಗೆ ಧರ್ಮಮೂಢತನವೇ ಕಾರಣವಾಯಿತೆಂದು ಸ್ಪಷ್ಟವಾಗಿ ಆಡಿ ತೋರಿಸುವರು. ಇದಕ್ಕೆ ಅವರಲ್ಲಿರುವ ಸೂಕ್ಷ್ಮಬುದ್ಧಿಯ ಅಭಾವವೂ ಧರ್ಮದಲ್ಲಿಯ ಅಶ್ರದ್ಧೆಯೂ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಯಾವದಾದ ರೊಂದು ಕಾರಣದಿಂದ ಕಂಗಾಲಿಗೆದ್ದ ಮನುಷ್ಯನು ಸಿಕ್ಕವರ ಮೇಲೆ ಹರಿಹಾಯ್ದು ಹೊಟ್ಟೆಯಲ್ಲಿ ತುಂಬಿದ ಸಿಟ್ಟು ತೀರಿಸಿಕೊಳ್ಳುವಂತೆ ವಿಕಾರವಶರಾದ ಹಸಿಬಿಸಿ ಪಂಡಿತರು ಬೇರೆ ಅನೇಕ ಕಾರಣಗಳಿಂದ ರಸಾತಳಕ್ಕಿಳಿದ ದೇಶದ ದುಸ್ಥಿತಿಯ ಇಂಗಿತವನ್ನು ತಿಳಿಯದೆ ಎಲ್ಲ ತಪ್ಪನ್ನು ಸಾತ್ವಿಕವಾದ ಧರ್ಮದ ತಲೆಯ ಮೇಲೆ ಹೊರಿಸಿ ತಾವು ದೂರಾಗುತ್ತಾರೆ. ಆದರೆ ವಿಚಾರ ಮಾಡಿ ನೋಡಲು ಮುಸಲ್ಮಾನರ ಅಧಿಕಾರವು ಈ ದೇಶದಲ್ಲಿ ನೆಲೆಗೊಳ್ಳುವದಕ್ಕಿಂತ ಸರಾಸರಿ ೨೦೦ ವರ್ಷಗಳ ಮುಂಚೆ ನಮ್ಮ ಧರ್ಮದ ಅವನತಿಯು ಆರಂಭವಾಗಿ ಕಡೆಗೆ ಈ ಹಾಡು ಬಿದಗಿತು. ನಿಜವಾಗಿ ಧರ್ಮವು ನಮ್ಮ ಅವನತಿಗೆ ಕಾರಣವಾಗದೆ ಸತ್ಯಧರ್ಮದ ಅಜ್ಞಾನವೇ ನಮ್ಮ ಪ್ರಗತಿಗೆ ಪ್ರತಿಬಂಧಕವಾಗಿದೆ. ಈ ಅಜ್ಞಾನವು ಸಮುನ್ಮೂಲ ನಾಶವಾದ ಹೊರ್ತು ನಾವು ಎಂದೆಂದೂ ಸುಧಾರಣ ಶಿಖರವನ್ನು ಏರಲಾರೆವು. ನಮ್ಮ ಧಾರ್ಮಿಕತತ್ವಗಳು ಬಿಳ್ಳೀ ಉದಾರವಾದವುಗಳೂ ಪ್ರಕಾಶವಾದವುಗಳೂ ನಮ್ಮ ಪ್ರಗತಿಗೆ ಸಹಾಯವಾದವುಗಳೂ ಇದ್ದು ಕೆಲವು ಅನಾಚಾರಗಳು ಮಾತ್ರ ಧರ್ಮದ ಹೆಸರಿನಲ್ಲಿ ಸರ್ವಾವೇಶವಾಗಿ ನಿಷ್ಕಲಂಕವಾದ ಧರ್ಮಕ್ಕೆ ಕಲಂಕ ತಂದಿವೆ. ಈ ದುರಾಚಾರಗಳು ಮುಳುಗಿದರೆ ಧರ್ಮ

ವೇ ಮುಳುಗುವದೆಂದು ಕೆಲವು ದುರಭಿಮಾನಿಗಳು ನುಡಿಯುತ್ತಿರುವರು. ಇದು ಅವರ ಹಟವಾದಿತನವೂ ಮೂರ್ಖತನವೂ ಎಂದು ಬೇರೆ ಹೇಳುವ ಕಾರಣವಿಲ್ಲ. ಸತ್ಯ ಧರ್ಮಾಭಿಮಾನಿಯು ಇವುಗಳನ್ನು ತೆಗೆದುಹಾಕಲಿಕ್ಕೆ ಪ್ರಯತ್ನಿಸಿದರೂ ಹಿಂದುಮುಂತೆ ನೋಡಲಾರನು. ನಿಜವಾಗಿ ನಮ್ಮ ಧರ್ಮ ವೆಂಬ ಮಂದಿರವು ಸ್ವಲ್ಪ ದಕ್ಕಿ ಬಡಿದ ಕೂಡಲೆ ಸಮಾಟಾಗುವ ಹಾಗೆ ಉಸುಕಿನ ಪೊಳ್ಳು ನೆಲದ ಮೇಲೆ ಕಟ್ಟಿಲ್ಪಡದೆ ಶಾಶ್ವತವಾಗಿ ನಿಲ್ಲುವಂತೆ ಬಲ್ಲೇ ಭದ್ರವಾದ ಅಸ್ತಿವಾರದ ಮೇಲೆ ಸ್ಥಾಪಿಸಲ್ಪಟ್ಟಿರುವದು.

ಕರ್ತವ್ಯಪರಾಙ್ಮುಖನಾದ ಅರ್ಜುನನಿಗೆ ಶ್ರೀಕೃಷ್ಣನು ಯಾವ ಉಪದೇಶ ಮಾಡಿ ಅವನನ್ನು ಕರ್ತವ್ಯದಲ್ಲಿ ತೊಡಗಿಸಿದನೋ ಅಂತಹ ನಮ್ಮ ಧರ್ಮ-ನಮ್ಮ ವೇದಾಂತ-ನಮ್ಮ ಭಕ್ತಿಮಾರ್ಗಗಳಲ್ಲಿ ಜನರಿಗೆ ಆಲಸ್ಯವನ್ನೂ ದುರ್ಬಲತನವನ್ನೂ ಅವನತಿಯನ್ನೂ ಹುಟ್ಟಿಸುವ ಗುಣಗಳಿವೆ, ಎಂದು ಹೇಳುವದು ಮೂಢತನವೇ ಸರಿ.

ಆತ್ಮದ ಶೋಧವಾಗುವವರೆಗೂ ಆತ್ಮಜ್ಞಾನವಾಗಲಾರದು. ಆತ್ಮ ಜ್ಞಾನವಾಗದಿದ್ದರೆ ಆತ್ಮೋದ್ಧಾರವಾಗುವ ಬಗೆ ಹ್ಯಾಗೆ? ಈ ಪ್ರಕಾರ ಅಧ್ಯಾತ್ಮಶಾಸ್ತ್ರದ ಸಿದ್ಧಾಂತವಿರುವದು. ಇದು ಸಮಾಜದ ಉದ್ಧಾರಕ್ಕಾದರೂ ಸಂಬಂಧಿಸುವದು. ಆತ್ಮದ ಶೋಧ ಮಾಡದಿದ್ದರೆ ಆತ್ಮದ ದೋಷವಾದರೂ ಕಾಣುವದಿಲ್ಲ. ಆತ್ಮದ ದೋಷಗಳು ತಿಳಿಯದ ಮೇಲೆ ಅವುಗಳನ್ನು ತೆಗೆದುಹಾಕಿ ಆತ್ಮೋದ್ಧಾರ ಮಾಡುವ ಮಾರ್ಗವು ಹ್ಯಾಗೆ? ಈ ದೃಷ್ಟಿಯಿಂದ ಧರ್ಮಪ್ರಸಾರದ ಅವಶ್ಯಕತೆಯು ಎಷ್ಟಿರುವದೆಂಬದು ಎಲ್ಲರ ಲಕ್ಷದಲ್ಲಿ ಬರಬಹುದು. ಅಥವಾ ಅನೇಕ ವ್ಯಕ್ತಿಗಳು ಕೂಡಿ ಖಂಡು ಸಮಾಜವಾಗಿರುವದು. ಆದ್ದರಿಂದ ಪ್ರತ್ಯೇಕ ವ್ಯಕ್ತಿಗಳ ಶೀಲ-ಸ್ವಭಾವಗಳು ಸುಧಾರಿಸಿದ ಹೊರ್ತು ಸಮಾಜ ಸುಧಾರಿಸುವದು ಅಸಂಭವವೆ. ಆದಕಾರಣ ಎಲ್ಲಿಯವರೆಗೂ ಸಮಾಜದೊಳಗಿನ ಪ್ರತಿಯೊಂದು ವ್ಯಕ್ತಿಯು ಉತ್ತಮ ಸ್ವಭಾವದ್ದಾಗುವದಿಲ್ಲವೋ ಅಲ್ಲಿಯವರೆಗೂ ಸಮಾಜವು ಖಂಡಿತವಾಗಿ ಮೇಲಕ್ಕೆ ತಲೆಯೆತ್ತಲಾರದೆಂದು ಈ ಮೊದಲು ಹೇಳಿದ್ದೇವೆ.

(ಅಪೂರ್ಣ)

ವೈಷ್ಣವ್ರಪದಚೂಷಣಿ

ತೃತೀಯಾಂದುಕಾ.

ಹಿಂದಿನವೆರಡು ಪ್ರಕರಣಗಳಲ್ಲಿ ಸಾಮಾನ್ಯವಾಗಿ ಜೀವನ್ಮುಕ್ತನ ನಡೆ ಯೆನ್ನು ವರಾಮರ್ಶಿಸಿದರೆ ಜೀವನ್ಮುಕ್ತನು ಎಂದೂ ಯಥೇಷ್ಟ ಸಮಾಚಾರಿಯಾಗಸೆಂತಲೂ, ಬಾಯಜೊಮ್ಮನನಾಡುವವರು, ಮರುಳಲೆಮರಿಗೆ ತೋರಿಸುವ ಶಾಸ್ತ್ರವಚನಗಳು ಜ್ಞಾನಿಯಲ್ಲಿ ದುರ್ವರ್ತನೆಯನ್ನೊಡಂಬಡುವದಿಲ್ಲೆಂತಲೂ ಅವುಗಳ ಬಲವು ಸದಾಚಾರ ಪ್ರತಿಪಾದನೆಯಲ್ಲಿಯೇ ಇರುವದೆಂತೆಲೂ ಬಾಲರಿಗೂ ಹಸನಾಗುವಂತೆ ಹೇಳಿದೆವು. ಈಮುಂದೆ ನಮ್ಮ ಶ್ರೀವೈಷ್ಣವೀರಶೈವ ಧರ್ಮಸಿದ್ಧಾಂತ ಗ್ರಂಥಗಳ ಮೇಲಿಂದ ಪರಿಕಿಸಿದರೆ ಸ್ವಚ್ಛಂದಾಚಾರವು ಜ್ಞಾನಿಯಲ್ಲಿ ಎಳ್ಳಷ್ಟಾದರೂ ಸಮ್ಮನಿಸದೆಂದು ನೆಲೆಗೊಳಿಸುವೆವು. ಇದನ್ನೇ ಮೊದಲು ಮಾಡಿಬಿಟ್ಟಿದ್ದರೆ ತೀರುತ್ತಿತ್ತು, ನೂರಾರು ಪುಟಗಳನ್ನು ವ್ಯರ್ಥ ಬರೆದುಬೇತಕೆಂದು ಪ್ರಶ್ನವುಂಟಾಗಬಹುದು: ಈ ಪ್ರಶ್ನೆಯಹುದು. ಆದರೆ ಕಾಲವೈಚಿತ್ರ್ಯದಿಂದಲೂ, ವಾಙ್ಮಯಾಹುಲ್ಯದಿಂದಲೂ ಕೆಲಕೆಲವರು ನಮ್ಮ ಧರ್ಮಸಿದ್ಧಾಂತ ಗ್ರಂಥಗಳಿಗಿಂತ ಶ್ರೀಮಚ್ಛಂಕರಾಚಾರ್ಯಾದಿಗಳು ಬರೆದ ಗ್ರಂಥಗಳಲ್ಲಿ ವಿಶೇಷಾದರ ಬುದ್ಧಿಗಳುಳ್ಳವರಿರುವರು. ಅವರಿಗೆ ವೀರಶೈವ ಗ್ರಂಥಗಳೂ ಅವುಗಳಿಂದೊದಗುವ ಸಿದ್ಧಾಂತವೂ ಏಕದೇಶೀಯವಾಗಿ ತೋರುತ್ತವೆ. ಇಷ್ಟೇಯಲ್ಲ, ಅಜಾಂಡವಾಗಿ ವೀರಶೈವ ಧರ್ಮವನ್ನು ಪ್ರತಿಪಾದಿಸುವ ಶ್ರೀಮನ್ನಿಜಗುಣ ಶಿವಯೋಗಿಗಳ ಅಮೂಲ್ಯವಾದ ಗ್ರಂಥಗಳು ಏಕದೇಶವಾಗಿ ಸಿದ್ಧಾಂತದಲ್ಲಿ ಶ್ರೀಶಂಕರಾಚಾರ್ಯರ ಮತವನ್ನೆ ಅನುಕರಿಸುತ್ತವೆಂದೂ ಕೆಲವರು ತಿಳಿಯುವರು. ನಾವು ಸಾಮಾನ್ಯ ವಿವೇಚನಾಶಕ್ತಿಳ್ಳವಾದ ಹಿಂದಿನ ಪ್ರಕರಣಗಳಲ್ಲಿ ಶ್ರೀಮನ್ನಿಜಗುಣ ಶಿವಯೋಗಿಗಳ ಗ್ರಂಥಗಳ ವಿಚಾರವನ್ನು ಕೆಲವಂಶದಲ್ಲಿ ಮಾಡಿರುವದು ಇಂಥವರ ಪರಿವಾಟಗನುಸರಿಸಿಯೇ ಆಗಿರುತ್ತದೆ.

ಶ್ರೀಮದ್ವೀರಶೈವ ಧರ್ಮಸಿದ್ಧಾಂತಕ್ಕೆ ಪ್ರಮಾಣಭೂತವಾದ ಗ್ರಂಥ ಪಾವಲವಾವದು? ಅದರ ಸಿದ್ಧಾಂತವೇನು? ಎಂಬೀ ಪ್ರಶ್ನಗಳು ಸುಲಭೋತ್ತರವಾಗವುಗಳಲ್ಲ. ವೀರಶೈವ ಸಮಾಜದ ದುರ್ದೈವದಿಂದ ಉಳಿದ ಮತ ಸ್ಥರಂತೆ ಏತನ್ಮತ ಪ್ರತಿಷ್ಠಾಪಕರಾದ ಪೀಠಾಧಿಕಾರಿಗಳು ಈ ಧರ್ಮಸಿದ್ಧಾಂತವನ್ನು ಪ್ರಚಾರಗೊಳಿಸಲಿಲ್ಲ. ಅದ್ವೈತ ಮತಸ್ಥರಲ್ಲಿ ಶ್ರೀಶಂಕರಾಚಾರ್ಯರು ಆ ಮತವನ್ನು ನಿರ್ಮಲವನ್ನಾಗಿ ಮಾಡಿದ ಒಳಿಕ ಅನೇಕ ಗ್ರಂಥಕಾರರು ಹ್ಯಾಗೆ ಅವರು ಬರೆದರ್ಥವನ್ನೇ ಬಗೆಬಗೆಯಿಂದ ಅವಾಂತರ ಮತ ಭೇದಗಳಿಂದ ಪ್ರತಿಪಾದಿಸಿದರೊ ಹಾಗೆ ನಮ್ಮಲ್ಲಿ ಗ್ರಂಥಕಾರರಾಗಲಿಲ್ಲ. ಭಕ್ತಿವಂತರು ಬರೆದ ಕೆಲಕೆಲವು ಉತ್ತಮ ಗ್ರಂಥಗಳಿರುವವು. ಆದರೆ ಅವುಗಳಿಂದ ಫಾನಾರು? ಶಿವನಾರು? ಜಗವಿದೆಲ್ಲಿಂದ ಬಂದಿತು? ತಾನು ಸಂಸಾರ ಸಾಗರದಲ್ಲಿ ಹೇಗೆ ಬಂದೆನು? ಆದನ್ನು ದಾಟುವ ಬಗೆ ಏನು? ಮುಕ್ತಿ ಸ್ವರೂಪವಾವುದು? ಎಂಬೀ ಮೊದಲಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವು ದೊರೆಯುವದಿಲ್ಲ. ಆದರಿಂದಲೆ ಮೇಲೆ ವಿವರಿಸಿದ ಮೇರೆಗೆ ಹಲವರು ಪರಮತಸ್ಥರ ಸಿದ್ಧಾಂತವೇ ಸಾರ್ವತ್ರಿಕವೆಂದು ನಂಬಿಗೆಯುಳ್ಳವರಾಗಿರುವರು. ಹೀಗೆನ್ನುವದರಿಂದ ಭಕ್ತಿಪ್ರಧಾನವಾದ ವಚನಶಾಸ್ತ್ರಗಳು ನಿರರ್ಥಕವೆಂದು ನಮ್ಮ ಅಭಿವ್ರಾಯವಲ್ಲ. ಅವುಗಳಲ್ಲಿ ಶಿವಾನುಭವವೆ ಓತಪ್ರೋತವಾಗಿದೆ. ಕೇವಲ ಭಕ್ತಿಯನ್ನೇ ಅವಲಂಬಿಸುವ ಮತ್ತು ಅಂತಹ ಉತ್ಕೃಷ್ಟ ಭಕ್ತಿಯು ಪ್ರಾಪ್ತವಾಗಬಹುದಾದ ಕುದ್ಧಸಾತ್ವಿಕ ಜೀವರು ಅತ್ಯಂತ ವಿರಳ. ವಿಷಯ ವಿತೃಷ್ಣರಾಗಿ ಶಿವೈಕ ತಾನಮತಿಯುಳ್ಳ ಕೃತಾರ್ಥರು "ತಮೇವೈಕಂಜಾನೀಥ ಅನ್ಯಾವಾಚೋವಿಮುಂಚಥ" ಎಂಬ ಶ್ರುತಿವಚನಕ್ಕನುಸರಿಸಿ ಬಾಹ್ಯಜ್ಞೇಯಗಳನ್ನೆಲ್ಲ ನಿರಾಕರಿಸಿ ಶಿವನೊಬ್ಬನನ್ನೆ ತಿಳಿಯಲಪೇಕ್ಷಿಸುವರು. ಶಿವನು ಭಕ್ತ್ಯೈಕ ಗಮ್ಯನು. ಭಕ್ತಿಸಾರನು ಶಿವನುಭವಿಯಾಗುತ್ತಾನೆ. ಅದನ್ನು ತಿಳಿಯಬೇಕು ಇದನ್ನು ತಿಳಿಯಬೇಕೆಂಬ ಬುದ್ಧಿಯಿಂದ ಸುಖವ್ಯಾಪ್ತಿಯಾಗದು.

"ಜ್ಞಾನಾನಾಂ ಬಹುತಾಯೇಯಂ ಯೋಗ ವಿಘ್ನೈಕರೀಹಿಸಾ ॥
ಇದಂಜ್ಞೇಯಮಿಸಂ ಜ್ಞೇಯಮಿತಿಯಸ್ಯ ಮೃಷಿತಶ್ಚರೇತ್ ॥ ಅಪಿಕಲ್ಪ
ಸಹಸ್ರಾಯುಸ್ಸೈಃಜ್ಞೇಯಮವಾಪ್ನುಯಾತ್ ॥ ತ್ಯಕ್ತಸಂಗೋಜಿತ

ಕ್ರೋಧೋಲಬ್ಧಾಹಾರೋ ಜಿತೇಂದ್ರಿಯಃ ॥ ಪಿಧಾಯ ಬುದ್ಧ್ಯಾದ್ವಾರಾಣಿ ಮನೋಧ್ಯಾನೇ ನಿವೇಶಯೇತ್ ॥" ಸ್ಕಾಂದಮಾಹೇಶ್ವರಖಂಡ ಗತಕೌಮಾರಿಕಾಖಂಡ ಅಧ್ಯಾಯ ೫೫, ಶ್ಲೋಕ ೧೩೨, ೧೩೩.

ಆಯಾ ವಿಷಯ ಭೇದದಿಂದ ಬಹುತ್ವವನ್ನು ಹೊಂದಿದ ಜ್ಞಾನವು ಶಿವಯೋಗಕ್ಕೆ ತಡೆಯಾಗಿರುವದು. ಇದೊಂದು ಹೊಸತು, ಇದೊಂದು ಹೊಸತು, ಇದನ್ನೆರಿಯಬೇಕು, ಇದನ್ನೆರಿಯಬೇಕು ಎಂದು ಅವಾತನು ಜ್ಞಾನಲಂಪಟನಾಗಿ ತಿರುಗುವನೊ ಅವನಿಗೊಂದು ಸಹಸ್ರಕಲ್ಪ ಪರಿಮಿತವಾದ ಆಯುಸ್ಸಿದ್ದುದಾದರು ಜ್ಞೇಯ ಶಿವತ್ವದ ಅರವು ಉಂಟಾಗದು. ಅದರಿಂದ ವಿಷಯಗಳಲ್ಲಿ ಉಪಭೋಗಸಂಗವನ್ನು ಮತ್ತು ಜ್ಞಾತೃತಾಸಂಗವನ್ನೂ ಬಿಟ್ಟು ಕ್ರೋಧಾದಿ ಷಡ್ವರ್ಗವ ವಿೂರಿ ಧರ್ಮದಿಂದ ದೊರಕಿಸಿದ ಆಹಾರವುಳ್ಳವನಾಗಿ ಇಂದ್ರಿಯಗಳ ಕೈಗೆ ಸಿಲುಕದೆ ಬುದ್ಧಿಯ ದ್ವಾರಗಳಾದ ಚಕ್ಷುರಾದಿ ಜ್ಞಾನೇಂದ್ರಿಯಗಳನ್ನು ವಿಷಯ ವರಾಙ್ಮುಖವಾಗಿ ಮಾಡಿ ಮನಸ್ಸನ್ನು ಧ್ಯಾನದಲ್ಲಿ ನಿಲ್ಲಿಸಬೇಕು. ಹೀಗಿದ್ದರೂ ಅನೇಕ ಜನ್ಮಪರಂಪರೆಗಳಲ್ಲಿ ದಟ್ಟವಾಗಿ ಆಂತಃಕರಣದಲ್ಲಿ ವ್ಯಾಪ್ತವಾದ ವಾಸನಾ ವೈಚಿತ್ರ್ಯವು ವಿಲಕ್ಷಣವಾಗಿರುವದರಿಂದ ವಿಷಯೋಹಾಪೋಹ ರೂಪ ವಿವಮಾಂಸಾ ಗ್ರಂಥಗಳು ಅವಶ್ಯವಾಗಿ ಬೇಕಾಗಿರುವವು. ಅಂತಹ ಗ್ರಂಥಗಳು ನಮ್ಮಲ್ಲಿ ವಿರಳ. ಇರವಿ. ಉಪಲಬ್ಧವಾದ ಗ್ರಂಥಗಳಿಂದಲೆ ನಮ್ಮ ಸಿದ್ಧಾಂತಕ್ಕೆ ಪ್ರಮಾಣವಾವುದೆಂದು ವಿಚಾರಿಸುವ.

ಪರಮಾಪ್ತಾಯತಿರೋರಹಸ್ಯಗದಿತಂ ವೈವಾಗಮಾಂ ತೋದಿತಮೆಂ । ಗುರುಮಾರ್ಗಾಗತ ಮುತ್ತಮೋತ್ತಮತರಂ ಕೈವಲ್ಯಶಾಲ್ಮದ್ರುಮಂ ॥ ದುರಿತಾರಣ್ಯದವಾನಲಂ ಶಿವಕೃಪಾಂಭೋ ಪೂರಧಾರಾಧರಂ । ಹರಸಿಷ್ಯಾನಿಧಿ ವೀರಶೈವಸಮಯಂ ಬೆಚ್ಚಿರ್ಕೆ ವೆಚ್ಚಿತ್ತದೊಳ್ ॥

ಎಂಬ ಮುಂತಾದ ವಚನಗಳಿಂದ ವೇದಶಿರಸ್ಸುಗಳೆನಿಸುವ ಉಪನಿಷತ್ತುಗಳೂ, ಅಷ್ಟಾವಿಂಶತಿ ಶಿವಾಗಮಗಳೂ ಮೂಲ ಪ್ರಮಾಣಗಳಾಗಿರುವವು. ತದರ್ಥವನ್ನೇ ಸ್ಮರಿಸಿ ಹೇಳುವ ಪುರಾಣಗಳು ಅವಿರುದ್ಧಾಂಶದಲ್ಲಿ ಪ್ರಮಾಣವಾಗಿವೆ. ಕೆಲವರು ಆಗಮಗಳ ಪ್ರಾಮಾಣ್ಯದಲ್ಲಿ ಅಸೂಯಾಭಾವವನ್ನು ಹೊಂದುತ್ತಾರೆ. ಸಂಖ್ಯಂಧಾನುಪಪತ್ತೇಃ — ಸಾಂಖ್ಯಮತದಲ್ಲಿ ಈ ಜಗತ್ತಿಗೆ

ಸತ್ವರಜಸ್ತಮೋಗುಣಗಳ ಸಾಮ್ಯಾವಸ್ಥೆಯುಳ್ಳ ಪ್ರಧಾನವು ಕಾರಣವು. ಅದು ಅಕಳುಂಡ ಹುಲ್ಲು ಹೇಗೆಯೊ ಹಾಗೆ ಚೇತನಾತ್ಮಕನಾದ ಪುರುಷನ ಭೋಗಕ್ಕಾಗಿಯೂ ಅಪವರ್ಗಕ್ಕಾಗಿಯೂ ತಾನೆಯೆ ಪ್ರವರ್ತಿಸುವದು. ಪುರುಷನು ಪ್ರಕೃತಿಯಿಂದ ತನ್ನ ಭೇದವನ್ನರಿತರೆ ಅಸಂಗೋದಾಸೀನ ಜ್ಞಾನರೂಪನಾಗಿ ಉಳಿಯುವನು. ಇದೇ ಮತದ ಜಗತ್ತಿಗೆ ಬೀಜವು ಸ್ವತಂತ್ರವಾದ ಪ್ರಧಾನವೆಂಬ ತತ್ವವನ್ನೊಪ್ಪಿ ಅಚೇತನವಾದ ಪ್ರಧಾನವು ಜಗತ್ತನ್ನು ಹುಟ್ಟಿಸಲಿಕ್ಕೆ ಹೇಗೆ ಸಮರ್ಥವಾದೀತು. ಉದಾಸೀನನೂ ಅಸಂಗನೂ ಆದ ಪುರುಷನು ಹೇಗೆ ಪ್ರಧಾನವನ್ನು ಪ್ರವರ್ತಿಸಲಿಕ್ಕೆ ಹಚ್ಚಿಯಹನು. ಎಂಬ ಶಂಕಾಪರಿಹಾರಾರ್ಥವಾಗಿ ಕೆಲವು ವೈದಿಕರು ಈಶ್ವರನನ್ನು ಒಡಂಬಡಿಸುತ್ತಾರೆ. ಮತ್ತು ಆ ಈಶ್ವರನು ಜಗತ್ತಿಗೆ ಕೇವಲ ನಿಮಿತ್ತಕಾರಣನಾಗಿರುವನೆಂದು ಪ್ರತಿವಾದಿಸುತ್ತಾರೆ. ಈಶ್ವರನು ಕೇವಲ ನಿಮಿತ್ತಕಾರಣನೆಂಬೀವಾದವನ್ನು ನಿರಾಕರಿಸುವದಕ್ಕಾಗಿ ಸಂಬಂಧಾನುಪಪತ್ತೇಃ ಮೊದಲಾದ ಸೂತ್ರಜಾತವಿರುವನು. ಈ ಸೂತ್ರದ ತಾತ್ಪರ್ಯವೇನೆಂದರೆ, ಪ್ರಧಾನ ಪುರುಷರಿಂದ ವ್ಯತಿರಿಕ್ತನಾದ ಈಶ್ವರನು ಪ್ರಧಾನ ಪುರುಷರನ್ನು ಸಂಬಂಧವಿಲ್ಲದೆ ನಿಯಮಿಸಲಾರನು. ಪ್ರಧಾನ ಪುರುಷೇಶ್ವರರು ಸರ್ವಗತರಾಗಿಯೂ ನಿರವಯವರಾಗಿಯೂ ಇರುವದರಿಂದ ಸಂಯೋಗ ಸಂಬಂಧವಿರಲಾರದು. ದ್ರವ್ಯವನ್ನಾಶ್ರಯಿಸಿದ ಗುಣಕ್ಕಾಗಿ ದ್ರವ್ಯಕ್ಕೂ ಸಮವಾಯ ಸಂಬಂಧವಿರುವಂತೆ ಪ್ರಧಾನಾದಿ ತ್ರಿತಯದಲ್ಲಿ ಸಮವಾಯ ಸಂಬಂಧವಿರಲಾರದು. ಏಕೆಂದರೆ ಆಕ್ರಯಾಶ್ರಯಿ-ಭಾವವನ್ನು ಹೇಳಬರುವದಿಲ್ಲ. ಅದರಿಂದ ಜಗತ್ತಿಗೆ ನಿಯಮ ಕಾರಣನೆಂದೊಪ್ಪುವ ಈಶ್ವರನಿಗೂ ನಿಯಮ್ಯರಾದ ಪ್ರಧಾನ ಪುರುಷರಿಗೂ ಸಂಬಂಧವಾವದೂ ಸಂಗತವಾಗದಿರಲಿಂದ ಕೇವಲ ನಿಮಿತ್ತೇಶ್ವರ ಕಾರಣವಾದವು ಘಟಿಸದು. ಪ್ರಕೃತ ಸೂತ್ರಕ್ಕೆ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು ಆಗ್ರಹಗಳು ಅಪ್ರಮಾಣವೆಂದು ಅಭಿಪ್ರಾಯವನ್ನು ವ್ಯಕ್ತಗೊಳಿಸಿರುತ್ತಾರೆ. ಹೇಗೆಂದರೆ—"ಬ್ರಹ್ಮವು ನಿಮಿತ್ತೋಪಾದಾನ-ಕಾರಣವೆಂದು ಅಭ್ಯುಪೆತವಾದಿಯು ಪ್ರತಿಪಾದಿಸುವಲ್ಲಿ ಶ್ರುತಿಯ ಪ್ರಾಮಾಣ್ಯದಿಂದ ಕಾರಣಾದಿ ಸ್ವರೂಪ ನಿರೂಪಣೆಯು ದೃಷ್ಟಬಲದಿಂದಲೇ ಆಗಬೇಕೆಂಬ ನಿಯಮವಿಲ್ಲ. ಆದರೆ ನಿಮಿತ್ತೇಶ್ವರ ಕಾರಣವಾದಿಯನ್ನು ದೃಷ್ಟಬಲದಿಂದ ಕಾರಣಾದಿಯನ್ನು ನಿರೂಪಿ

ನುವದರಿಂದ ದೃಷ್ಟವಿರೋಧವಾಗಿ ಯಾವದನ್ನೂ ಹೇಳಲಾಗದು. ಪರನಿಗಾ ದರೂ (ಶೈವನಿಗೆ) ಶಿವಪ್ರಣೀತವಾದ ಆಗಮಗಳ ಬಲವಿರುವದರಿಂದ ಆ ವನಿಗೂ ದೃಷ್ಟಾಂತಗಳ ಅವೇಕ್ಷೆಯಿಲ್ಲೆಂದರೆ ಆಗದು. ಏಕೆಂದರೆ ಆಗಮ ಪ್ರಾಮಾಣ್ಯಕ್ಕಾಗಿ ಪರಮೇಶ್ವರನ ಸರ್ವಜ್ಞತೆಯನ್ನೊಪ್ಪಬೇಕು. "ಪರಮೇ ಶ್ವರನ ಸರ್ವಜ್ಞತ್ವ ಸಿದ್ಧಿಗಾಗಿ ಆಗಮ ಪ್ರಾಮಾಣ್ಯವನ್ನಂಗೀಕರಿಸಬೇಕ್ಕು. ಅದರಿಂದ ಆಗಮಗಳು ಪ್ರಮಾಣವಲ್ಲ." ಎಂದು ಅಂದಿರುವರು.

"ಇದಲ್ಲದೆ ಶ್ರುತಿಪಥಗಲಿತಾನಾಂ ಮಾನುಷಾಣಾಂತು ತಂತ್ರಮ್ |
ಗುರುಗುರುರಖಿಲೇಶಃ ಸರ್ವವಿತ್ಪ್ರಾಹಶಂಭುಃ ॥ ಶ್ರುತಿಪಥನಿರತಾ
ನಾಂ ತತ್ರನೈವಾಸ್ತಿಂಚಿ । ದ್ಧಿತಕರಮಿಹಸರ್ವಂ ಪುಷ್ಕಲಂ ಸತ್ಯ
ಮುಕ್ತಮ್ ॥ ಶ್ರುತಿರಪಿಮುನಿಜಾನಾಂ ವರ್ಣಧರ್ಮಂಬಭಾಷೇ |
ಪರಗುರುರಖಿಲೇಶಃ ವ್ಯಾಹೆತಂತ್ರೇಷುತದ್ವತ್ ॥ ಶ್ರುತಿಪಥಗಲಿತಾ
ನಾಂ ವರ್ಣಧರ್ಮಂ ಧೈಷ್ಣಾಬ್ಧಿಃ ಶ್ರುತಿಪಥನಿರತಾನಾಂ ನೈವತತ್ಸೇವ
ನೀಯಮ್ ॥ ಶ್ರುತಿಪಥನಿರತಾನಾಮಾಶ್ರಮಾಯದ್ವದುಕ್ತಾಃ । ಪರಗು
ರುರಖಿಲೇಶಸ್ತದ್ವದಾಹಾಶ್ರಮಾಂಶ್ಚ ॥ ಶ್ರುತಿಪಥಗಲಿತಾನಾಂ ಮಾನು
ಷಾಣಾಂತುತಂತ್ರಂ । ಹರಿರಪಿಮುನಿಮುಖ್ಯಃ ವ್ಯಾಹತಂತ್ರೇಷ್ವಕೀ
ಯೇ ॥ ವಿಧಿರಪಿಮುನಿಜಾನಾಮಾಹವರ್ಣಾಶ್ರಮಾಂಶ್ಚ । ಶ್ರುತಿಪಥಗ
ಲಿತಾನಾಮೇನತಂತ್ರೇಷ್ವಕೀಯೇ ॥ ಶ್ರುತಿಪಥನಿರತಾನಾಂ ತೇನಸಂ
ಸೇವನೀಯಾಃ । ಶ್ರುತಿಪಥಸೇವಮಾಗೋನೈನಸತ್ಯಂ ಮಯೋಕ್ತ
ಮ್ ॥ ಹರಿಹರವಿಧಿಪೂಜಾಕೀರ್ತಿತಾಸರ್ವತಂತ್ರೇ । ಶ್ರುತಿಪಥನಿರ
ತಾನಾಂ ಯದ್ವದುಕ್ತಾತುಪೂಜಾ ॥ ಶ್ರುತಿಪಥಗಲಿತಾನಾಮೇವ ತಂ
ತ್ರೋಕ್ತಪೂಜಾ । ಶ್ರುತಿಪಥನಿರತಾನಾಂ ಸರ್ವವೇದೋದಿತೈವ ॥
ಶ್ರುತಿಪಥಗಲಿತಾನಾಂ ಸರ್ವತಂತ್ರೇಷುಲಿಂಗಂ । ಕಥಿತಮಖಿಲದುಃಖ
ಧ್ವಂಸಕಂತತ್ರತತ್ರ ॥ ಶ್ರುತಿಪಥನಿರತಾನಾಂ ತತ್ಸದಾನೈನಧಾರ್ಯಂ ।
ಶ್ರುತಿರಪಿಮುನಿಜಾನಾಮಾಹಲಿಂಗಂವಿಶುದ್ಧಮ್ ॥ ಸೂತಸಂಹಿತಾ
ಯಜ್ಞವೈಭವಖಂಡೇ ೨೫, ೨೬, ೨೭, ೨೯, ೩೯, ೪೦ ಶ್ಲೋಕಗಳು.

ಗುರುಗಳಿಗೂ ಆದಿಗುರುವಾದ ಸರ್ವಜ್ಞನಪ್ಪ ಶಂಭುವು ವೇದಮಾರ್ಗಭ್ರಷ್ಟ ರಾದ ಮನುಷ್ಯರಿಗಾಗಿ ತಂತ್ರಗಳನ್ನು ಹೇಳಿದನು. ವೇದಮಾರ್ಗದಲ್ಲಿ ನಿರ

ತರಾದವರಿಗೆ ಆ ತಂತ್ರದಲ್ಲಿ ಶ್ರೇಷ್ಠಸ್ಥರವಾದುದೇನೂ ಇರುವುದಿಲ್ಲ. ಅತಿ ಸತ್ಯವಾದುದೆ ಇಲ್ಲಿ ಹೇಳಲ್ಪಟ್ಟಿತು. ಅಖಿಲೇಶ್ವರನಾದ ಪರಮಗುರುವು ಶ್ರುತಿಯಿಂತು ವರ್ಣಧರ್ಮಂಗಳನ್ನು ಹೇಳಿರುವುದೊ ಅಂತೆಯೇ ತಂತ್ರಂಗಳಲ್ಲಿ ಈಶ್ವರನಿಧಿಯಾದ ಶಂಭುವು ವೇದಪಥಗಲಿತರಿಗೆ ವರ್ಣಧರ್ಮಗಳನ್ನು ಹೇಳಿರುವನು. ವೇದನಿಷ್ಠರು ಅವುಗಳನ್ನು ಸೇವಿಸಲಾಗದು. ವೇದನಿಷ್ಠರಿಗೆ ಹೇಗೆ ಆಶ್ರಮ ಧರ್ಮಂಗಳುಕ್ತವಾಗಿವೆಯೊ ಹಾಗೆಯೆ ವೇದಭ್ರಷ್ಟರಿಗೆ ಪರಶಿವನು ಆಶ್ರಮಧರ್ಮಂಗಳನ್ನು ಪ್ರತಿಪಾದಿಸಿರುವನು. ಎಲ್ಲೆ ಮುನಿವರ್ಯರೆ, ವಿಷ್ಣುವಾದರೂ ತನ್ನ ತಂತ್ರಗಳಲ್ಲಿ ವೇದಭ್ರಷ್ಟರಿಗೆ ತಂತ್ರವೆಂದು ಹೇಳಿರುವನು. ಬ್ರಹ್ಮನಾದರೂ ತನ್ನ ತಂತ್ರದಲ್ಲಿ ವೇದಚ್ಯುತರಿಗಾಗಿ ಆಶ್ರಮಧರ್ಮಗಳನ್ನೂ ವರ್ಣಧರ್ಮಗಳನ್ನೂ ಹೇಳಿರುವನು. ವೇದ ರತರವನ್ನು ಅನುಸರಿಸಲಾಗದು. ವೇದಕ್ಕೆ ಸಮಾನವಾದ ಮತ್ತೊಂದು ಮಾರ್ಗವಿಲ್ಲ. ನನ್ನಿಂದ ಸತ್ಯವೇ ನುಡಿಯಲ್ಪಟ್ಟಿದು. ವೇದರತರಿಗಾಗಿ ಹರಿಹರ ಪೂಜೆಯು ಹೇಗೆ ವಿನರಿಸಲ್ಪಟ್ಟಿದೆಯೊ ಹಾಗೆಯೆ ತಂತ್ರದಲ್ಲಿ ವೇದಬಾಹ್ಯರಿಗಾಗಿ ತಂತ್ರದಲ್ಲಿ ಪೂಜಾವಿಧಿಯು ನಿರೂಪಿಸಲಾಗಿದೆ. ವೇದಮಾರ್ಗನಿಷ್ಠರಿಗೆ ವೇದೋಕ್ತ ಪೂಜೆಯೆ ಗ್ರಾಹ್ಯವಾಗಿರುವುದು. ತಂತ್ರನಿಷ್ಠರಿಗೆ ಸುಖಪ್ರದವಾದ ಊರ್ಧ್ವ ಚಿಹ್ನಗಳು ವಿವರಿಸಿಯವೆ. ಅವನ್ನು ವೇದನಿಷ್ಠರು ಧರಿಸಲಾಗದು. ವೇದವಾದರೂ ಮನುಷ್ಯರಿಗೆ ಪವಿತ್ರವಾದ ಚಿಹ್ನಗಳನ್ನು ಗೊತ್ತುಪಡಿಸಿರುವದು.

ಶ್ರುತಿಭ್ರಷ್ಟಃ ಶ್ರುತಿಪ್ರೋಕ್ತ ಪ್ರಾಯಶ್ಚಿತ್ತೇ ಭಯಂಗತಃ । ಶ್ರವೇ-
ಣಶ್ರುತಿಸಿದ್ಧ್ಯರ್ಥಂ ಮನುಷ್ಯಸ್ತಂತ್ರಮಾಶ್ರಯೇತ್ ॥

ಕೂರ್ಮಪುರಾಣ–ವೇದಮಾರ್ಗಭ್ರಷ್ಟನಾಗಿ ತನ್ನಿವಾರಣಾರ್ಥವಾಗಿ ವೇದದಲ್ಲಿ ಹೇಳಲ್ಪಟ್ಟ ಪ್ರಾಯಶ್ಚಿತ್ತಂಗಳನ್ನು ಮಾಡಲಾರದವನು ಶ್ರವಣವಾಗಿ ತನಗೆ ಶ್ರುತಿಮಾರ್ಗವು ಲಭಿಸಬೇಕೆಂದು ತಂತ್ರವನ್ನು ಆಶ್ರಯಿಸತಕ್ಕದು.

ಶೈವಾಃ ವಾಶುಪತಾಶ್ಚಾನ್ಯೇ ವಾಂಚರಾಸ್ತಾಸ್ತಥಾವರೇ ॥ ತಥಾನ್ಯೇಚ
ದುರಾತ್ಮಾನಃ ಸರ್ವೇವ್ಯಸುರದೈವತಾಃ ॥ ಪಾಶಬ್ದೇನತ್ರಯೀ ಧರ್ಮೇ-
ಜಗತಾಂ ರಕ್ಷಣಾತ್ಸ್ಮೃತಃ ಪಾಪಂ ಖಂಡಯಂತಿ ಯಸ್ಮಾತ್ತೇಪಾಷಂಡಾ
ಸ್ತೇನಹೇತುನಾ ॥

ಶೈವರೂ ಪಾಶುಪತರೂ ಮತ್ತು ಪಾಂಚರಾತ್ರರೂ ಇನ್ನುಳಿದ ದುರಾತ್ಮರಾದ ಅಸುರದೇವತಾಪೂಜಕರೂ ಇವರೆಲ್ಲರೂ ಪಾಷಂಡರು. ಯಾಕೆಂದರೆ ಪಾ, ಶಬ್ದದಿಂದ ಲೋಕಗಳನ್ನು ಪಾಲಿಸುವ ವೇದಧರ್ಮವು ಹೇಳಲ್ಪಡುತ್ತದೆ. ಆ ವೇದಧರ್ಮವನ್ನು ಖಂಡಿಸುವರಾದುದರಿಂದ ಇವರಿಗೆ ಪಾಂಪಷಂಡರೆಂದೂ ಪಾಖಂಡರೆಂದೂ ಹೆಸರು. ಇವ್ವೇ ಮೊದಲಾದ ಶಿವಾಗಮಂಗಳಿಗೆ ಅಪ್ರಾಮಾಣ್ಯವನ್ನಾಚರಿಸುವ ವಚನಗಳು ವಿಶೇಷವಾಗಿ ಉಪಲಭಿಸುತ್ತಿವೆ. ಇವುಗಳಿಗೆ ಸದುತ್ತರವನ್ನಿತ್ತು ನಿರಾಕರಿಸಿದಲ್ಲದೆ ಆಗಮಂಗಳು ಪ್ರಮಾಣಭೂತವೆಂಬುದು ಸಿದ್ಧಿಸದು. ಆದರಿಂದ ಈ ವಾಕ್ಯಗಳನ್ನು ಮೊದಲು ನಿರಾಕರಿಸುವೆವು. ಶಾಂಕರಭಾಷ್ಯ ವಚನವನ್ನು ಮೊದಲು ವಿಚಾರಿಸುವ. ಈ ವಚನದಲ್ಲಿ ಶ್ರೀ ಶಂಕರಾಚಾರ್ಯರು ಆಗಮಂಗಳಿಗೆ ಅಪ್ರಾಮಾಣ್ಯಾಪತ್ತಿಯನ್ನು ಅವು ಜಗತ್ತಿಗೆ ಬ್ರಹ್ಮಭಿನ್ನವಾದುವಿದಾನ ಕಾರಣವನ್ನು ಹೇಳುವುದರಿಂದ ಉಪನಿಷತ್ಪ್ರತಿವಾಕ್ಯವಾದ ಬ್ರಹ್ಮೋಪಾದಾನ ನಿಮಿತ್ತ ಕರ್ತೃತ್ವಸಿದ್ಧಾಂತಕ್ಕೂ ಇವುಗಳಿಗೂ ಇರುವ ವಿರೋಧಮೂಲವಾಗಿ ಸಾಧಿಸುತ್ತಾರೆ. ಇದಕ್ಕೆ ಅನೇಕೊತ್ತರಮುಂಟು. ಉಪನಿಷತ್ತುಗಳು ಬ್ರಹ್ಮಭಿನ್ನೋಪಾದಾನ ಕಾರಣವನ್ನು ಪ್ರತಿವಾದಿಸುತ್ತವೆಂದು ಎಲ್ಲ ವೇದಾಂತವಾದಿಗಳೊಪ್ಪುವದಿಲ್ಲ. ಮಾಧ್ವರು ಜಗದೀಶಭೇದ, ಜಗಜ್ಜೀವಭೇದ, ಜೀವೇಶಭೇದ, ಜೀವಜೀವಭೇದ, ಜೀವಜಡಭೇದ, ಜಡಜಡಭೇದವೆಂಬ ಪಡ್ಭೇದವನ್ನು ಉಪನಿಷದ್ವಾಕ್ಯಂಗಳಿಂದಲೇ ಸಾಧಿಸಲೆಣಿಸುತ್ತಾರೆ. ಗೌತಮ ಮಹರ್ಷಿಯು ಮಹಾವೈದಿಕನು. ಆತನು ಅಣುಗಳಿಂದ ಜಗದುತ್ಪತ್ತಿಯನ್ನು ಪ್ರತಿವಾದಿಸಿ ಈಶ್ವರನು ಕೇವಲ ನಿಮಿತ್ತಕಾರಣನೆಂದು ಹೇಳುವನು. ಆದರಿಂದ ಉಪನಿಷತ್ತುಗಳು ಜಗತ್ತು ಬ್ರಹ್ಮೋಪಾದಾನಕವೆಂದು ಸಿದ್ಧಾಂತಗೊಳಿಸುತ್ತವೆಂದು ತನ್ನ ಅಭಿಪ್ರಾಯಕ್ಕೆ ವಿರುದ್ಧವಾಗಿ ಆಗಮಗಳು ಸಾಧಿಸುತ್ತವೆಂದು ಶಂಕರಾಚಾರ್ಯರಿಗೆ ತೋರಿದಲ್ಲಿ ಅವರು ತಮ್ಮ ಅಭಿಪ್ರಾಯವನ್ನೇ ತಿದ್ದಬೇಕಿತ್ತು. ಹಾಗೆ ಮಾಡದೆ ಆಗಮಂಗಳೇ ಅಪ್ರಮಾಣವೆಂಬುದು ಯುಕ್ತಿವಿರೋಧವಾಗಿದೆ. ಇದಲ್ಲದೆ ಆಗಮಗಳು ಸರ್ವಜ್ಞನಾದ ಪರಮೇಶ್ವರನಿಂದುಕ್ತವಾಗಿರುವುದರಿಂದ ಅವು ಪ್ರಮಾಣಭೂತವೆಂತಲೂ, ಆಗಮಗಳಿಂದ ಪರಮೇಶ್ವರನು ಸರ್ವಜ್ಞನೆಂತಲೂ ಸಾಧಿಸುವುದು ಅನ್ಯೋನ್ಯಾಶ್ರಯ ದೋಷಕ್ಕೆ ಅಸ್ಪದ

ವೆಂದು ಶಂಕರಾಚಾರ್ಯರು ಹೇಳುವುದು ವೇದಗಳಿಗೂ ಹತ್ತುತ್ತದೆ. ಹ್ಯಾಗೆಂದರೆ, "ಶಾಸ್ತ್ರಯೋನಿತ್ವಾತ್" ಎಂಬ ಸೂತ್ರದಿಂದ ವೇದವ್ಯಾಸ ಮಹರ್ಷಿಗಳು ಶಿವನು ವೇದಕರ್ತೃವೆಂದು ಪ್ರತಿಪಾದಿಸುತ್ತಾರೆ. ಅದಕ್ಕೆ ಶಂಕರಾಚಾರ್ಯರ ಭಾಷ್ಯವು—

ಮಹತ ಋಗ್ವೇದಾದೇಃ ಶಾಸ್ತ್ರಸ್ಯಾನೇಕ ವಿದ್ಯಾಸ್ಥಾನೋಪಬೃಂಹಿತಸ್ಯ ಪ್ರದೀಪವತ್ಸರ್ವಾರ್ಥಾವದ್ಯೋತಿನಃ ಸರ್ವಜ್ಞ ಕಲ್ಪಸ್ಯಯೋನಿಃ ಕಾರಣಂ ಬ್ರಹ್ಮ ನಸೋನೃಕಸ್ಯಶಾಸ್ತ್ರಸ್ಯರ್ಗ್ವೇದಾದಿ ಲಕ್ಷಣಸ್ಯ ಸರ್ವಜ್ಞ ಗುಣಾನ್ವಿತಸ್ಯ ಸರ್ವಜ್ಞೋದನ್ಯತಃ ಸಂಭವೋನಾಸ್ತಿ. ಯದನ್ಯದ್ವಿಸ್ತರಾರ್ಥಂ ಶಾಸ್ತ್ರಂ ಯಸ್ಮಾತ್ಪುರಾಪಿ ವಿಶೇಷಾತ್ಸಂಭವತಿ ಯಃಫಾವ್ಯಾಕರಣಾದಿ ವಾಙ್ಮಯಾದೇರ್ಜ್ಞಾನೈಕ ದೇಶಾರ್ಥಮಿತಿ ಸತೋಽಪ್ಯಧಿಕತರ ವಿಜ್ಞಾನ ಇತಿಪ್ರಸಿದ್ಧಂ ಲೋಕೇ. ಕಿಮುವಕ್ತವ್ಯ ಮನೇಕ ಶಾಖಾ ಭೇದ ಭಿನ್ನಸ್ಯ ದೇವತಿರ್ಯಙ್ಮನುಷ್ಯವರ್ಣಾಶ್ರಮಾದಿ ಪ್ರವಿಭಾಗಹೇತೋ ರೃಗ್ವೇದಾದ್ಯಾಖ್ಯಸ್ಯ ಸರ್ವಜ್ಞಾನಾಕರಸ್ಯಾ ಪ್ರಯತ್ನೇನೈವ ಕೇವಲಾನ್ಯಾಯೇನ ಪುರುಷನಿಶ್ವಸಿತವೇದಸ್ಯಾನ್ಮಹತೋ ಭೂತಾದ್ಯೋನೇಃ ಸಂಭವಃ "ಅಸ್ಯಮಹತೋ ಭೂತಸ್ಯ ನಿಶ್ವಸಿತಮೇತದ್ಯದೃಗ್ವೇದ" ಇತ್ಯಾದಿ ಬೃಹದಾರಣ್ಯಕೋಪನಿಷದ್ವಚನೇನೇತಸ್ಯ ಮಹತೋಭೂತಸ್ಯ ನಿರತಿಶಯಂ ಸರ್ವಜ್ಞತ್ವಂ ಸರ್ವಶಕ್ತಿಮತ್ವಂಚೇತಿ.

"ಜನ್ಮಾದ್ಯಸ್ಯಯತಃ" ಎಂಬ ಹಿಂದಿನ ಸೂತ್ರದಲ್ಲಿ ಸರ್ವಕಾರಣತ್ವವೆರಿಬುದ್ದು ಬ್ರಹ್ಮಲಕ್ಷಣವೆಂದು ನಿರೂಪಿಸಲ್ಪಟ್ಟಿತು. ಅದರೆ ಸಾಂಖ್ಯಾದಿಮತ ಕರ್ತೃಗಳಾದ ಕಪಿಲಾದಿ ಮಹರ್ಷಿಗಳು ಪ್ರಧಾನಾದಿಯೊಂದೇ ಸರ್ವಕಾರಣವೆಂದು ಹೇಳುತ್ತಾರಲ್ಲ. ಅವಾಂಖ್ಯಾದಿಗಳಿಂದ ಜಗತ್ಕಾರಣವೆಂದೂ ಹೇಳಲ್ಪಟ್ಟ ಪ್ರಧಾನಾದಿಗೂ ನೀನು ಹೇಳುವ ಬ್ರಹ್ಮಕ್ಕೂ ವಿಲಕ್ಷಣತ್ವವೇನೂ? ಎಂದರೆ ಬ್ರಹ್ಮವು ಸರ್ವಜ್ಞವಿರುವದರಿಂದ ಸಾಂಖ್ಯಾದಿಗಳು ಒಪ್ಪುವ ಅಚೇತನ ಪ್ರಧಾನಾದಿಗಳಿಗೆ ಭಿನ್ನವಾದುದೆಂದು ಆರ್ಥಿಕವಾಗಿ ಹೇಳಲ್ಪಟ್ಟಿತು. ಅದನ್ನೇ ಶಾಸ್ತ್ರಯೋನಿತ್ವಾತ್ ಸೂತ್ರದಿಂದ ಇಲ್ಲಿ ದೃಢೀಕರಿಸುತ್ತಾನೆ:— ಋಗ್ವೇದ ಮೊದಲಾದ ಶಾಸ್ತ್ರವು ಧರ್ಮವಿಷಯವನ್ನೆಲ್ಲ ದೀಪವು ನಿಖಿಲವನ್ನು ಪ

ತ್ತೇನೆ. ಈ ಅಫೀಮಿನ ಅಭ್ಯಾಸದಿಂದಲೇ ನಾನು ಈವರೆಗೆ ಜೀವಾಹಿಡ್ಕೊಂಡಿದ್ದೇನೆ. ಅಫೀಮಿನ ವ್ಯಸನವು ನನಗಿಲ್ಲದಿದ್ದರೆ, ನಾನು ಯಾವಾಗ್ಲೋ ಸ್ಲತ್ತು ಹೋಗಿ, ಸ್ವರ್ಗದಲ್ಲಿರುವ ನನ್ನ ಪೂರ್ವಜರನ್ನು ಕೂಡಿಕೊಂಡು ಸುಖದಿಂದಿರುತ್ತಿದ್ದೆನು. ಯಾವ ದಿವಸ ನಮ್ಮ ರಾಜ್ಯವು ವರವಶವಾಯಿತೋ ಆ ದಿನಸವೇ ನಾನು ಅನಾಥನಾದೆನು. ನನ್ನ ಮೈಮೇಲಿದ್ದ ಅಲಂಕಾರಗಳೆಲ್ಲ ಹೋದವು. ನನ್ನನ್ನು ಕೇಳುನವರು ಯಾರೂ ಇಲ್ಲದಂತಾಯಿತು! ಶಿನ! ಶಿನ! ಏನು ಮಾಡಬೇಕು? ದೈವಗತಿಯು ವಿಚಿತ್ರವಾದದ್ದು!! ದೇವರ ಕೃತಿಯು ಅಗಾಧವಾದದ್ದು!!! ಈಶ್ವರೀ ಸೂತ್ರದಂತೆ ಎಲ್ಲವೂ ಆಗಲಿಕ್ಕೇಬೇಕು. ಬಂದದ್ದನ್ನು ಅನುಭವಿಸಲಿಕ್ಕೆ ಒಲ್ಲೆಂದರೆ ಹೇಗೆ ನಡದೀತು? ಶ್ರೀಚಂದ್ರಮೌಳೀಶ್ವರನ ಪಾದದ್ವಯಗಳನ್ನು ಹಿಡಿದು, "ಹೇ ದೇವಾ!! ಯಾವ ವರೆಗೆ ನಮ್ಮ ರಾಜ್ಯವು ದುಷ್ಟಯವನರ ಕೈಯಲ್ಲಿರುವದೋ ಆವರೆಗೆ ನಾನು ನಿನ್ನ ಸೇವೆಯನ್ನು ಮಾಡುವೆನೆಂದು" ಪ್ರತಿಜ್ಞೆ ಮಾಡಿದೆನು.

ನನ್ನ ಪ್ರತಿಜ್ಞೆಯ ಪ್ರಕಾರ ಈಗ್ಯೂ ಅತನ ಸೇವೆಯನ್ನು ಮಾಡಹತ್ತಿದ್ದೇನೆ. ಆದರೆ ಆ ಕ್ರೂರ ಮುಸಲ್ಮಾನರ ಕೈಯೊಳಗಿಂದ ನಮ್ಮ ರಾಜ್ಯವು ಬರುವ ಲಕ್ಷಣವೇನೂ ಕಾಣಲೊಲ್ಲದು. ಏನು ಮಾಡಬೇಕು? ಈಶಸೇವೆಯನ್ನು ಬಿಟ್ಟರೆ ಪ್ರತಿಜ್ಞಾಭ್ರಷ್ಟನಾಗುವೆನು; ಬಿಡದಿದ್ದರೆ ನಮ್ಮ ರಾಜ್ಯವು ಆ ಪಾಷಾಣಹೃದಯ ಮುಸಲ್ಮಾನರ ವಶದಲ್ಲಿಯೇ ಉಳಿಯುವದು. ಇತ್ತ ಬಿದ್ದರೆ ಕೆರೆ, ಅತ್ತ ಬಿದ್ದರೆ ಬಾವಿ ಎಂಬಂತೆ ನನ್ನ ಸ್ಥಿತಿಯಾಗಿದೆ. ಒಮ್ಮೊಮ್ಮೆ ನನಗೆ ಈ ಜನ್ಮವೇ ಬೇಡಾಗುತ್ತದೆ. ಈಗ ನಾನು ಈಶಸೇವೆಯನ್ನು ಮಾಡಲಿಕ್ಕೆ ಹತ್ತಿ ಏಳು ವರ್ಷಗಳಾದವು. ಆದರೂ ನಮ್ಮ ರಾಜ್ಯವು ತಿರುಗಿ ಬರುವ ಚಿನ್ಹವೇನೂ ತೋರಲೊಲ್ಲದು. ನನ್ನ ಆಯುಷ್ಯವನ್ನು ಹಾಗೂ ಹೀಗೂ ಮುಂದೆ ದೂಡಹತ್ತಿದ್ದೇನೆ.

ರಾಣಾಜೀ! ಈ ಅಫೀಮು ನನ್ನನ್ನು ತನ್ನ ಅಮಲಿನಲ್ಲಿ ಮರೆಸಿ ಬಿಡುತ್ತದೆ. ಇದರಿಂದಲೇ ನನ್ನ ಮನಸ್ಸಿನಲ್ಲಿದ್ದ ದುಸ್ಸಹವಾದ ವೇದನೆಯು ಉಪಶಮನವಾಗಿದೆ. ನಿನ್ನೆ ಕಳಕಳಿಯ ಉಪದೇಶದಂತೆ ಒಂದು ವೇಳೆ ನಾನು ಅಫೀಮನ್ನು ಬಿಟ್ಟರೆ; ವರುಷದಿನಸವೇ ಹೃದಯದಲ್ಲಿದ್ದ ದಾರುಣ ಯಾತನೆಯು ಹೆಚ್ಚಾಗಿ ಸತ್ತುಹೋಗುವೆನ! ಆ ಮೇಲೆ ನೀವೇ ನನ್ನ ಚಿಂ

ತಾಪರಿಹಾರಕರಾಗುವಿರಿ! ನೀವೇ ನನ್ನನ್ನು ದುಃಖದಿಂದ ಮುಕ್ತನನ್ನಾಗಿ ಮಾಡಿದಂತಾಗುವದು!!

ತರುಣನ ಈ ಶೋಚನೀಯ ವೃತ್ತಾಂತವನ್ನು ಕೇಳಿ ಮಹಾರಾಣಿಗೆ ಬಹಳ ಕೆಡಕೆನಿಸಿತು. ಆತನು ಗರ್ವಿಷ್ಠರಾದ ಯವನರ ಮೇಲೆ ಕರ ಕರ ಹಲ್ಲು ತಿನ್ನಹತ್ತಿದನು. ಆತನಿಗೆ ಯಾವಾಗ ಸೇಡು ತೀರಿಸಿಕೊಳ್ಳಲಿಂಬಂತಾಯಿತು. ಗೈಸುದ್ದೀನನ ಮೇಲಂತೂ ಬೆಂಕೆಯನ್ನು ಕಾರಹತ್ತಿದನು. ತರುಣನ ಬಗ್ಗೆ ರಾಯಮುಲ್ಲನಿಗೆ ಅನುಕಂಪತೆಯು ಉತ್ಪನ್ನವಾಯಿತು. ಆದರೆ ದುಃಖದಿಂದ ದೂರ ಮಾಡಲಿಕ್ಕೆ ಆತನಿಗೆ ಒಂದೂ ವಿಚಾರವೂ ತೋರಲಿಲ್ಲ. ಆಗ ಪ್ರೇಮಸ್ವರದಿಂದ—

ಮಹಾರಾಣಿಯು—ತರುಣಾ! ನಿನ್ನ ವೃತ್ತಾಂತವನ್ನು ಕೇಳಿ ನನಗೆ ಬಹಳ ದುಃಖವಾಗುತ್ತದೆ. ಆದರೆ ನಿನ್ನ ಸಂಗಡ ಬಹಳ ಹೊತ್ತು ಮಾತಾಡುತ್ತ ನಿಲ್ಲುವಹಾಗಿಲ್ಲ. ನಾವು ಈಗಿಂದೀಗ ಚಿತ್ತೂರಿಗೆ ಹೋಗಲಿಕ್ಕೇ ಬೇಕು. ಎತ್ತ ಹೋದರೂ ಆ ನೀಚ ಮುಸಲ್ಮಾನರ ಕಾಟವೇ ಕಾಟ! ಅವರು ಎಂದು ನಮ್ಮನ್ನು ಕಾಡುವದನ್ನು ಬಿಡುವರೋ ಯಾರಿಗೆ ಗೊತ್ತು? ಎಲ್ಲಿ ಹೋದರೂ ಯಾರ ಬಾಯಿಂದ ಕೇಳಿದರೂ ಆ ಮಹತ್ವಾಕಾಂಕ್ಷಿಯಾದ ಗೈಸುದ್ದೀನನ ಕಠೋರತನವೇ! ಆಗಲಿ! ಇಂದಿಲ್ಲ ನಾಳೆಯಾದರೂ ಅವನಿಗೆ ತಕ್ಕ ಶಿಕ್ಷೆಯಾದೀತು. ದೇವರಿಗೆ ಎಲ್ಲವೂ ಅರಿಕೆಯದೆ. ಅತನಾದರೂ ಎಷ್ಟು ದಿವಸಗಳವರೆಗೆ ಕಣ್ಣು ಮುಚ್ಚಿಕೊಂಡು ಕೂಡ್ರುವನೋ ನೋಡೋಣ. ಇರಲಿ. ತರುಣಾ! ಈಗ ಬಹಳ ಮಾತಾಡುವಹಾಗಿಲ್ಲ. ನೀನು ಇನ್ನೊಮ್ಮೆ ನನಗೆ ಭೆಟ್ಟಿಯಾಗು; ಅಂದರೆ ನಿನ್ನ ದುಃಖ ಪರಿಹಾರ ಮಾಡಲಿಕ್ಕೆ ಯಾವದಾದರೊಂದು ಹಂಚಿಕೆಯನ್ನು ತೆಗೆಯುವೆನು. ತಡವಾಗುವದು. ನಿರೋಪ ಕೊಡು?

ತರುಣನು ಮಹಾರಾಣಿಗೆ ನಮಸ್ಕಾರ ಮಾಡಿ ತನ್ನ ಕೃತಜ್ಞತೆಯನ್ನು ವ್ಯಕ್ತಗೊಳಿಸಿದನು. ಆತನು ಬಹು ವಿನಯದಿಂದ—"ನಿಮ್ಮ ಅನುಮತಿ ಇದ್ದರೆ ಭಿನ್ನಸರ ದುರ್ಗದವರೆಗೆ ಕಳಿಸಲಿಕ್ಕೆ ಬರುವೆನೆಂ"ದು ನುಡಿದನು.

ಏನೇ ಆಗಲಿ, ಭಿನ್ನಸರ ಕೋಟೆಯ ಹೆಸರು ತೆಗೆದ ಕೂಡಲೇ ರಾಯಮುಲ್ಲನು ಉಸುರ್ಗರೆಯುತ್ತ ಖಿನ್ನಸ್ವರದಿಂದ— "ಕೆಲವು ಕಾರಣಗಳ ದೆಸೆ

ಯಿಂದ ನಾವು ಭಿನ್ನಸರ ಕಿಲ್ಲೆಯ ಕಡೆಗೆ ಹೋಗುವಹಾಗಿಲ್ಲ. ಎರಡನ್ನೇ ಮಾರ್ಗದಿಂದ ಚಿತ್ತೂರಿಗೆ ಹೋಗಬೇಕಾಗಿದೆ. ನಾವು ಬರಬೇಕಾದರೂ ಭಿನ್ನಸರ ದುರ್ಗದ ಮಾರ್ಗದಿಂದ ಬಂದಿಲ್ಲವೆಂದು" ಹೇಳಿದನು.

ತರುಣನು—(ಖಿನ್ನನಾಗಿ ಸ್ವಲ್ಪ ನಕ್ಕು ಗಂಭೀರತನದಿಂದ) ಈ ದಾಸನ ನ್ಯೂನತೆಯ ಬಗ್ಗೆ ಕ್ಷಮೆ ಇರಬೇಕು. ಮಹಾರಾಜ! ನನಗೆ ಈ ಮಾತಿನ ನೆನಪೇ ಇದ್ದಿಲ್ಲ.

ಮಹಾರಾಣನು—(ಆಶ್ಚರ್ಯದಿಂದ) ಏನು? ನಿನಗೆ ಆ ಮಾತು ಗೊತ್ತಿದೆಯೋ?

ತರುಣನು—ಹೌದು, ಮಹಾರಾಜ! ಭಿನ್ನಸರ ದುರ್ಗವು ಹರವತೀ ರಾಜವಂಶದ ಯಾಜಮಾನ್ಯದಿದ್ದು, ಅದರ ಹಕ್ಕು ಪುರಾತನ ಕಾಲದಿಂದ ಆ ವಂಶದ ಕಡೆಗೇ ಅದೆ. ಹರವತೀ ಮತ್ತು ಚಿತ್ತೂರ ರಾಜಮನೆತನಗಳ ನಡುವೆ ಇತ್ತಿತ್ತಲಾಗಿ ನೆಟ್ಟಗಿಲ್ಲ. ಒಳ್ಳೇ ವೈರಭಾವವೂ ಸುರುವಾಗಿದೆಂದರೆ ಅತಿಕಯೋಕ್ತಿಯಾಗಲಿಕ್ಕಿಲ್ಲ. ನಮ್ಮ ನವ್ಮೊಳಗೆ ಕತ್ತುತ್ವವನ್ನು ಬೆಳಿಸುವದು ಎಷ್ಟೂ ನೆಟ್ಟಗಲ್ಲ. ನಮ್ಮಲ್ಲಿ ಐಕ್ಯಭಾವವು ಇಲ್ಲದ್ದರಿಂದಲೇ ನಮ್ಮ ಹಾಡು ಹೀಗಾಗಿದೆ.

ಎದುರಿಗೆ ಕಾಣಿಸುವ ಭಿನ್ನಸರ್ಕೆ ಕೋಟೆಯ ಬುರುಜಿನಕಡೆಗೆ ಬೆಮ್ಮೆ ದೃಷ್ಟಿಯನ್ನು ಬಗೆದು ಯಾವದೋ ಬಂದು ಉದ್ವೇಕದಿಂದ ಮಹಾರಾಣನು—ತರುಣಾ! ನೀನನ್ನುವೆದು ನಿಜ. ಚಿತ್ತೂರ ಮತ್ತು ಹರವತೀ ರಾಜವಂಶಗಳ್ಳಿನ್ನಲ್ಲಿ ಪುನಃ ಮಿತ್ರತ್ವವು ಪ್ರಸ್ಥಾಪಿತವಾಗಬಹುದು. ಈಶ್ವರೀ ಸಂಕೇತವಿದ್ದರೆ ಭಿನ್ನಸರ ದುರ್ಗದಲ್ಲಿ ಕ್ಷತ್ರಿಯರ ವೀರಗೌರವವು ಪುನಃ ಪ್ರವೇಶವಾಗಬಹುದು. ಆದರೆ ಈಗ ಮಾತ್ರ ಆ ಎರಡೂ ಮನೆತನಗಳ ಮೇಲೆ ಖಗ್ರಾಸಗ್ರಹಣವು ಬಂದಿದೆ!!!

ಭಿನ್ನಸರ ದುರ್ಗದ ನಾಮನಿರ್ದೇಶನವನ್ನು ಮಾಡುವ ಇಷ್ಟವು ಮಹಾರಾಣನಿಗೆ ಇಲ್ಲೆಂದು ಆ ಯುವಕನು ಕೂಡಲೇ ಕಂಡುಹಿಡಿದನು. ವಿಷಯವನ್ನೇ ಬದಲಿಸುವ ಹೇತುವಿನಿಂದ ತರುಣನು—ಪರಂತು, ಚಿತ್ತೂರಿಗೆ ಹೋಗುವ ಎರಡನೇ ಮಾರ್ಗವು ಬಹಳ ಭಯಂಕರವದೆ. ನಿಮಗೆ ಚಿತ್ತೂರನ್ನು ಮುಟ್ಟಬೇಕಾದರೆ ಬಹಳ ರಾತ್ರಿಯಾಗುವದು. ರಾತ್ರಿಕಾಲದಲ್ಲಿ ಈ

ಹ್ಮಾದಿಯಿಂದ ಹೋಗುವದು ಅತಿ ಭಯಂಕರವದೆ.—ನೀವು ಏನೂ ಅಪಾಯವಿಲ್ಲದೆ ಹೋದರೆ ನನಗೆ ಬಹಳ ಆಶ್ಚರ್ಯವೂ, ಆನಂದವೂ ಆಗುವದು.

ಮಹಾರಾಣನು—ಯಾಕೆ? ಯುವಕಾ! ನಿನಗೆ ಯಾವ ಸಂಕಟದ ಆಶಂಕೆಯಾಗುತ್ತದೆ?

ತರುಣನು—ರಾಜಾಜೀ! ಗೈಸುದ್ದೀನನು ನಿಮ್ಮ ಶತ್ರುವೆಂದು ನನಗೆ ಈಗ ತಿಳಿಯಿತು. ಆತನು ಮಹಾ ಕಪಟಿಯು. ನಿಮ್ಮ ಘಾತವಾಡಬೇಕೆಂತಲೇ ಆತನು ಕೆಲ ಜನರೊಂದಿಗೆ ಕೆಲವು ಅರಗಾಡ ಸ್ಥಳಗಳಲ್ಲಿ ಜಪ್ಪಿಸಿಕೊಂಡು ಕೂತಿರುವನೆಂದು ಕೇಳಿದ್ದೇನೆ. ಇದರ ಬಗ್ಗೆ ನನ್ನ ಮನೋದೇವತೆಯು ನನಗೆ ಹೇಳಹತ್ತಿದ್ದಾಳೆ: ಕಾಲಸರ್ಪನಿಗೆ ಅಂಧಕಾರದಹೊರತು ಪ್ರಿಯವಾದ ವಸ್ತುವು ಬೇರೇ ಯಾವದು?

ಇದನ್ನು ಕೇಳಿದ ಕೂಡಲೇ ಮಹಾರಾಣನ ದೃಷ್ಟಿಯು ವಕ್ರವಾಯಿತು. ಹೃದಯವು ತಲ್ಲಣಗೊಳ್ಳಹತ್ತಿತು. ಶ್ವಾಸೋಚ್ಛ್ವಾಸ ಕ್ರಿಯೆಯು ಒತ್ತರದಿಂದ ನಡೆಯಹತ್ತಿತು. ಆಗ ತಿರಸ್ಕಾರ ಮತ್ತು ಅವಜ್ಞೇಯ ಸ್ವರದಿಂದ ಮಹಾರಾಣನು—ಯುವಕಾ! ನೀನು ಈ ಮಾತಿನಲ್ಲಿ ತೀರ ಸಣ್ಣ ಬಾಲಕನಿರುವಿ, ಅಂತೇ ನಿನ್ನ ಬಾಯಿಂದ ಇಂಥ ಶಬ್ದಗಳು ಹೊರಟವು. ನಿಜವಾಗಿ ನೀನು ಕಂದಮ್ಮನಿರುವಿ. ಇನ್ನೂ ನಿನ್ನ ತಲೆಯಮೇಲಿನ ಮಾಸ ಹಾರಿಲ್ಲ. ಬಾಪ್ಪಾರಾವಳನ ಶ್ರೇಷ್ಠ ವಂಶದಲ್ಲಿ ಹುಟ್ಟಿದಂಥ ಯಾವ ವೀರನ ಕ್ಷರಗಳಲ್ಲಿ ಶಸ್ತ್ರಗಳನ್ನು ಹಿಡಿಯುವ ಶಕ್ತಿಯುದೆಯೋ ಆ ಪುರುಷನು ಶತ್ರುಗಳಿಗೆ ಎಂದೂ ಹೆದರುವದಿಲ್ಲ. ವೈರಿಗಳ ಕಲ್ಪನೆಗೆ ಆತನು ಎಂದೂ ಭಯಭೀತನಾಗುವದಿಲ್ಲ! ವಿರುದ್ಧವಾಗಿ ಆತನಿಗೆ ಆನಂದವೇ ಆಗುವದೇಹೊರತು ದುಃಖವು ಎಂದೂ ಆಗುವದಿಲ್ಲ!! ಈ ಚಂದ್ರಮೌಳೀಶ್ವರನೇ ಮೇವಾಡದ ಕುಲದೇವರು. ಆತನ ಚರಣಕಮಲಗಳ ಸ್ಪರ್ಶದಿಂದ ಅಮಿತಬಲವು ಪ್ರಾಪ್ತವಾದ ಈ ಖಡ್ಗದ ಪರಾಕ್ರಮವನ್ನು, ಮಾಳವರಾಜನಾದ ಗೈಸುದ್ದೀನನು ಸ್ವತಃ ಇಲ್ಲಿಯವರೆಗೆ ಎಷ್ಟೋಸಾರೆ ನೋಡಿದ್ದಾನೆ. ಮೇವಾಡದ ರಜಪೂತರು ಭಯದ ಕಲ್ಪನೆಗೆ ಅಥವಾ ಕಲ್ಪನೆಯ ಭಯಕ್ಕೆ ಎಂದೂ ಸೊಪ್ಪು ಹಾಕುವ ಹಾಗಿಲ್ಲ!

ಹೀಗೆ ಸ್ಫುಡಿಸಿ ಮಹಾರಾಣನು ತನ್ನ ಕುದುರೆಯ ಮೇಲೆ ಜಿಗಿದು ಹೊಸ ಕಡಿವಾಣವನ್ನು ಬಿಗಿಹಿಡಿದು ಅದನ್ನು ಮೆಲ್ಲಗೆ ಬಿಟ್ಟನು. ಮೆಲ್ಲ

ಸೇನಾಸಮೂಹವು ತಮ್ಮ ಕತ್ತಿ-ಕಠಾರಿ, ಭಾಲೆ-ಬರ್ಚಿ ಮುಂತಾದವುಗಳನ್ನು ಕೈಗಳಲ್ಲಿ ಹಿಡಿದುಕೊಂಡು ಸಜ್ಜಾಗಿ ನಡೆಯಹತ್ತಿದವು. ಎಲ್ಲರೂ ಶಿವಮಂದಿರವನ್ನು ಬಿಟ್ಟು ಹೋದರು. ನನ್ನ ತರುಣನೂ ಅವರ ಬೆನ್ನಹಿಂದಿಂದೆ ಹೊರಟನು!

೩ನೆಯ ಪ್ರಕರಣ—ಇಂದುಕಲಾ ಹರಣ.

ಅವರು ಹೊರಟ ಸ್ವಲ್ಪ ಹೊತ್ತಿನಲ್ಲಿಯೇ ದಿನಮಣಿಯು ಪಶ್ಚಿಮದ ಕ್ಷಿತಿಜಕ್ಕೆ ಬಂದು ಮುಟ್ಟಿದನು. ಪಡುವಣ ದಿಕ್ಕೆಲ್ಲ ಅರಕ್ತವಾಯಿತು. ಅತನ ಮೂರುಸಂಜೆಯು ಎಳೆಬಿಸಿಲು ಅತಿ ಆಹ್ಲಾದಕರವಾಯಿತು. ಇಳಿಹೊತ್ತಿನ ಗಾಳಿಯು ಮೆಲ್ಲನೆ ಸುಳಿಯಹತ್ತಿತು. ಮೇವಾಡದ ಆ ಸೇನಾಸಮೂಹವು ಸಾವಕಾಶವಾಗಿ ಉಲ್ಲಾಸದಿಂದ ಮಾರ್ಗಕ್ರಮಣ ಮಾಡತೊಡಗಿತು. ಮಹಾರಾಣನ 'ಇಚ್ಛೆಯ ಪ್ರಕಾರ ಆ ದಂಡು ನಡುನಡುವೆ ಅಲ್ಪಕ್ಷಣ ವಿಶ್ರಾಂತಿಯನ್ನೂ ತಕ್ಕೊಳ್ಳುತ್ತಿತ್ತು. ಕೆಲಹೊತ್ತಿನ ಮೇಲೆ ಸೂರ್ಯಾಸ್ತವಾಯಿತು. ನಿಶಾದೇವಿಯು ಮೆಲ್ಲಮೆಲ್ಲನೆ ಪೃಥ್ವಿಯಮೇಲೆ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಹತ್ತಿದಳು. ಸಹಸ್ರ ರಶ್ಮಿಯು ಎಲ್ಲ ಅಧಿಕಾರವನ್ನು ನಿಶಾದೇವಿಯ ಕೈಯಲ್ಲಿ ಕೊಟ್ಟಿದ್ದರಿಂದ, ಅವಳು ಮನಸ್ಸಿಗೆ ಬಂದದ್ದನ್ನು ಮಾಡತೊಡಗಿದಳು. ಅಂಥ ಅವಳ ಸಾಮ್ರಾಜ್ಯದಲ್ಲಿ, ಆಕಾಶ ಸಿಂಹಾಸನದಮೇಲೆ ವಿರಾಜಮಾನನಾದಂಥ ನಿಶಾಪತಿಯು ಸತೇಜವುಳ್ಳವನಾದನು. ತಾರೆಗಳೂ ಮಿನುಗಹತ್ತಿದವು. ಅಂಶುಮಾಲಿಯು ರಾಜ್ಯದಲ್ಲಿ ಯಾವನು ನಿಸ್ತೇಜವುಳ್ಳವನಾಗಿ ಕಳೆಗುಂದಿದ್ದನೋ ಅತನು, ಅತಿ ಡೌಲಿನಿಂದ ಈಗ ತನ್ನ ಪ್ರಕಾಶವನ್ನು ಕೆಡವಿ, ತಾನೂ ಸಪ್ರಕಾಶವುಳ್ಳವನಾದೆನೆಂದು ಜಂಬಬಡಿಯಹತ್ತಿದನು. ಅತನೇ ನಿಶಾದೇವಿಯ ಸಾಮ್ರಾಜ್ಯದಲ್ಲಿ ಅಧಿಕಾರಾರೂಢನಾಗಿ ತನ್ನ ಅಧಿಕಾರವನ್ನು ಚನ್ನಾಗಿ ನಡಿಸತೊಡಗಿದನು. ನಿಶಾಕೀಟಕಗಳು "ಕರ್-ರನ-ಕರ-ರವ" ಎಂಬ ಕರ್ಣಕಠೋರ ಶಬ್ದಗಳನ್ನುಚ್ಚರಿಸಹತ್ತಿದವು. ತೋಲಬಾವುಲಿಗಳು ಬೆಳದಿಂಗಳಲ್ಲಿ 'ಭರ್ರ-ಭರ್ರ' ಎಂದು ಹಾರಾಡತೊಡಗಿದವು. ವಿಶಾಲವಾದ ವೃಕ್ಷಗಳ ಛಾಯೆಗಳು ಅತಿ ಭಯಂಕರವಾಗಿ ತೋರಹತ್ತಿದವು. ಒಟ್ಟಿಗೆ ಆ ರಾತ್ರಿಯು ಅತಿ ಭಯಾನಕವಾಗಿತ್ತು.

ಇಂಥ ಆ ಸಮಯದಲ್ಲಿ, ಎದುರಿನ ಬಂದು ಪರ್ವತದ ತುದಿಯಕಡೆಗೆ ಬೊಟ್ಟು ಮಾಡಿ, ಹೋಗ ಹೋಗುತ್ತ ನಮ್ಮ ತರುಣನು—

ತರುಣನು—ರಾಜಾಜೀ! ನಮ್ಮ ಎದುರಿಗೆ ಬಂದು ಪರ್ವತದ ಕಡು ಮಂಡಿಯು ಕಾಣಿಸುತ್ತದೆ, ನೋಡಿರಿ. ಅದರ ಸಮೀಪಕ್ಕೆ ಚಂಬಳ ನದದ ಪ್ರವಾಹನದೆ. ಅಲ್ಲಿಯೊಂದು ಭಯಂಕರವಾದ ಕೊರಕಲ ಬಿದ್ದಿದೆ. ಆಲ್ಲಿ ನದದ ಪ್ರವಾಹಕ್ಕೆ ವಿಲಕ್ಷಣವಾದ ವೇಗವಿದ್ದು ಪ್ರತ್ಯಕ್ಷ ಕಾಲಸ್ವರೂಪನನ್ನು ಧರಿಸಿದಂತೆ ಕಾಣಿಸುತ್ತದೆ. ಅದನ್ನು ನೋಡಿದ ಕೂಡಲೆ, ಹೃದಯವು ಭೀತಿಯಿಂದ ತಲ್ಲಣಗೊಳ್ಳುತ್ತದೆ. ಕಣ್ಣುಗಳು ತಿರುಗುತ್ತವೆ. ಚಂಬಳದ ಅಲ್ಲಿಯ ಘನಘೋರ ಕಲ್ಲೋಲ ಧ್ವನಿಯನ್ನು ಕೇಳಿದರೆ, ಪ್ರಳಯಕಾಲದ ಮೇಘ ಗರ್ಜನೆಯು ನೆನವಾಗುತ್ತದೆ. ನೀರು ಮೇಲಿಂದ ಕೆಳಗೆ ಬೀಳುವಾಗ ಬೆಳ್ಳಗೆ ಬುರುಗುಗಟ್ಟುತ್ತದೆ. ಧೂಮ್ರ ಹನಿಗಳು ಬಹಳ ಅಂತರದವರೆಗೆ ಹಾರುತ್ತವೆ. ಅದನ್ನೇನು ಹೇಳಲಿ! ಆ ಭಯಂಕರ ಸ್ಥಾನಕ್ಕೆ 'ವೀರಶೃಂಗ' ವೆಂಬ ಹೆಸರದೆ. ಬಹುತರವಾಗಿ ಇಡೀ ರಜಪುತಸ್ಥಾನದಲ್ಲಿಯ ಜನರ ತಿಳುವಳಿಕೆಯು ವಿಲಕ್ಷಣವಾದದ್ದದೆ. ಅವರು ಈ ಗಿರಿಶೃಂಗಕ್ಕೆ ಬಹಳ ಮಹತ್ವವನ್ನು ಕೊಡುತ್ತಾರೆ. ಈ ಕಡುದಾದ ಬಂಡಿಯ ಮೇಲೆ ನಿಂತು ಚಂಬಳದ ಕೆಳಗಿನ ಕೊರಕಲದಲ್ಲಿ ಪುಟಿಕೆಯನ್ನು ಹೊಡೆದು ಅಲ್ಲಿಯ ಭಯಂಕರವಾದ ಪ್ರವಾಹವನ್ನು ವಿಭಾಗಿಸಿ, ಯಾವನು ಎರಡನೇ ತೀರವನ್ನು ಸುರಕ್ಷಿತವಾಗಿ ಮುಟ್ಟುತ್ತಾನೋ, ಆತನು ಭಗವಾನ್ ಚಂದ್ರಮೌಳೀಶ್ವರನ ಶಾಶ್ವತ ಕೃಪಾ ಪ್ರಸಾದಕ್ಕೆ ಪಾತ್ರನಾಗಿ, ಇಹಪರ ಲೋಕದಲ್ಲಿ ಸುಖವನ್ನು ಹೊಂದುತ್ತಾನೆ. ಆತನಿಗೆ ಯಾವಾಗಲೂ ಕಲ್ಯಾಣವೇ ಆಗುತ್ತದೆ. ಆತನೇ ಅಗ್ರೇಸರನಾಗುವನು! ಕೊಳದಲ್ಲಿ ಹಾರಿ ಹೋಗುವ ಪ್ರಯತ್ನದಲ್ಲಿ ಆತನ ಅಂತ್ಯವಾದರೆ ಅವನಿಗೆ ಕೂಡಲೇ ಕೈಲಾಸ ಪದವಿಯು-ವ್ಯಾಪ್ತಿಯಾಗಿ, ಅವನು ಚಿರಕಾಲ ಶಂಕರಸ್ವರೂಪದಲ್ಲಿ ಲೀನನಾಗಿ ಹೋಗುತ್ತಾನೆ. ಈ ಚಿರಪ್ರಚಲಿತ ಭಾವನೆಯು ಪರಿಣಾಮವು ಬಹು ಭಯಂಕರವಾಗಿದೆ. ಎಷ್ಟೋ ಧಿಟ್ಟ, ಧೀರ, ವೀರ, ಕೂರ ಸ್ತ್ರೀ ಪುರುಷರು, ದೇವಾಧಿದೇವನ ಚಿರಕೃಪಾ ಪ್ರಸಾದದ ಆಥವಾ ಕೈಲಾಸಪದ ಲಾಭದ ಆಶೆಯಿಂದ, ವೀರಶೃಂಗದ ಮೇಲಿಂದ ಕೆಳಗೆ ಹಾರಿಕೊಂಡು, ಶಾಶ್ವತವಾದ ಕೈಲಾಸಪದವನ್ನು ಹೊಂದಿ, ಸುಖದಿಂದ ಕಾಲ

ಕಳೆಯಹತ್ತಿದ್ದಾರೆ. ಪ್ರವಾಸ ಮಾಡುತ್ತ ಇಲ್ಲಿಯವರೆಗೆ ಬಂದಮೇಲೆ ರಜಪೂತರ, ಹಾಗು ಪಥಿಕರ ಹೃದಯದಲ್ಲಿ ಈ ಚಿರಸಹೃದ್ ಚಂಬಳದ ಕೊಳ್ಳದಲ್ಲಿ ಜಿಗಿಯಬೇಕೆಂಬ ಜಿಜ್ಞಾಸೆಯು ವ್ಯಾಪ್ತವಾಗುತ್ತದೆ! ಇಲ್ಲಿಯವರೆಗೆ ಬಂದ ಮೇಲೆ ಅವರ ಅಂತಃಕರಣವು ತಳಮಳಗೊಳ್ಳುತ್ತದೆ! ಈ ವರೆಗೆ ಎಷ್ಟೋ ಧೈರ್ಯವುಳ್ಳ ಸ್ತ್ರೀ ಪುರುಷರು ಈ ಪ್ರಾಣಸಂಕಟವುಳ್ಳ ವೀರಶೃಂಗದ ಮೇಲಿಂದ ಚಂಬಳದ ಕೊನ್ನಾರದಲ್ಲಿ ಜಿಗಿದು, ಅಕಾಲಮರಣವನ್ನು ಹೊಂದಿ ಕಾಲಸದನಕ್ಕೆ ಹೋಗಿದ್ದಾರೆ—ಎಷ್ಟೋ ಪ್ರಾಲಿಗೆ ಸುಖಕರವಾದ ಈ ಸಂಸಾರಸುಖಕ್ಕೆ ಎರವಾಗಿದ್ದಾರೆ. ರಾಜಸ್ಥಾನವೇ ಧೈರ್ಯಶಾಲಿಗಳ ಜನ್ಮಭೂಮಿಯು! ಕ್ಷತ್ರಿಯರ ಪರಾಕ್ರಮಕ್ಕೆ, ವೀರ್ಯಕ್ಕೆ, ಶೌರ್ಯಕ್ಕೆ ವಿರೋಧುಗಳಾಗಿವೆ!! ಕ್ಷಾತ್ರತೇಜವು ರಜಪುತಸ್ಥಾನದಲ್ಲಿಯೇ ಮನೆಮಾಡಿ ಕೊಂಡಿದೆ!!! ವೀರಶೃಂಗದ ಮೇಲಿಂದ ಜಿಗಿಯುವಾಗ ಎಲ್ಲ ಸ್ತ್ರೀ ಪುರುಷರು ದೇಹಾಂತವಾಗುತ್ತಾರೆ ಹೀಗೇನೂ ಇಲ್ಲ. ಯಾವನ ಮೇಲೆ ದೇವಾಧಿದೇವನು ಸುಪ್ರಸನ್ನನಾಗಿರುತ್ತಾನೋ, ಯಾವನ ಶರೀರವು ಬಲವುಳ್ಳದ್ದೂ, ಘಟ್ಟಸಾದದ್ದೂ ಇರುತ್ತದೆಯೋ, ಆ ವೀರನು ವೀರಶೃಂಗದ ಮೇಲಿಂದ ಹಾರಿ ಈ ಭಯಂಕರವಾದ ಪ್ರವಾಹವನ್ನು ದಾಟಿ ಹೋಗುತ್ತಾನೆ. ಆದರೆ ಇಂಥ ಮಹಾ ಭಾಗ್ಯವಾನ್ ವೀರರ ಸಂಖ್ಯೆಯು ಅತಿ ಕಡಿಮೆ. ಸ್ವಲ್ಪ ದಿವಸಗಳ ಹಿಂದೆ, ಒಬ್ಬ ಗಾಣಿಗರ ಪ್ರೌಢ ಸ್ತ್ರೀಯಳು ಈ ವೀರಶೃಂಗದ ಮೇಲಿಂದ ಹಾರಿ ಚಂಬಳದ ಕೊಳ್ಳವನ್ನು ದಾಟಿ ಎರಡನೇ ದಂಡೆಗೆ ಸುಖರೂಪದಿಂದ ಮುಟ್ಟಿದಳೆಂಬದನ್ನು ಕೇಳಿದ್ದೇನೆ. ಅವಳು ಈಗ ಶಮ್ಸ ಅಂತಃಪುರದಲ್ಲಿ ರಾಜಸ್ತ್ರೀಯರ ಸೇವೆಗೆ ನಿಂತಿರುತ್ತಾಳೆ. (ಮುಂದೆ ಕೈ ಮಾಡಿ ಫೂಬರಿಯಾಗಿ ಖಿನ್ನಸ್ವರದಿಂದ) ಅಯ್ಯೋ! ಏನಿದು? ಎಂಥ ಭಯಂಕರ ಪ್ರಸಂಗವಿದು?

ತೀರ ಅಕಸ್ಮಿಕ ರೀತಿಯಿಂದ ಅಸಂಖ್ಯ ಕುದುರೆಗಳ ಖುರಪುಟದ ಗಂಭೀರವಾದ ಸಪ್ಪಳವೂ, ಸ್ವಾರರ ಖಡ್ಗಗಳು ಒಂದಕ್ಕೊಂದು ಢಾಕಲಾಡಿ ಹೊಡೆಟ 'ಝಣ ಝಣ' ಶಬ್ದವೂ, ಹಾಗೂ ಚಂಬಳ ನದದ ಸ್ಪಷ್ಟವಾಗಿ ಕೇಳಬರುವ ಘನಘೋರ ಕಲ್ಲೋಲ ಧ್ವನಿಯೂ ಗಾಳಿಯ ಸಂಗಡ ಕೂಡಿ ಕೊಂಡು ಮಹಾರಾಣನ ಕಡೆಗೆ ಬರಹತ್ತಿದವು. ಮಹಾರಾಣಾ ರಾಯಮ

ಲ್ಲನೂ, ಆತನ ಉಳಿದ ಜನರೂ ಈ ಕಲಕಲಾಟದಲ್ಲಿ ಮುಳುಗಿ ಹೋದರು. ಅವರಿಗೆ ಒಬ್ಬರ ಮಾತುಕತೆಗಳು ತಿಳಿಯದಂತಾಯಿತು. ಅವರು ಗೊಂದಲದಲ್ಲಿ ಬಿದ್ದರು. ಇಷ್ಟರಲ್ಲಿ ಒಂದು ವೈರಿದಳವು ಅವರ ಸಮೀಪಕ್ಕೆ ಬಂತು. ಸ್ತಿಮಿತ ಚಂದ್ರಪ್ರಕಾಶದಲ್ಲಿ ಕುದುರೆಯ ಮೇಲೆ ಕೂತಿದ್ದ ಸ್ವಾರರ ಶಸ್ತ್ರಾಸ್ತ್ರಗಳು ಲಕಲಕನೆ ಹೊಳೆಯುವದು ಕಾಣಿಸಹತ್ತಿತು.

ಈ ಶಸ್ತ್ರಾಸ್ತ್ರಗಳನ್ನೂ, ಶತ್ರುಸೇನೆಯನ್ನೂ ನೋಡಿ ಮಹಾರಾಣನ ಬಾಹುಗಳು ಸ್ಫುರಣವಾಗಹತ್ತಿದವು. ಶರೀರವೆಲ್ಲ ಆವೇಶದಿಂದ ಉಕ್ಕೇರಿ ನಡುಗಹತ್ತಿತು. ಕಣ್ಣುಗಳಲ್ಲಿ ಒಂದು ವಿಲಕ್ಷಣವಾದ ತೇಜವು ಹೊರಟಿತು. ಹಣೆಯಮೇಲೆ ಘರ್ಮಬಿಂದುಗಳು ಚಮಕಿಸಹತ್ತಿದವು. ಆಗ ಮಹಾರಾಣನು ಕಂಪಿತ ಸ್ವರದಿಂದ—"ತರುಣ ವೀರಾ! ನಡುವೇ ನೀನು ಮಾಡಿದ ಭವಿಷ್ಯವು ನಿಜವಾಯಿತು. ಅದು ಇಷ್ಟು ತೀವ್ರ ನಿಜವಾಗುವದೆಂಬ ಕಲ್ಪನೆಯು ನನ್ನಲ್ಲಿದ್ದಿಲ್ಲ. ಈ ನಿರ್ಜನ ಪ್ರದೇಶದಲ್ಲಿ, ನೀನು ಹೇಳಿದ ಕಾಲಸರ್ಪವು ಅಡಗಿಕೊಂಡು ಕೂತಂತೆ ಕಾಣಿಸುತ್ತದೆ?" ಎಂದು ನುಡಿದನು.

ಇಷ್ಟರಲ್ಲಿಯೇ, ನೋಡನೋಡುವದರೊಳಗಾಗಿಯೇ ತುರ್ಕಸ್ವಾರರು ಧಾವಿಸಿ ಬಂದು ರಜಪೂತರ ಮೈಮೇಲೆ ಒಮ್ಮೆಲೆ ಬಿದ್ದರು. ಅವರು ಒಮ್ಮೆಲೆ ಹಲ್ಲೆಗೆ ಪ್ರಾರಂಭ ಮಾಡಿದರು. ಮೇವಾಡದ ಸ್ವಾರರು ತಮ್ಮ ಖಡ್ಗಗಳನ್ನು ಒರೆಯೊಳಗಿಂದ ಹಿರಿಯುವದರೊಳಗೇ, ನವ್ಯ ವೀರ ತರುಣನು ತನ್ನ ಉದ್ದವಾದ ಖಡ್ಗವನ್ನು ಹೊರಗೆ ತೆಗೆದು ಶತವಿದ್ಯುಲ್ಲತೆಯ ಮಿಂಚಿನಹಾಗೆ ಹತ್ತು ದಿಕ್ಕುಗಳ ಸುತ್ತಲೂ ತಿರುವಹತ್ತಿದನು. ಆತನು ಹಾಗೆ ತಿರುವುವಾಗ ಆಕಾಶದಲ್ಲಿಯ ಮಿಂಚುಗಳು ನಾಚಿಕೆಯಿಂದ ಸುಮ್ಮನೆ ಕೂತಿದ್ದವು. ಅವುಗಳಿಗೆ ಈತನ ಮುಂದೆ ಬರುವದಕ್ಕೆ ಮೋರೆಯೇ ಇದ್ದಿಲ್ಲ. ತರುಣನು ಈ ಪ್ರಕಾರ ಖಡ್ಗವನ್ನು ತಿರುವುವಾಗ ಆ ವಿಜಯಿ ಶಸ್ತ್ರದ ಪರಾಕ್ರಮದ ಬಲೆಗೆ ಅನೇಕ ಶತ್ರುಗಳು ಸಿಕ್ಕರು. ಅವರಲ್ಲಿ ಕೆಲವರು ಚನ್ನಾಗಿ ಘಾಯವನ್ನು ಹೊಂದಿದರು. ಅನೇಕರು ಸತ್ತರು. ಈತನ ಅತುಲ ಪರಾಕ್ರಮವನ್ನೂ, ಅಲೌಕಿಕ ಶೌರ್ಯವನ್ನೂ ನೋಡಿ ವೈರಿಗಳು ಬೆರಗಾದರು. ರಜಪೂತರಿಗೆ ಅಧಿಕವಾಗಿ ಆವೇಶ ಬಂತು. ಅವರು ತಮ್ಮ ಖಡ್ಗಗಳನ್ನು ಅತಿ ಭರದಿಂದ ತಿರುವಹತ್ತಿದರು. ಅದನ್ನು ನೋಡಿ ತುರ್ಕರು ಬೆದರಿದರು.

ಪಾನ ಮಾಡಿ ತಿರುಗಿ 'ಖಡ್‌ಬಿಡ್' ಬೂಟಿನ ಸಪ್ಪಳವನ್ನು ಮಾಡುತ್ತ ಯಮುನೆಯ ಕೋಣೆಗೆ ಬಂದನು. ಯಮುನೆಯು ಕಣ್ಣುಗಳಿಗೆ ನೀರೆಯ ಸೆರಗನ್ನು ಹಚ್ಚಿ ಕಣ್ಣೀರು ಒರೆಸುತ್ತ ಕುಳಿತಿದ್ದಳು. ಅವಳು ಸ್ವಲ್ಪ ವಸ್ತ್ರವನ್ನು ಬಿಚ್ಚಿವಾಡಿ ನೋಡುತ್ತಾಳೆ, ತನ್ನ ಪತಿಯ ಮೂರ್ತಿಯು ಮೊದಲಿಗಿಂತಲೂ ರೌದ್ರರೂಪ ಧಾರಣವಾಡಿತ್ತು! ಆಕೋಮಲಾಂಗಿಯು ಆರಾಷ್ಟ್ರಸನನ್ನು ನೋಡುತ್ತಲೇ ಥರಥರೆ ಕಂಪಿಸಹತ್ತಿದಳು. — ಧೋಂಡೀರಾಜನು ಒಳಗೆ ಬಂದವನೇ ಘೋರಸ್ವರದಿಂದ ಅಂದದ್ದೇನೆಂದರೆ:— "ಏ ಚಾಂಡಾಳಿಣೀ, ನೀನು ಇಂದು ಈವರಿ-ಅಳಲಿಕ್ಕೆ ನಿನಗೆ ಆದದ್ದಾದರೂ ಏನು? ನಾನು ಯಾವಾಗ್ಗೇ ಬಂದರೂ, ನನ್ನ ಎದುರಿಗೆ ಕತ್ತೆಯಂತೆ ಹೋ-ಹೋ-ಹೋ ಅನ್ನುತ್ತ ಅಳುತ್ತ ಕೂಡ್ರುವಿ. ನಾನು ಯಾಕೆ ಬರುತ್ತೇನೆಂಬುವದು ನಿನಗೆ ಸ್ವಲ್ಪಾದರೂ ಅರುವಿಲ್ಲ."

ಯಮುನೆ:— (ಭೀತಸ್ವರದಿಂದ) "ತಾವು ಯಾತಕ್ಕೆ ಬರುತ್ತಿರೆಂಬುವದು ತಾವು ಹೇಳಿದ ಹೊರ್ತು-ನನಗೆ ತಿಳಿಯುವ ಬಗೆಯಾದರೂ ಹೇಗೆ? ನಾನು ತಮ್ಮ ದಾಸಳಿದ್ದು, ತಮ್ಮಾಜ್ಞೆಯನ್ನು ಪಾಲಿಸುವದಿಲ್ಲವೆಂದರೆ ಎಂದಾದರೂ ನಡೆದೀತೇ? ತಾವು-ನನಗೆ ಯಾವದೊಂದು ಯೋಗ್ಯವಾದ ಕೆಲಸವನ್ನು ಹೇಳುವದೊಂದೇತಡ, ಅದನ್ನು ನಿಂತಕಾಲಮೇಲೆ ಮಾಡಿಬಿಡುತ್ತೇನೆ"

ಧೋಂಡೀರಾಜ:— (ಮೊಶೆಯನ್ನು ಹುರಿಮಾಡುತ್ತ) "ನೀನು ನನ್ನ ಆಜ್ಞೆಯನ್ನು ಎಷ್ಟರಮಟ್ಟಿಗೆ ಪಾಲಿಸುತ್ತೀಯೆಂಬುವದನ್ನು ನಾನು ಅನೇಕ ಸಾರೆ ಮನನ ಮಾಡಿಕೊಂಡಿರುತ್ತೇನೆ. ನಾನು ೩-೪ ದಿವಸಗಳಿಂದ ನಿನ್ನ ಹತ್ತರ ಬಂದು ಆಭರಣವನ್ನು ಬೇಡುತ್ತೇನೆ; ಆಗಲೆ ಅಸಂಬಂಧವಾಗಿ ನೀನು ಅನೇಕ ಪ್ರತಿಬಂಧದ ಕಾರಣಗಳನ್ನು ಹೇಳಿದಿ."

ಯಮುನೆಯು ಒಳ್ಳೇ ಇರುಕಿನಲ್ಲಿ ಸಿಕ್ಕಳು. ಏನು ಮಾಡಬೇಕೆಂಬುವದು ಅವಳಿಗೆ ತಿಳಿಯದೆ ಹೋಯಿತು. ಅವಳ ಹತ್ತರ ಇದ್ದ ಆಭರಣದ ಮೇಲೆ ಧೋಂಡೀರಾಜನ ಅಧಿಕಾರವಿದ್ದಿಲ್ಲ. ಆ ಅಲಂಕಾರದ ನಿಜವಾದ ಒಡೆತನವು ಅವಳ ಅತ್ತೆಮಾವರದಾಗಿತ್ತು. ಅತ್ತೆಮಾವರ ಕೆಲವಾಲ ಸ್ವಭಾವವು ಅವಳಿಗೆ ಪೂರ್ಣ ಪರಿಚಯವಿದ್ದದರಿಂದ, ಅವರ ಅಪ್ಪಣೆಯಹೊರ್ತು ಧೋಂಡೀರಾಜನಿಗೆ ಅಲಂಕಾರವನ್ನು ಕೊಡಲಿಕ್ಕೆ ಅವಳಿಗೆ ಛೈ

ಯ್ಯವಿದ್ದಿಲ್ಲ. ಅಲಂಕಾರವನ್ನು ಕೊಡದಿದ್ದರೆ, ಪತಿರಾಜನಿಂದ ತನಗೆ ಯೋಗ್ಯಶಾಸನವಾಗುವದೆಂದೂ, ಕೊಟ್ಟರೆ ಅದು ಅಪವ್ಯಯವಾಗುವದೆಂದೂ ಅವಳಿಗೆ ಪೂರ್ಣ ಮನವರಿಕೆಯಿತ್ತು.

ಯಮುನೆ:— (ಅಸ್ಪಷ್ಟವಾಗಿ) "ನಾನು ತಮಗೆ ಆಭರಣವನ್ನು ಕೊಡುವದಿಲ್ಲವೆಂದು ಯಾವಾಗ್ಗೆ ಅಂದಿರುವೆನು? ನಾನು ಯಾವಾಗಲೂ ಹೇಳುವದೇನಂದರೆ:— "ಅತ್ತೆಯವರನ್ನಾಗಲಿ, ಮಾವಂದಿರನ್ನಾಗಲಿ ವಿಚಾರಿಸಿರಿ. ಅವರ ಅಪ್ಪಣೆಯಾಗುವದೊಂದೇ ಅವಕಾಶವು; ನಿಮಗೆ ಬೇಕಾದ ಅಲಂಕಾರವನ್ನು ತಕ್ಕೊಂಡು ಹೋಗಿರಿ. ಅವರ ಅಪ್ಪಣೆಯಿಲ್ಲದೆ ಕೊಟ್ಟರೆ ದ್ದಾದರೆ ನನಗೆ ಅವರು ಏನನ್ನಲಿಕ್ಕಿಲ್ಲ."

ಯಮುನೆಯ ಸಮರ್ಪಕೋತ್ತರವನ್ನು ಕೇಳಿ, ಧೋಂಡೀರಾಜನು ಸಂತಾಪದಿಂದ ಕಂಗಾಲೆಂಪಗೆ ಮಾಡಿದನು. ಅದರಲ್ಲಿ ಮಿತಿಗಟ್ಟು ಮದ್ಯಪಾನ ಮಾಡಿದ್ದರಿಂದ ಅವನ ಸಿಟ್ಟೆಂಬ ಬೆಂಕಿಯು ಪ್ರಖರವಾಗಿ ಪ್ರಜ್ವಲಿಸಲಿಕ್ಕೆ ಏನೂ ಅವಕಾಶವು ಬೇಕಾಗಲಿಲ್ಲ. ಆವೇಳೆಯಲ್ಲಿ ಧೋಂಡೀರಾಜನು ಪ್ರತಿ ಯಮುನೆಯಂತೆ ಕಾಣಿಸುತ್ತಿದ್ದನು. ಅವನು ಯಮುನೆಯನ್ನು ಒಳ್ಳೇ ಕಸುವಿನಿಂದ ಒಮ್ಮೆ ಗುದ್ದಿ, ಅಂದದ್ದೇನಂದರೆ:— "ಮರುಳೇ, ಆ ಅಲಂಕಾರದ ಮೇಲೆ ಹೇಗೆ ನನ್ನ ಅಧಿಕಾರವಿಲ್ಲ? ತಾ, ಆ ನಿನ್ನ ಪೆಟ್ಟಿಗೆಯ ಕೀಲಿಯನ್ನು! ಎಲ್ಲಿ ಇರುತ್ತದೆ ಅದು?" ಎಂದನು.

ದೀನಳಾದ ಯಮುನೆಯು ಏನೊಂದು ಮಾತಾಡದೆ, ಧೋಂಡೀರಾಜನ ಮುಂದೆ ಕೀಲಿಯ ಕೈಸರವನ್ನೇ ಚಲ್ಲಿದಳು. ಅವಳು ಧೋಂಡೀರಾಜನ ಒಂದೇ ಗುದ್ದಿಗೆ ನೆಲಕ್ಕೆ ಕುಳಿತಳು. ಅವಳ ಪ್ರಾಣವು ತೀರ ಕಳವಳಗೊಂಡಿತು. ಧೋಂಡೀರಾಜನು ತನ್ನ ಎದುರಿಗೆ ಬಿದ್ದ ಕೀಲೀಕೈ ಸರವನ್ನು ತೆಗೆದುಕೊಂಡು, ನಗುತ್ತ:— "ಹೊಡೆಯುವ ಹೊರ್ತು ಎಚ್ಚರ ಹುಟ್ಟುವದಿಲ್ಲ. ನೀನು ಸ್ತೀಗೆಯೇ ಅಳುತ್ತ ಕೂಡ್ರು," ಎಂದುಚ್ಚರಿಸುತ್ತ, ಅಲ್ಲಿಯೇ ಇದ್ದ ಒಂದು ಕಟ್ಟಿಗೆಯ ಪೆಟ್ಟಿಗೆಯ ಕೀಲಿಯನ್ನು ತೆಗೆಯುವ ಯತ್ನವಾಡಹತ್ತಿದನು. ಆ ಪೆಟ್ಟಿಗೆಯ ಅಂಗದಲ್ಲಿ ಕೀಲೀ ತೆಗೆಯುವಂತೆ ಮಾಡಿತ್ತು. ಧೋಂಡೀರಾಜನು ಆ ಕೀಲಿಯನ್ನು ಅದರ ಕೀಲೀಕೈಯಿಂದ ತೆಗೆಯದೆ, ಮತ್ತೊಂದು ಕೈಯನ್ನು ಒಳಗೆ ಜೋರಿನಿಂದ ತಿರುವಿ, ಆ ಕೈಯನ್ನು ಮುರಿದು,

ಬಿಟ್ಟನು. ಅವನು ಒಳಗೆ ಮುರಿದು ಬಿದ್ದ ಕೈಯನ್ನು ಕಡೆಗೆ ತೆಗೆದು; ಎರಡನೆಯದರಿಂದ ತೆಗೆಯಲಾರಂಭಿಸಿದನು, ಅದರಿಂದಲೂ ಬಾರದ್ದರಿಂದ ಮೂರನೆಯದರಿಂದ ತೆಗೆಯಹತ್ತಿದನು; ಆದರೂ ಪೆಟ್ಟಿಗೆಯ ಬಾಯಿಯು ಕಡೆಗೆ ಬರಲಿಲ್ಲ. ಅವನು ಎಷ್ಟೋ ವೇಳೆಯ ವರೆಗೆ ಪ್ರಯತ್ನಮಾಡಿದನು. ಆದರೂ ಅವನಿಗೆ ಫಲವು ಸಿಗಲಿಲ್ಲ. ಫಲವು ಸಿಗದ್ದರಿಂದ ಅವನಿಗೆ ಮಿತಿ ಮೀರಿ ಸಂತಾಪವಾಯಿತು. ಪೆಟ್ಟಿಗೆಯ ಬಾಯಿಯು ಕಡೆಗೆ ಬರುವದಿಲ್ಲ ವೆಂದು ಅವನಿಗೆ ದೃಢವಾದ ಕೂಡಲೆ ಅವನ ಮನಸ್ಸಿನಲ್ಲಿ -" ಯಮುನೆಯು ನಿಜವಾದ ಕೀಲೀಕೈಯನ್ನು ಕೊಡದೆ ಬೇರೊಂದನ್ನು ಕೊಟ್ಟು ತನಗೆ ಮೋಸ ಮಾಡಿದಳು " ಎಂಬ ಕಲ್ಪನೆಯು ಹುಟ್ಟಿತು. ಕೂಡಲೇ ಅವನ ಮನಸ್ಸಿ ನಲ್ಲಿ ಸಂತಾಪವು ಉತ್ಪನ್ನವಾಗಿ, ಆ ಸಂತಾಪದ ಭರದಲ್ಲಿ ಯಮುನೆಯ ಕೋಮಲವಾದ ಗಲ್ಲಗಳ ಮೇಲೆ ನಾಲ್ಕೈದು ಸಾರೆ ಹೊಡೆದು ಯಮುನೆ ಯನ್ನು ಕುರಿತು ಅಂದದ್ದೇನೆಂದರೆ:—" ನೀಚಳೆ, ನೀನು ಆ ಆಭರಣ ವನ್ನು ದರಿದ್ರನಾದ ನಿಮ್ಮ ತಂದೆಗೆ ಕೊಡಬೇಕೆಂದು ಆಲೋಚಿಸಿರುವಿ ಯೇನು ? ನಿಮ್ಮ ಅಪ್ಪನ ಹಣೆಯಲ್ಲಿ ಪರರ ತಂಬುಲವನ್ನು ತಿಂದೇ ಬದು ಕಬೇಕೆಂದು ಬರೆದದೆಯೇನು ? ನೀನು ಯಾತಕ್ಕೆ ಆ ದರಿದ್ರನಾದ ತಂದೆಯ ಸಲುವಾಗಿ ಯತ್ನಮಾಡುವಿ ? ಆ ಪೆಟ್ಟಿಗೆಯ ಕೀಲೀಕೈಯನ್ನು ಸುಮ್ಮನೆ ಕೊಡು. ಇಲ್ಲವಾದರೆ ನಿನ್ನ ಮೈಯ ಪಾಡನ್ನು ನೋಡು. ಅರಕ್ಷಣದಲ್ಲಿಯೇ ಕಣಕದಂತೆ ಮೈಯನ್ನು ಮೆತ್ತಗೆ ಮಾಡುತ್ತೇನೆ ! " ಎಂದನು.

ಯಮುನೆಯ ಕೋಮಲವಾದ ಗಲ್ಲಗಳ ಮೇಲೆ ನಾಲ್ಕೈದು ಸಾರೆ ಜೋರಿನಿಂದ ಹೊಡೆದದ್ದರಿಂದ, ಅವಳ ಎರಡೂ ಗಲ್ಲಗಳು ಕೆಂಪಾಗಿದ್ದವು. ಹಲ್ಲುಗಳಿಗೆ ಧಕ್ಕೆಯಾದ್ದರಿಂದ ರಕ್ತವು ಧಾರಾಳವಾಗಿ ಸುರಿಯುತ್ತಿತ್ತು. ಭೀತಿಯಿಂದ ಅವಳ ಎದೆಯು ಥರಥರ ಕಂಪಿಸುತ್ತಿತ್ತು. ಸುಪ್ರಯಾಸದಿಂದ ಮೇಲಕ್ಕೆದ್ದು ನಿಂತು ಅವಳು ನುಡಿದಳೇನೆಂದರೆ :— " ಮಹಾರಾಜ! ತಮ್ಮ ಕರದಲ್ಲಿರುವ ಸರದಲ್ಲಿಯೇ ಪೆಟ್ಟಿಗೆಯ ಕೀಲೀಕೈಯದೆ. ತಮಗೆ ತೆಗೆಯ ಲಿಕ್ಕೆ ಬಾರದ್ದರಿಂದ ಪೆಟ್ಟಿಗೆಯ ಬಾಯಿಯು ಕಡೆಗೆ ಬರಲೊಲ್ಲದು. ನನ್ನ ಕಡೆಗೆ ಕೊಟ್ಟರೆ ಈಗಲೇ ತೆಗೆದುಕೊಡುತ್ತೇನೆ. " ಎಂದನ್ನಲು ಭೋಂಡೀ ರಾಜನು ಕೂಡಲೆ ಯಮುನೆಯ ಮುಂದೆ ಕೀಲೀಕೈ ಸರವನ್ನು ಬಿಗ್ಗೆದು,

ತಾನು ಪಲಂಗದ ಮೇಲೆ ಹುಶ್‌ಹುಶ್ ಎಂದು ಗಾಳಿಯನ್ನು ಹೊಡೆದುಕೊಳ್ಳುತ್ತ ಕುಳಿತನು. ಯಮುನೆಯು ಸರವನ್ನು ತೆಗೆದುಕೊಂಡು ಆ ಪೆಟ್ಟಿಗೆಯ ಕೀಲಿಯನ್ನು ತೆಗೆಯಹತ್ತಿದಳು; ಆದರೆ ಆ ಮೂರ್ಖಚಿರೋಮಣಿಯು ಆದರ ಕೀಲಿಯನ್ನು ಮುರಿದದ್ದರಿಂದ ಅದು ಬರಲಿಲ್ಲ. ಮತ್ತೆವಿುರಿ ಪ್ರಯತ್ನ ಮಾಡಿದ ಮೇಲೆ ನಿರಾಶಳಾಗಿ ಯಮುನೆಯು:—" ಪೆಟ್ಟಿಗೆಯ ಕೀಲಿಯನ್ನು ಮುರಿದು ಬಿಟ್ಟಿರುವಿರಿ. ಅದನ್ನು ಈಗ ಕಾರಖಾನಿಂದ ತೆಗಿಸಲಿಕ್ಕೆಬೇಕು; ಇಲ್ಲವಾದರೆ ಅದು ಎಂದೂ ತೆಗೆಯಲಿಕ್ಕೆ ಬರುವಂತಿಲ್ಲ. "

ಈ ಮಾತು ಕೇಳಿ ಧೋಂಡೀರಾಜನು ಹೆಣ್ಣು ಜಿಗರೆಯ ಮೇಲೆ ಹುಲಿಯು ಕೆರಳಿ ಹೋಗುವಂತೆ ಯಮುನೆಯ ಮೈಮೇಲೆ ಹೋದನು; ಮತ್ತು ಅವನು ಯಮುನೆಯನ್ನು ಎರಡೂ ಕೈಗಳಿಂದ ಗುದ್ದಿಗುದ್ದಿ ಹಣ್ಣು ಮಾಡಿ, ನಂತರ ಅವಳನ್ನು ಮೇಲಕ್ಕೆತ್ತಿ ದೂರಸಿಡಿದು ಬೀಳುವಂತೆ ಒಗೆದನು. ಅದರಿಂದ ಯಮುನೆಯು ಬಂದು ಗೋಡೆಗೆ ಹೋಗಿ ಬಿದ್ದಳು. ಗೋಡೆಗೆ ತಾಕಿ ಅವಳ ತಲೆಯೊಡೆದದ್ದರಿಂದ, ರಕ್ತವು " ಎತ್ತರವಾದ ಸ್ಥಳದಿಂದ ಬೀಳುವ ಸಣ್ಣ ಝರಿಯಂತೆ " ಪುಟಿಯಹತ್ತಿತು. ಕೆಲಹೊತ್ತಿನ ಮೇಲೆ ಅವಳ ಬಹಿರಿಂದ್ರಿಯ ವ್ಯಾಪಾರಗಳೆಲ್ಲ ಕಟ್ಟಾದವು; ಆದರೂ ಆ ಪಾಷಾಣ ಹೃದಯನಾದ ಧೋಂಡೀರಾಜನ ಹೊಡೆಯುವ ಕೆಲಸವು ನಡೆದೇ ಇತ್ತು. ಮತ್ತೆ ಬಿದ್ದ ೦ಷ, ಕೀಲೀಕೈ ಸರವನ್ನು ತೆಗೆದುಕೊಂಡು, ಪೆಟ್ಟಿಗೆಯ ಕೀಲಿಯನ್ನು ತೆಗೆಯಹತ್ತಿದನು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಕಡೆಗೆ ಬೇಸರವು ಬಂದು ಆ ಪೆಟ್ಟಿಗೆಯನ್ನು ಮುರಿಯಬೇಕೆಂದು, ಅದಕ್ಕೂ ಹೊಡೆಯಹತ್ತಿದನು. ಆದರೆ ಪೆಟ್ಟಿಗೆಯು ಒಳ್ಳೇ ಗಟ್ಟಿಮುಟ್ಟಾಗಿದ್ದರಿಂದ, ಅದನ್ನು ಮುರಿಯುವ ಪ್ರಯತ್ನವೂ ಅವನಿಗೆ ಈಡೇರುವಂತಿದ್ದಿಲ್ಲ. ಪೆಟ್ಟಿಗೆಯು ಮುರಿಯುವದಿಲ್ಲವೆಂದು ಅವನಿಗೆ ತಿಳಿದ ಕೂಡಲೆ ಅವನ ಸಂತಾಪವು ಮತ್ತಿಷ್ಟು ಅಧಿಕವಾಯಿತು. ನಿರ್ಜೀವಿಯಾದ ಪೆಟ್ಟಿಗೆಯನ್ನು ಹೊಡೆಯುವದರಿಂದ ಅವನಿಗೇನೂ ಸಮಾಧಾನವಾಗಲಿಲ್ಲ. ಮೂರ್ಛಾಗತಳಾಗಿ ಬಿದ್ದ ಯಮುನೆಯ ಕಡೆಗೆ ನೋಡಿ, ನರಿನರಿ ಹಲ್ಲುಕಡಿಯುತ್ತ, ತುಟಿಯನ್ನು ಬಂವೇಸವನೆ ಹೊರಳಾಡಿಸುತ್ತ ಧೋಂಡೀರಾಜನು ಅವಳನ್ನು ಮತ್ತೆ ತಳಿಸಲಿಕ್ಕೆ ಪ್ರಾರಂಭಿಸಿದನು. ಕೈಯ ಹೊಡತವು ಅವ

ನಿನಿಗೆ ಬಹಳ ತುಚ್ಛೀಕಾರವಾಗಿ ಕಾಣಿಸಿತು. ಅವನು ಯವಾವತಾರವನ್ನು ತಾಳಿ, ಕಲ್ಲು-ಕಟ್ಟಿಗೆಗಳನ್ನು ತೆಗೆದುಕೊಂಡು, ಅವಳನ್ನು ಹೊಡೆಯಹತ್ತಿದನು; ಅಸಹ್ಯವಾದ ಬಾಯಿಯಿಂದ ಅಭದ್ರ ಶಬ್ದವನ್ನು ಉಚ್ಚರಿಸಲಾರಂಭಿದನು. ಆ ಸರ್ವಾಂಗ ಸುಂದರಳಾದ ಕೋಮಲೆಯ ಶೋಕಾವಸ್ಥೆಯನ್ನು ನೋಡಿ, ಪಾಷಾಣವು ಕೂಡ ಕರಗುತ್ತಿತ್ತು! ಪ್ರಳಯಕಾಲದ ಭೈರವನಿಗೂ ಕೂಡ ದಯೆಯು ಬರುತ್ತಿತ್ತು!! ರಾಕ್ಷಸನ ಹೃದಯದಲ್ಲಿ ನಿಶ್ಚಯವಾಗಿ ಕರುಣವು ಹುಟ್ಟುತ್ತಿತ್ತು!!! ಆದರೆ ಆ ಚಾಂಡಾಲ ಧೋಂಡೀರಾಜನ ಹೃದಯದಲ್ಲಿ ದಯೆಯು ಹುಟ್ಟಲಿಲ್ಲ. ಸುರಾಪಾನದ ರಂಗಿನಲ್ಲಿದ್ದ ಅವನು ಆ ಸಾಧ್ವಿಯ ದೇಹವನ್ನು ರಕ್ತದಿಂದ ಮುಳುಗಿಸಿದನು. ಯಮುನೆಯು ಧೋಂಡೀರಾಜನ ಕೈಹೊಡತ-ಕಲ್ಲಿನ ಹೊಡತ-ಕಟ್ಟಿಗೆಯ ಹೊಡತಗಳಿಂದ ಅಸನ್ನ ಮರಣೋನ್ಮುಖಿಯಾಗಿ ಬಿದ್ದಿದ್ದಳು; ಆದರೆ ಯಾವತ್ತೂ ಜಗತ್ತಿನ ಪ್ರಾಣಿಗಳ ಪ್ರಾಣಗಳನ್ನು ಸೆಳಕೊಂಡು ಹೋಗುವ ಯಮನು ಅವಳಿಂದ ದೂರವಾಗಿಯೇ ಓಡುತ್ತಿದ್ದನು. ಒಂದು ವೇಳೆ ಧೋಂಡೀರಾಜನ ಮನಸ್ಸು ಆಗ ಅವನನ್ನು ವಾರಾಂಗನೆಯ ಕಡೆಗೆ ಜಿಗ್ಗದಿದ್ದರೆ, ಅವನು ನಿಶ್ಚಯವಾಗಿ ಅದೇ ರಾತ್ರಿಯಲ್ಲಿಯೇ ಅನಾಥಳಾದ ಯಮುನೆಯನ್ನು ತಾನೇ ಯಮಾಲಯಕ್ಕೆ ಎಳಕೊಂಡು ಹೋಗಿ ಹಾಕುತ್ತಿದ್ದನು; ಆದರೆ ಅವನಿಗೆ ವೇಶ್ಯಳಹತ್ತರ ಹೋಗುವದು ಅತ್ಯವಶ್ಯವಿದ್ದದರಿಂದ, ಆಸನ್ನ ಮರಣಿಯಾದ ಯಮುನೆಯನ್ನು ಹಾಗೇ ಜಲ್ಲಿಕೊಟ್ಟು, ಅವನು ಹೊರಟು ಹೋದನು. ದೀನಳಾದ ಯಮುನೆಯು "ದುರ್ಧರವಾದ ಶಿಲೆಯ ಆಘಾತದಿಂದ ಮೃದುವಾದ ಪುಷ್ಪವು ಗಿಜಿಗಿಜಿಯಾಗುವಂತೆ" ಗಿಜಿಗಿಜಿಯಾಗಿದ್ದಳು. ಪುಷ್ಪವೆಂದರೆ ಅದೇ ಪುಸ್ಸ! ಚತುರರು ಅದನ್ನು ಶಿರದಲ್ಲಿ ಧಾರಣ ಮಾಡುತ್ತಾರೆ, ಮೂರ್ಖರು ಅದನ್ನೇ ಅಂಗಾಲ ತಳದಲ್ಲಿ ಹಾಕಿ ತುಳಿಯುತ್ತಾರೆ!!

೬ನೆಯ ಪ್ರಕರಣ—ಕಾಳಿ.

ಯಮುನೆಯ ಸ್ಥಿತಿಯು ಬಹಳ ದುಃಖಮಯವಾಗಿತ್ತು. ಅವಳ ಪತಿ, ಅವಳ ಅತ್ತೆ-ಮಾವಂದಿರು, ಮೊದಲಾದ ಎಲ್ಲ ಜನರು ಅವಳನ್ನು ಅಗ

ಣ್ಯವಾಗಿ ಥಳಿಸುತ್ತಿದ್ದರು. ಪರದೇಶಿಯಾದ ಯಮುನೆಯು ಸಂಭವಿಸುವ ಪೀಡೆಯನ್ನು ಉಪಾಯವಿಲ್ಲದೆ ತಾಳಿಕೊಳ್ಳುತ್ತಿದ್ದಳು. ಅವಳಿಗೆ ಈಶ್ವರನು ಒಳ್ಳೇ ಬುದ್ಧಿಸಾಮರ್ಥ್ಯವನ್ನು ಕೊಟ್ಟಿದ್ದರೂ, ಆ ಬುದ್ಧಿಸಾಮರ್ಥ್ಯದ ಮೇಲೆ ಅವಳದೇನೂ ಸತ್ತೆಯಿದ್ದಿಲ್ಲ. ಮುಂಗಡ ಹಣ ಕೊಟ್ಟು ಇಟ್ಟು ಕೊಂಡ ಆಳಿನಂತೆ ಯಮುನೆಯ ಸ್ಥಿತಿಯು ಇತ್ತು. ವಿಶ್ವನಾಥರಾಯನ ಮನೆಯಲ್ಲಿ ಆ ಗೃಹಲಕ್ಷ್ಮಿಯ ಯೋಗ್ಯತೆಯು ಮೂಕ ಜನಾವರಕ್ಕಿಂತಲೂ ಕನಿಷ್ಠ ತರದ್ದಾಗಿತ್ತು. ವಿಶೇಷತಃ ಧೋಂಡೀರಾಜನು ಪ್ರತ್ಯಹೀ ಅವಳನ್ನು ಅನೇಕ ಮುಖದಿಂದ ಪೀಡಿಸುತ್ತಿದ್ದನು.

ಧೋಂಡೀರಾಜನು 'ರಂಗೂ' ಎಂಬ ಹೆಸರಿನ ವೇಶ್ಯೆಯ ಪ್ರೇಕಿಯ ವನಾಗಿದ್ದನು. ರಂಗೂ ಇವಳು ಅವನ ಮುಖ್ಯ ಆರಾಧ್ಯ-ದೇವತೆಯಾಗಿ ದ್ದಳು. ಅವಳ ಸೇವಾ-ಶುಶ್ರೂಷೆಯ ಹೊರ್ತು ಅವನಿಗೆ ಇತರ ಉದ್ಯೋಗವೇ ಇದ್ದಿಲ್ಲ. ರಂಗುವು ಯಮುನೆಗಿಂತ ಸುಂದರಳೂ, ಸುಶಿಕ್ಷಿತಳೂ ಇದ್ದಾಳೆಂದು ಅವಳ ಮೇಲೆ ಧೋಂಡೀರಾಜನದು ಇಷ್ಟು ಪ್ರೇಮವು ಕೂಡಿ ರಬಹುದೆಂದು ಯಾರಾದರೂ ತರ್ಕಿಸಿದರೆ ಅದು ಭ್ರಾಮಕ ಕಲ್ಪನೆಯೇ ಸರಿ. ಯಮುನೆಯು ಎಷ್ಟು ಸುಂದರಳೂ, ಸುಶಿಕ್ಷಿತಳೂ, ಸುಶೀಲಳೂ ಆಗಿ ದ್ದಳೋ ಅಷ್ಟು ರಂಗುವು ಕುರೂಪಳಳ, ಅಶಿಕ್ಷಿತಳೂ ಅಶೀಲಳೂ ಆಗಿ ದ್ದಳು. ಒಟ್ಟಿಗೆ ಯಮುನೆಯ ಪುಣ್ಯಮಯ ಸ್ವರ್ಗದಲ್ಲಿಯ ದೇವಿಯಂತೆ ಯೂ, ರಂಗುವು ಪಾಪಮಯ ನರಕದಲ್ಲಿಯ ದಾಸಿಯಂತೆಯೂ ಇದ್ದರು. ಈ ಪ್ರಕಾರವಾಗಿ ಇಬ್ಬರಲ್ಲಿ ಕುಲ-ಗೋತ್ರ-ವಿದ್ಯಾ-ನೀತಿ-ಆಚರಣೆ ಮೊದ ಲಾದವುಗಳಲ್ಲಿ ಭೂಮ್ಯಾಕಾಶಗಳಷ್ಟು ಅಂತರವಿತ್ತು. ಹೀಗಿದ್ದರೂ ಅವಿ ಚಾರಿ-ತಜ್ಞನೆ-ಮದಾಂಧ-ದುರ್ವ್ಯಸನಿಯಾದ ಧೋಂಡೀರಾಜನು ರಂಗುವ ನ್ನು ಕಂಠದೊಳಗಿನ ಸುವರ್ಣದ ತಗಡಿನಿಂದ ಆಚ್ಛಾದನವಾದ ತಾಯತ ಕ್ಕಿಂತಲೂ ಹೆಚ್ಚಿಗೆ ಜಾಗ್ರತೆಯಿಂದ ಕಾಯುತ್ತಿದ್ದನು. ಈ ವಿಲಕ್ಷಣ ಪ್ರೀತಿಯ ಸಂಯೋಗವನ್ನು ಬ್ರಹ್ಮನಿಂದಾದರೂ ದೂರೀಕರಿಸಲಿಕ್ಕೆ ಸಾಮ ರ್ಥ್ಯವಿತ್ತೋ ಇಲ್ಲೋ ಯಾರಿಗೆ ಅರಿಕೆ! ಯಾವಳ ದುರ್ಮುಖವನ್ನು ಕೂಡ ನೋಡಲಿಕ್ಕೆ ಅತಿಶಯ ಕುರೂಪಿಯೂ, ಅವಯವಹೀನನೂ, ಕೀಳಜಾ ತಿಯವನೂ ಆದ ಮಾನವಕೆನಿಷ್ಟನ ನೋಟವು ಹಿಂದೆಮುಂದೆ ನೋಡುತ್ತಿ

ತ್ರೋ, ಆ ರಂಗುವಿನ ಪಕ್ಕದಲ್ಲಿ ಸತ್ಕುಲೋತ್ಪನ್ನನೂ, ಲಕ್ಷ್ಮೀಪುತ್ರನೂ ಅಧಿಕಾರವಂತನೂ ಆದ ಭೋಂಡೀರಾಜನು ಇಪ್ಪತ್ತುನಾಲ್ಕು ತಾಸು ಬಿದ್ದು ಕೊಂಡಿರುತ್ತಿದ್ದನು. ಅತಿ ದುರ್ಗಂಧವಾದ ಮದ್ಯದ ಅಡರ ವ್ಯಂಜನಕ್ಕೆ ಬೇಕಾಗುವ ಮಾಂಸದ ಹೊರ್ತು ಇತರ ಪದಾರ್ಥಗಳು ಅವನಿಗೆ ಸವಿಯೆನಿಸುತ್ತಿದ್ದಿಲ್ಲ. ಈ ಕಾರ್ಯಕ್ಕೆ ರಂಗುವಿನ ಮನೆಯು ಅನುಕೂಲವಾಗಿದ್ದರಿಂದ ರಂಗುವು ಮತ್ತಿಪ್ಪ ಅವನ ಪ್ರೀತಿಗೆ ಕಾರಣಳಾಗಿದ್ದಳು. ಈ ಕೆಲಸಕ್ಕೆ ಪ್ರತಿನಿತ್ಯ ೪-೫ ರೂಪಾಯಿಗಳ ಖರ್ಚು ತಗಲುತ್ತಿತ್ತು. ಯೋಗ್ಯರೀತಿಯಿಂದ ಧನಸಂಪಾದನೆ ಮಾಡುವದಂತೂ ಅವನು ಮೊದಲೆ ಅರಿಯನು. ಶ್ರೀಮಂತರ ಮಗನಾದ್ದರಿಂದ ಮನೆಯಲ್ಲಿ ಏನಾದರೂ ನೆವ ಹೇಳಿ, ಅಲ್ಲಿಂ ಕೆಲವು ಹಣವನ್ನೂ, ಹೊರಗೆ ಬಡಜನರಿಗೆ ತನ್ನ ತಂದೆಯ ಆನರರೀ ಮ್ಯಾಜಿಸ್ಟ್ರೇಟದ ಅಧಿಕಾರವನ್ನು ಕೋರಿಸಿ ಅವರಿಂದ ಕೆಲವು ಹಣವನ್ನು ಎಬ್ಬಿಸಿ ತನ್ನ ಕಾರ್ಯವನ್ನು ಅವಿಚ್ಛಿನ್ನವಾಗಿ ನಾಗಿಸುತ್ತಿದ್ದನು. ಅವನ ತಾಯಿತಂದೆಗಳಂತೂ ಅವನ ಕಡೆಗೆ ಸ್ವಲ್ಪಾದರೂ ಲಕ್ಷಗೊಡುತ್ತಿದ್ದಿಲ್ಲ. ಮಗನ ದುರ್ವರ್ತನವನ್ನು ಯಾರಾದರೂ ಕವಿಯ ಮೇಲೆ ಹಾಕಿದರೆ, "ಅಲ್ಪವಯಸ್ಕನಿದ್ದಾನೆ, ಬರುಬರುತ್ತ ತಿಳಿದೇ ತಿಳಿಯುತ್ತದೆ" ಎಂಬದಾಗಿ ವಿಶ್ವನಾಥರಾಯನು ಬಿಂಕದ ಉತ್ತರವನ್ನು ಕೊಡುತ್ತಿದ್ದನು.

ಯಮುನೆಯು ಎಂದೋ ಒಂದು ದಿವಸ ತನ್ನ ತುರುಬಿನಲ್ಲಿ ಬಂಗಾರದ ಗುಲಾಬೀ ಹೂವನ್ನು ಇಟ್ಟುಕೊಂಡಿದ್ದಳು. ಅಂದು ಆ ಹೂವು ರಂಗುವಿನ ದೃಷ್ಟಿಗೆ ಬಿದ್ದ ಕೂಡಲೆ ಅವಳು ಭೋಂಡೀರಾಜನಿಗೆ ಹೇಳಿದ್ದೇನಂದರೆ:—"ನನಗೆ ಅದೇ ಹೂವು ಬೇಕು, ಇಂದು ರಾತ್ರಿ ಆ ಹೂವನ್ನು ತಾರದೆ ಬಂದರೆ, ನಾನು ನಿನಗೆ ನನ್ನ ಮನೆಯ ಹೊಸ್ತಿಲನ್ನು ಕೂಡ ತಡಹಾಯಗೊಡುವದಿಲ್ಲ" ಎಂದು ಹೇಳಿದ್ದಳು. ಕಾರಣ ತನ್ನ ಪ್ರಿಯ ರಂಗುವಿನ ಸಲುವಾಗಿ ಯಮುನೆಯನ್ನು ಆ ಹೂವು ಕೊಡುವದಕ್ಕಾಗಿ ಪರಿವರಿಗೋಳಾಡಿಸುತ್ತಿದ್ದನು. ಅವನ ಆ ಪ್ರಯತ್ನವು ಕಡೆಗೆ ಏನಾಯಿತೆಂಬುವದು ವಾಚಕರಿಗೆ ಹಿಂದಿನ ಪ್ರಕರಣದಲ್ಲಿ ಗೊತ್ತಾಗಿರುತ್ತದೆ. ಈ ಪ್ರಕಾರವಾಗಿ ಯಮುನೆಯನ್ನು ಪೀಡಿಸದ ದಿವಸವೇ ಇದ್ದಿಲ್ಲ. ಅವಳ ಅತ್ಯಮಾನವ ರಾಕ್ಷಸಕ್ರೂರತನವನ್ನು ವರ್ಣಿಸಲಿಕ್ಕೆ ಒಂದು ಕಾದಂಬರಿಯಿಂದಾಗದು! ಅವನ

ರ ಕ್ರೂರತನವು ಪ್ರಳಯಕಾಲದ ಯಮನಿಗಿಂತಲೂ ಹೆಚ್ಚಿನದಾಗಿತ್ತು. ಸ್ತ್ರೀಯರು ಅತ್ತೆಯರಾದರೆಂದರೆ - ತಾವು ಮೊದಲು ಸೊಸೆಯರಿದ್ದೆವೆಂಬುವದನ್ನು ಮರೆತು ಬಿಡುತ್ತಾರೆ. ಅದರಲ್ಲಿ ರಾಧಾಬಾಯಿಯಂಥ ಸ್ತ್ರೀಯರಿಗೆ ಅತ್ತೆಯು ಗಾದೆಯು ಹೆಕ್ಕು ದೊರೆತಿತೆಂದರೆ, ಅವರಿಗೆ ಬ್ರಹ್ಮಪದವೇ ಸಿಕ್ಕಂತಾಗುತ್ತದೆ, ಎಷ್ಟೋ ಸ್ತ್ರೀಯರು ತಾವು ಸೊಸೆಯರಿರುವಾಗ್ಗೆ ತಮ್ಮ ಅತ್ತೆಯರು ಎಷ್ಟು ತೊಂದರೆಗೊಡುತ್ತಿದ್ದರೋ, ಅದರ ಇಮ್ಮಡಿ ಮುಮ್ಮಡಿ ತೊಂದರೆಯನ್ನು ತಾವು ಅತ್ತೆಯರಾದಾಗ್ಗೆ ತಮ್ಮ ಸೊಸೆಯರಿಗೆ ಕೊಡಬೇಕೆಂದು ಸಂಕಲ್ಪ ಮಾಡಿರುತ್ತಾರೆ. ಒಬ್ಬರಾದರೂ ತಮ್ಮ ಸೊಸೆಯನ್ನು ಹೊಟ್ಟೆಯ ಮಕ್ಕಳಂತೆ ಭಾವಿಸಿ, ಅವಳನ್ನು ಸುಖ-ಸಮಾಧಾನಗಳಿಂದ ಸಂತುಷ್ಟಿ ಸಬೇಕೆಂದು ಇಚ್ಛಿಸುವದಿಲ್ಲ. ಸಮಾಜದಲ್ಲಿ ಲಕ್ಷಗಟ್ಟಲೆ ಸ್ತ್ರೀಯರು ರಾಧಾಬಾಯಿಯ ಮಾಲಿಕೆಯಲ್ಲಿ ಸೇರಿದವರೇ ಇರುತ್ತಾರೆ. ಇಂಥ ಸ್ತ್ರೀಯರು ಸೊಸೆಯನ್ನು ದನವಿನಂತೆ ತಿಳಿಯುತ್ತಾರೆ, ಸೊಸೆಯರನ್ನು ಪಶುವಿನಂತೆ ನಡೆಸಿಕೊಳ್ಳುತ್ತಾರೆ, ಪಶುವಿನಂತೆ ದುಡಿಸುತ್ತಾರೆ, ಪಶುವಿನಂತೆ ಹೊಡೆಯುತ್ತಾರೆ, ಬಡಿಯುತ್ತಾರೆ, ಬಯ್ಯುತ್ತಾರೆ. ಈ ಪ್ರಕಾರವಾದ ಘೋರ ಕೃತ್ಯವನ್ನು ಮಾಡುವವರಿಂದ "ಅತ್ತೆ" ಇದು ಬಂದು ಭಯಪ್ರದ ಶಬ್ದವಾಗಿದೆ. ಬಲಾತ್ಕಾರದಿಂದ ನಡೆಸಿಕೊಳ್ಳುವಂಥ ಅಧಿಕಾರಿಯನ್ನು ಕಂಡು ಕೈಕೆಳಗಿನವನೂ, ಅಪ್ಪಟಕ್ಕೆ ಹೊಡೆಯುವದೂ-ಬಯ್ಯುವದೂ, ಇಷ್ಟಕ್ಕೆ ಹೊಡೆಯುವದೂ-ಬಯ್ಯುವದೂ ಮಾಡುವಂಥ ಶಿಕ್ಷಕನನ್ನು ಕಂಡು ವಿದ್ಯಾರ್ಥಿಗಳು ಥರಥರ ನಡುಗುವಂತೆ ಅತ್ತೆಯರನ್ನು ಕಂಡು ಎಷ್ಟೋ ಸೊಸೆಯರು ಗದಗದ ನಡುಗುತ್ತಿರುತ್ತಾರೆ. ವಾಚಕರೇ, ಇದರ ಮೇಲಿಂದ 'ಅತ್ತೆ' ಎಂಬ ಎರಡಕ್ಷರದಲ್ಲಿ ಎಷ್ಟು ಭಯಂಕರತೆಯು ತುಂಬಿ ಹೊರಸೂಸುತ್ತದೆ ನೋಡಿರಿ. ಪಶುಗಳಿಗೆ ಆಗುವ ತೊಂದರೆಯನ್ನು ದೂರ ಮಾಡುವದಕ್ಕಾಗಿ ನಮ್ಮ ಸಮಾಜದ ಮುಖ್ಯ ಮುಖ್ಯ ಜನರು "ಪಶುಕ್ಲೇಶನಿವಾರಣೀ" ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಆ ಸಂಸ್ಥೆಯ ಮುಖಾಂತರ ಪಶುಕ್ಲೇಶ ನಿವಾರಣೆಯ ಕೆಲಸವನ್ನು ತ್ವರೆಯಿಂದ ನಡೆಸಿರುತ್ತಾರೆ. ಪಶುಗಳಿಗೆ ಯಾರೂ ಹೊಡೆಯಬಾರದೆಂದೂ, ಅವುಗಳ ಮೇಲೆ ಬಹಳ ಭಾರವನ್ನು ಹಾಕಬಾರದೆಂದೂ, ಅವುಗಳನ್ನು ಬಹಳ ವೇಳೆಯವರೆಗೆ ಕೆಲಸಕ್ಕೆ ಹಚ್ಚಬಾರದೆಂದೂ,

ಸೆವುಗಳ ಸಂರಕ್ಷಣೆಯ ವಿಷಯದಲ್ಲಿ ಬಹಳ ಲಕ್ಷವಿರಬೇಕೆಂದೂ ಆ ಸಂ
ಸ್ಥೆಯ ನಿಯಮಗಳಿದ್ದು, ಆ ಸಂಸ್ಥೆಯ ವಿರುದ್ಧವಾಗಿ ಯಾರಾದರೂ ನೆಡೆ
ದರೆ ಖಟ್ಲೆಯನ್ನು ಮಾಡಿ ಅವರನ್ನು ಘನತರವಾದ ದಂಡನೆಗೆ ಗುರಿಮಾಡ
ಬೇಕೆಂದು ನಿಶ್ಚಯಿಸಲ್ಪಟ್ಟಿದೆ. ಆದರೆ ನಮ್ಮ ಸಮಾಜದಲ್ಲಿ ಪ್ರತಿಯೊಂದು
ಮನೆಯಲ್ಲಿ ಸೊಸೆಯೆಂಬವಳಿಗೆ ವಿಪರೀತವಾದ ತೊಂದರೆಯಿದ್ದು, ಅವಳ
ದ ಋನಿವಾರಣೆಯ ಜವಾಬುದಾರಿಯನ್ನು ಒಬ್ಬರಾದರೂ ತಲೆಯ ಮೇಲೆ
ತೆಗೆದುಕೊಳ್ಳದೆ ಇರುವದು ಸಖೇದಾಶ್ಚರ್ಯವಾದ ಸಂಗತಿಯು. ಇದರ
ಮೇಲಿಂದ ವಿಚಾರಿಸಿದರೆ ಸೊಸೆಯು ಪಶುವಿಗಿಂತಲೂ ಕನಿಷ್ಟಳು! ಅವಳು
ಪಶುವಿಗಿಂತಲೂ ದುರ್ದೈವಿ!! ಎಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಹುಂಗನೆ ಕೈಯಲ್ಲಿ ಮಾಣಿಕವು ಸಿಕ್ಕಂತೆ ರಾಧಾಬಾಯಿಯ ಕೈಯಲ್ಲಿ
ಯಮುನೆಯು ಸಿಕ್ಕಿದ್ದಳು. ಯಮುನೆಯನ್ನು ನೋಡಿದ ಕೂಡಲೆ ರಾಧಾ
ಬಾಯಿಯ ಕಣ್ಣುಗಳಲ್ಲಿ ಕೋಪದ ಕೆಂಗಿಡಿಗಳು ಹೊರಸ್ಸೂಸುತ್ತಿದ್ದವು.
ಬಯ್ಯುವದಕ್ಕೆ ನಾಲಿಗೆಯು ಹೊರಳಾಡುತ್ತಿತ್ತು, ಹೊಡೆಯುವದಕ್ಕೆ ಕೈಗಳು
ಹಾತರಿಯುತ್ತಿದ್ದವು. ಅತ್ತೆಗೆ ಸೊಸೆಯನ್ನು ಉರಿಸಲಿಕ್ಕೆ ಅನುಕೂಲವಾದ
ಎಲ್ಲ ಪ್ರಯೋಗಗಳನ್ನು ರಾಧಾಬಾಯಿಯು ಯಮುನೆಯ ಮೇಲೆ ಮಾಡುತ್ತಿ
ದ್ದಳು. ಒಂದುದಿವಸ ರಾಧಾಬಾಯಿಯು ನೆಲ್ಲಕ್ಕೀ ಅನ್ನವನ್ನು ಮಾಡಿದ್ದಳು.
ಯಮುನೆಯು ಊಟದ ಕಾಲದಲ್ಲಿ ಸಹಜವಾಗಿ:—"ಅನ್ನದಲ್ಲಿ ಆಷ್ಟೇನೂ
ಭತ್ತವಿಲ್ಲ" ಎಂದಳು. ಇಷ್ಟಕ್ಕೆ ರಾಧಾಬಾಯಿಯು ಒಳ್ಳೇ ಕೋಪದಿಂದ
ಯಮುನೆಯನ್ನು ಹೊಟ್ಟೆಯುರಿಯುವ ಮಾತುಗಳಿಂದಲೂ, ಮೈನುಗ್ಗಾಗುವ
ಹೊಡತಗಳಿಂದಲೂ ತಲ್ಲಣಗೊಳಿಸಿದಳು. ಒಂದು ದಿವಸ ಏನೋ ಕಾರಣ
ದಿಂದ ಯಮುನೆಯ ಸೀರೆಗೆ ಬೆಂಕಿಹತ್ತಿ ಸ್ವಲ್ಪ ಅದು ಸುಟ್ಟದ್ದರಿಂದ, ರಾ
ಧಾಬಾಯಿಯು ಎರಡು ವರ್ಷದ ತನಕ ಯಮುನೆಯನ್ನು ಆ ಹರಕ ಸೀರೆ
ಯಲ್ಲಿಯೇ ಇಟ್ಟಿದ್ದಳು. ನಾವು ಈಪ್ರಕಾರವಾಗಿ ಉಲ್ಲೇಖಿಸಿರುವದಕ್ಕೆ
ನಮ್ಮ ಎಷ್ಟೋ ವಾಚಕೋತ್ತಮರು ನಮ್ಮ ಲೇಖನವು ಅತಿಶಯೋಕ್ತಿಯ
ಲೇಖನವೆಂದು ಭಾವಿಸಬಹುದು. ಅಥವಾ ಕಾದಂಬರೀಕಾರರಿಗೆ ಅತಿಶ
ಯೋಕ್ತಿಯ ಲೇಖನ ಬರೆಯಲಿಕ್ಕೆ ಔತ್ಸುಕ್ಯವಿರುತ್ತದೆಂದು ನಮ್ಮ ಮೇಲೆ
ಆರೋಪಿಸಲಾವಾದ ಭಾರವನ್ನು ಹೊರಿಸಬಹುದು; ಆದರೆ ಮೇಲಿನ ವರ್ಣ

ನೆಯು ಅತಿಶಯೋಕ್ತಿಯದಲ್ಲದಿದ್ದು, ಅಕ್ಷರಶಃ ನಿಜವಿರುತ್ತದೆಂದು ಅವರಿಗೆ ನಾವು ನಿಶ್ಚಯದಿಂದ ಹೇಳುತ್ತೇವೆ. ಯಮುನೆಯು ಮೇಲಿನ ಯಾವತ್ತೂ ದಂಡನೆಯನ್ನು ಭೋಗಿಸುತ್ತಿದ್ದ ಸಂಗತಿಯು ಸತ್ಯವಾದದ್ದಾದೆ. ಅವಳು ಇಷ್ಟು ಕಷ್ಟಬಡಲಿಕ್ಕೆ ಅವಳ ದುರ್ದೈವವೇ ಕಾರಣವು ಹೊರ್ತು ಎರಡನೆಯ ಯಾವ ಕಾರಣವೂ ಇಲ್ಲವೆಂದು ನಮ್ಮ ತಿಳುವಳಿಕೆಯಿರುತ್ತದೆ.

ಜಗತ್ತಿನಲ್ಲಿ ಗುಲಾಮತನವನ್ನು ಮಾಡುವದು ಬಹು ಕಠಿಣವೆಂದೂ, ಪರದಾಸ್ಯವನ್ನು ಮಾಡುವದು ಬಹು ತುಚ್ಛೀಕರಣವೆಂದೂ, ಪಶುವಿನ ಸ್ಥಿತಿಯು ಕೋಚನೀಯ ಸ್ಥಿತಿಯೆಂದೂ ಹಲವು ಜನರ ನಂಬಿಕೆಯುಂಟು. ಆದರೆ ಸೂಕ್ಷ್ಮರೀತಿಯಿಂದ ವಿಚಾರಿಸಿದರೆ, ಜಗತ್ತಿನಲ್ಲಿ ಸೊಸೆಯ ಕಾರ್ಯದ ಮುಂದೆ ಗುಲಾಮತ್ತನವು ಎಂದೂ ಕಠಿಣವಾಗಲಾರದು. ಸೊಸೆಯ ಮುಂದೆ ಪರದಾಸತ್ವವು ಎಂದೂ ತುಚ್ಛೀಕಾರವಾಗದು. ಸೊಸೆಯ ಕೋಚನೀಯ ಸ್ಥಿತಿಗಿಂತ ಪಶುವಿನ ಕೋಚನೀಯ ಸ್ಥಿತಿಯು ಎಂದೂ ಹೆಚ್ಚಾಗಲಾರದು.

ನಮ್ಮ ಸಮಾಜದಲ್ಲಿಯ ಮುಖ್ಯ ಜನರು ಸಮಾಜದಲ್ಲಿ ದೊಡ್ಡ ದೊಡ್ಡ ಸುಧಾರಣೆಗಳನ್ನು ಮಾಡಲಿಕ್ಕೆ ಅವಿಶ್ರಾಂತ ಶ್ರಮವನ್ನು ಕಕ್ಕೊಳ್ಳುತ್ತಿರುತ್ತಾರೆ. ಆದರೆ ಪ್ರತಿಯೊಂದು ಕುಟುಂಬದಲ್ಲಿ ಅತ್ತೆಯಿಂದಾಗತಕ್ಕ ದುಷ್ಪರಿಣಾಮದ ಸಂಬಂಧವಾಗಿ ಒಬ್ಬರೂ ಆಲೋಚಿಸುವದಿಲ್ಲ. ಅತ್ತೆಯ ನಡಾವಳಿಯನ್ನು ಸುಧಾರಿಸಲಿಕ್ಕೆ ಒಬ್ಬರೂ ಯತ್ನಿಸುವದಿಲ್ಲ. ವಾಚಕ ಬಂಧುಗಳೇ, ತಮಗೆ ಇನ್ನೊಂದು ಸಂಗತಿಯನ್ನು ಹೇಳುವದೇನೆಂದರೆ:— ಎಲ್ಲ ಅತ್ತೆಯರೂ ರಾಧಾಬಾಯಿಯ ವರ್ತನದವರೇ ಇರುತ್ತಾರೆಂದು ಹೇಳಲಿಕ್ಕಾಗದು; ಮತ್ತು ಎಲ್ಲ ಸೊಸೆಯರೂ ಯಮುನೆಯಂತೆ ಸುಶೀಲರೂ, ಸುಶಿಕ್ಷಿತರೂ, ಆಜ್ಞಾಧಾರಕರೂ ಇರುತ್ತಾರೆಂದು ಹೇಳಲಿಕ್ಕಾಗದು. ಹೆಚ್ಚು ಕಡಿಮೆ ಪ್ರಮಾಣವಿಂದ ಎಲ್ಲ ಸ್ಥಳದಲ್ಲಿ ಒಳ್ಳೇ ಕೆಟ್ಟ ಎಂಬ ಎರಡು ಪಕ್ಷಗಳು ಇರುವದು ಯಥಾಕ್ರಮವಾಗಿದೆ. ಸಮಾಜದಲ್ಲಿ ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿದರೆ, ೧೦೦ ಮಂದಿಯಲ್ಲಿ ೯೯ ಮಂದಿ ಸ್ತ್ರೀಯರು ತಮ್ಮ ಸೊಸೆಯರನ್ನು ಗುಲಾಮರಂತೆ ನಡಿಸಿಕೊಳ್ಳುತ್ತಾರೆ. ಸೊಸೆಯರ ಮನಸ್ಸಿನಲ್ಲಿ ಅತ್ತೆಯರು ತಮ್ಮನ್ನು ಪೀಡಿಸುತ್ತಾರೆಂಬ ಭಾವನೆಯು ಮೊದಲೇ ಬೇರು

ಗೊಂಡಿರುವದರಿಂದ, ಅತ್ತೆಯರು ತಮ್ಮ ಕ್ರೂರಕೃತ್ಯವನ್ನು ಪ್ರಾರಂಭಿಸಿದ ಕೂಡಲೆ ಸೊಸೆಯರೂ ಅತ್ತೆಯನ್ನು ಹೀಯಾಳಿಸುವ ತಮ್ಮ ಕಾರ್ಯವನ್ನು ಪ್ರಾರಂಭಿಸಬೇಕೆಂದು ಮುಂದಾಗಿಯೇ ಆಲೋಚಿಸಿರುತ್ತಾರೆ. ಅತ್ತೆಯು ಮಾತೃಸಮಾನವೆಂದು ಭಾವಿಸುವ ಸ್ತ್ರೀಯರು ೧೦೦ ಮಂದಿಯಲ್ಲಿ ಒಬ್ಬರಾದರೂ ದೊರೆಯುತ್ತಾರೋ ಇಲ್ಲೋ.

ಯಮುನೆಗೆ ಒಬ್ಬರ ಕಾಟವಂತಲ್ಲ. ಒತ್ತಟ್ಟಿಗೆ ಅತ್ತೆಯ ಕಾಟ, ಒತ್ತಟ್ಟಿಗೆ ಮಾವನ ಕಾಟ, ಒತ್ತಟ್ಟಿಗೆ ಗಂಡನ ಕಾಟ, ಒತ್ತಟ್ಟಿಗೆ ಮಾಧವ ವೆಂಕಾಯನ ಕಾಟ; ಹೀಗೆ ಅವಳನ್ನು ಸುತ್ತುಮುತ್ತು ಹರಿದುತಿಂಬುವ ಜನರೇ ಅವಳ ಪಾಲಿಗೆ ಗಂಟು ಬಿದ್ದಿದ್ದರು. ಮುಪ್ಪಿನ ಕಾಲದಲ್ಲಿ ತರುಣ ಪೆತ್ನಿಯ ಸಂಯೋಗವಾದ್ದರಿಂದ, ವಿಶ್ವನಾಥರಾಯನು ರಾಧಾಬಾಯಿಯ ಸೂತ್ರದ ಗೊಂಬೆಯಾಗಿದ್ದನು. ರಾಧಾಬಾಯಿಯು ಸೂತ್ರವನ್ನು ತಿರುವಿದಂತೆ ವಿಶ್ವನಾಥರಾಯನು ಕುಣಿಯುತ್ತಿದ್ದನು. ರಾಧಾಬಾಯಿಯು ಪ್ರತಿನಿತ್ಯ ತನಗೆ ಶಕ್ಯವಿದ್ದಷ್ಟು ಯಮುನೆಯನ್ನು ಹಲವು ರೀತಿಯಿಂದ ತಲ್ಲಣಗೊಳಿಸಿ, ಅಷ್ಟಕ್ಕೆ ತೃಪ್ತಳಾಗದೆ ಯಮುನೆಯು ಸಂಬಂಧವಾಗಿ ವಿಶ್ವನಾಥರಾಯನ ಕಡೆಗೆ ಫಿರ್ಯಾದಿಯನ್ನು ನಮೂದ ಮಾಡುತ್ತಿದ್ದಳು. ಅವಳು ವಿಶ್ವನಾಥರಾಯನ ಕಡೆಗೆ ಒಯ್ಯುವ ಅಸಲ ಅರ್ಜಿಯನ್ನು ಒಳ್ಳೇ ವಿಚಾರದಿಂದ ಸಿದ್ಧಪಡಿಸುತ್ತಿದ್ದಳು. ರಾಧಾಬಾಯಿಯು ತನ್ನ ಅರ್ಜಿಯನ್ನು ವಿಶ್ವನಾಥರಾಯನ ಕಡೆಗೆ ನಮೂದ ಮಾಡುವಾಗ, ವಿಶ್ವನಾಥರಾಯನ ವಿಶ್ರಾಂತಿಯ ಮನೆಯ ಬಾಗಿಲದ ಹತ್ತರ ನಿಂತು, ಕಣ್ಣಿಗೆ ಸೀರೆಯ ಸೆರಗನ್ನು ಹಚ್ಚಿ ಅಳುವದಕ್ಕೆ ಆರಂಭಿಸುತ್ತಿದ್ದಳು. ಆ ರೋದನ ಧ್ವನಿಯನ್ನು ಕೇಳಿ ವಿಶ್ವನಾಥರಾಯನು ಗಾಬರಿಯಾಗಿ ಬಾಗಿಲದ ಹತ್ತರ ಬಂದು ಏನಾಯಿತೆಂದು, ವಿಚಾರಿಸುತ್ತಿದ್ದನು. ಈಪ್ರಕಾರ ಎರಡು ಮೂರು ಸಾರೆ ಕೇಳಿದ ಮೇಲೆ ರಾಧಾಬಾಯಿಯು ಮೆಲ್ಲನೆ ತನ್ನ ಪುರಾಣವನ್ನು ಹೇಳಲಿಕ್ಕೆ ಆರಂಭಿಸುತ್ತಿದ್ದಳು. "ಪ್ರಪಂಚದ ಕಡೆಗೆ ಸ್ವಲ್ಪಾದರೂ ಲಕ್ಷಗೊಡುವಂತಿಲ್ಲ. ಇಂಥ ಅಪಮಾನಕಾರಕವಾದ ಮನೆಯಲ್ಲಿ ಇರುವದಕ್ಕಿಂತಲೂ ಮರಣವೇ ಯೋಗ್ಯವಾಗಿ ಕಾಣುತ್ತದೆ. ಕೆಲಸಕ್ಕೆ ಬಾರದ ಯಮುನೆಯು ಇವರು ಚಿಕ್ಕವರು, ಇವರು ಹಿರಿಯರು, ಇವರಿಗೆ ಅಡಬೇಕು—ಇವರಿಗೆ ಅಡಬಾರದು, ಎಂಬದನ್ನು

ಸ್ವಲ್ಪಾದರೂ ಆಲೋಚಿಸದೆ, ಮನಬಂದಂತೆ ನನ್ನ ಮೊದಲಾಗಿ ಮನೆಯ ಜನರನ್ನೆಲ್ಲ ನಿಂದಿಸುತ್ತಾಳೆ. ಇಂಥ ಮರ್ಯಾದೆಯಿಲ್ಲದ ಹಿರಿಯತನವಾಡು ರೂ ನನಗೆ ಯಾತಕ್ಕೆ ಬೇಕಾಗಿದೆ. ನೀವೇ ಸೊಸೆಯನ್ನಿಟ್ಟುಕೊಂಡು ಸುಖದಿಂದ ಇರ್ರಿ. ಹೊರಗಿನ ದೆವ್ವ ಬಂದು ಮನೆಯ ದೇವರನ್ನು ಓಡಿಸಿದಂತೆ ನನ್ನ ಸ್ಥಿತಿ ಇರುವದು. ನನಗೆ ಕಾಶೀಯಾತ್ರೆಗೆ ಕಳುಹಿಸಿಕೊಡಿರಿ. ಅವಳೇ ಮನೆಯ ಯಜಮಾನಿಯಾಗಿ ಸಂಸಾರ ರಥವನ್ನು ನಡಿಸಲಿ! ಮನೆಯಲ್ಲಿ ನಾನೇ ಸೊಸೆ, ಅವಳೇ ಅತ್ತೆಯಾಗಿರುತ್ತಾಳೆ." ಎಂಬ ಪ್ರಸ್ತಾವನೆಯು ಮುಗಿದ ಕೂಡಲೆ ವಿಶ್ವನಾಥರಾಯನು ಕೂಡಲೆ ಯಮುನೆಯ ಹತ್ತಿರ ಬಂದು, ಅವಳನ್ನು ನಿಂದ್ಯದ ಮಾತುಗಳಿಂದಲೂ, ಹೊಡತಗಳಿಂದಲೂ ತಲ್ಲಣಗೊಳಿಸುತ್ತಿದ್ದನು. ಪ್ರತಿನಿತ್ಯ ಹೀಗೆಯೇ ವಿಶ್ವನಾಥರಾಯನಿಂದ ಕಡಿಮೆ ಕಡಿಮೆಯೆಂದರೆ ನೂರಾರು ನಿಂದ್ಯೋಕ್ತಿಗಳ ಪ್ರಸಾದವಾದರೂ ಯಮುನೆಗೆ ಸಿಕ್ಕೇ ಸಿಗುತ್ತಿತ್ತು. ಯಮುನೆಯು ತನ್ನ ಕೆಲಸದಲ್ಲಿ ಬಳ್ಳೀ ದಕ್ಷಳಿದ್ದಳು. ಅವಳು ತನ್ನ ಕೆಲಸವನ್ನು ವೇಳೆ ವೇಳೆಗೆ ಮಾಡಿ ಮುಗಿಸುತ್ತಿದ್ದಳು. ಆದರೆ ಅವಳು ಮಾಡಿದ ಕೆಲಸದಲ್ಲಿ ಅವಳ ಕಣ್ಣು ಮರೆಯಲ್ಲಿ, ರಾಧಾಬಾಯಿಯು ಏನಾದರೂ ಹೆಚ್ಚು ಕಡಿಮೆ ಮಾಡುತ್ತಿದ್ದಳು. ವಿಶ್ವನಾಥರಾಯನ ಸ್ನಾನವಾದ ಕೂಡಲೆ ಸಂಧ್ಯಾ-ವಂದನೆಗಳಿಗೆ ಬ್ಯೇಕಾದ ಸಾಹಿತ್ಯವನ್ನು ಯಮುನೆಯು ಸಿದ್ಧಪಡಿಸಿರುತ್ತಿದ್ದಳು. ಆಗ ರಾಧಾಬಾಯಿಯು ಯಮುನೆಯನ್ನು ಯಾವ ಹೊರಗಿನ ಕೆಲಸಕ್ಕಾದರೂ ಕಳುಹಿಸಿ, ಸಿದ್ಧಪಡಿಸಿಟ್ಟ ಸಾಹಿತ್ಯದಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡುತ್ತಿದ್ದಳು. ಅದನ್ನು ನೋಡಿ ವಿಶ್ವನಾಥರಾಯನು ನಿರಪರಾಧೆಯಾದ ಯಮುನೆಯನ್ನು ಮನಬಂದಂತೆ ಬಯ್ಯುತ್ತಿದ್ದನು. ಆಗ ರಾಧಾಬಾಯಿಯು ಸಂತೋಷಸಾಗರದಲ್ಲಿ ಮುಳುಮುಳುಗೇಳುತ್ತಿದ್ದಳು. ಇರಲಿ.

೮ ಇಂದು ದಿವಸದ ರಾತ್ರಿಯ ಸುದ್ದಿಯು. ಯಮುನೆಯು ತನ್ನ ಕೋಣೆಯಲ್ಲಿ ಮಲಗಿದ್ದಳು. ಧೋಂಡೀರಾಜನು ಯಮುನೆಯ ಕೋಣೆಯಲ್ಲಿ ಬಂದು ಅವಳನ್ನು ಮನಬಂದಂತೆ ಬಯ್ಯುವದೂ, ಹೊಡೆಯುವದೂ ಮಾಡಹತ್ತಿದನು. ರಾಧಾಬಾಯಿಯು ಒತ್ತಿಗೆ ನಿಂತುಕೊಂಡು, ಯಮುನೆಯ ಅವಸ್ಥೆಯನ್ನು ಕಂಡು ಹಿಗ್ಗಿದಳು. ಅವಳು ಮಗನ ಯಮುನೆಗೆ ಅನ್ನುವ

ಸ್ತೋತ್ರಗಳನ್ನೂ ಯಮುನೆಗೆ ಹೊಡೆಯುವೆ ಹೊಡತಗಳನ್ನೂ ಅತ್ಯಾನಂದದಿಂದ ಆಲಿಸುತ್ತಿದ್ದಳು. ಅವಳಿಗೆ ಯಮುನೆಯ ಅಳುವ ಸ್ವರವು ಚನ್ನಾಗಿ ಕೇಳುತ್ತಿತ್ತು. ಆದರೆ ರಾಧಾಬಾಯಿಗೆ ಸ್ವಲ್ಪಾದರೂ ಕರುಣವು ಬರಲಿಲ್ಲ. ಗಾಯನಲುಬ್ಧ ಮನುಷ್ಯನಿಗೆ ಗಾಯನ ಸ್ವರದಿಂದ ಆನಂದವಾಗುವಂತೆ ಯಮುನೆಯ ಅಳುವ ಸ್ವರದಿಂದ ರಾಧಾಬಾಯಿಗೆ ಒಳ್ಳೇ ಆನಂದವಾಗುತ್ತಿತ್ತು. ಭೋಂಡೀರಾಜನ ಕಾಯ್ಕವು ಮುಗಿದ ಕೂಡಲೆ ನಡೆದ್ದ ಸಂಗತಿಯ ಬಗ್ಗೆ ಪ್ರಾತಃಕಾಲದಲ್ಲಿ "ವಿಚಾರಿಸಬೇಕೆಂದಾಲೋಚಿಸಿ, ರಾಧಾಬಾಯಿಯು ತನ್ನ ಮಲ್ಲಗುವ ಮನೆಗೆ ಹೋಗಿ ಸ್ವಸ್ಥವಾಗಿ ಮಲಗಿದಳು. ಎರಡನೇ ದಿವಸದ ಪ್ರಾತಃಕಾಲ. ಯಮುನೆಯು ತನ್ನ ಕೋಣೆಯಲ್ಲಿ ಬರ್ತೇ ನೆಲದ ಮೇಲೆ ಬಿದ್ದು ಕೊಂಡಿದ್ದಳು. ಆ ಕೋಮಲಾಂಗಿಯು ರಾಕ್ಷಸೀರ್ಮ ಫಿಯಾದ ಭೋಂಡೀರಾಜನ ಹೊಡತಗಳಿಂದ ಹಣ್ಣು ಹಣ್ಣಾಗಿದ್ದಳು. ಪ್ರಭಾತಕಾಲದ ಶಾಂತವೇಳೆಯಿಂದ ಅವಳ ಮೈಯಲ್ಲಿ ಸ್ವಲ್ಪ ಚೈತನ್ಯವು ಉತ್ಪನ್ನವಾದ್ದರಿಂದ, ಅವಳು ತನ್ನ ದುಃಖದ ಸ್ಥಿತಿಯ ಬಗ್ಗೆ ಆಲೋಚಿಸುತ್ತಿದ್ದಳು. ಈಶ್ವರನ ಹೊರ್ತು ತನಗೆ ಯಾರ ಆಶ್ರಯವೂ ಇಲ್ಲ, ಅವನ ಹೊರ್ತು ಯಾರಿಂದಲೂ ನನ್ನ ದುಃಖ ನಿವಾರಿಸುವದಾಗುವದಿಲ್ಲ, ಅವನ ಹೊರ್ತು ನನ್ನ ಸಲುವಾಗಿ ಯಾರಿಗೂ ಅಂತಃಕರುಣವು ಹುಟ್ಟುವದಿಲ್ಲ; ಎಂದು ಮನಸ್ಸಿನಲ್ಲಿ ಆಲೋಚಿಸುತ್ತ ಅವಳು ಜಗನ್ನಿಯಾಮಕನಾದ ಶಂಭುವಿನ ಸ್ತೋತ್ರವನ್ನು ಮಾಡುತ್ತ ಕುಳಿತಿದ್ದಳು. ಅವಳು ಅತಿ ಕರುಣಸ್ವರದಿಂದ:—

"ಮಾತೇ, ಕಾಳಿಕಾಭವಾನೀ—"

ಯಮುನೆಯು ಇದರ ಮುಂದಿನ ಶಬ್ದವನ್ನು ಉಚ್ಚರಿಸುವ ಅವಶ್ಯಕತೆಯೇ ಉಳಿಯಲಿಲ್ಲ. ಅವಳು 'ಕಾಳಿಕಾಭವಾನೀ' ಇಷ್ಟನ್ನುತ್ತಿರಲಿಕ್ಕೆ ಪ್ರತ್ಯಕ್ಷ ಮಹಾಕಾಳಿಯೇ ಎದುರಾದಳು. ಮಹಾಕಾಳಿಯೆಂದರೆ ರಾಧಾಬಾಯಿಯೆಂಬುವದನ್ನು ಚಾಣಾಕ್ಷರಾದ ವಾಚಕರು ಈ ಮೊದಲೇ ತರ್ಕಿಸಿರಬಹುದು. ಆ ಚಾಂಡಾಳಿಣಿಯು ಬಂದ ಕೂಡಲೆ ಹಣ್ಣು ಹಣ್ಣಾಗಿದ್ದ ಯಮುನೆಯ ಜೆನ್ನೆ ಮೇಲೆ ಬಂದು ಸಾರೆ ಗಟ್ಟಿಯಾಗಿ ಗುದ್ದಿ:—"ಎಲೈ ದುಷ್ಟಳಾದ ಯಮುನೇ, ನೀನು ಇನ್ನೂ ಏಳುವಂತಿಲ್ಲವೇನು? ಹೊರಗೆ ಎಷ್ಟು ಬಿಸಿಲು ಬಿದ್ದಿರುವದೆಂಬುವದು ನಿನಗೆ ಇನ್ನೂ ಗೊತ್ತಿಲ್ಲೇ? ಮೂರ್

ಳ್ಳಳೀ, ನೀನು ಎಲ್ಲ ಲಜ್ಜೆಯನ್ನು ತೊರೆದಂತೆ ಕಾಣುತ್ತದೆ. ಏಳು! ನೀಚಳೇ ಏಳು!! " ಎಂದಳು.

ಯಮುನೆಗೆ ಪ್ರಾಣಾಂತಿಕ ವೇದನೆಯಾಗಿತ್ತು. ಅವಳ ಸರ್ವಾಂಗವು ವೇದನೆಯಿಂದ ನರಳುತ್ತಿತ್ತು. ತಲೆಯು ಒಡೆದದ್ದರಿಂದ ಮೈಮೇಲೆ ರಕ್ತಪ್ರವಾಹವು ಹರಿಯುತ್ತಿತ್ತು. ಶರೀರದಲ್ಲಿ ಎಷ್ಟೋ ರಕ್ತವು ಕಡಿಮೆಯಾದ್ದರಿಂದ ಅವಳು ಅತ್ಯಂತ ನಿಸ್ತ್ರಾಣಿಯಾಗಿದ್ದಳು. ಅದರಲ್ಲಿ ಮತ್ತೆ ರಾಧಾಬಾಯಿಯು ಹೊಡೆದದ್ದರಿಂದ, ಯಮುನೆಗೆ ತೀರ ಕಸವಿಸಿಯಾಯಿತು. ಆದರೂ ಅವಳು ಒಳ್ಳೇ ಕಷ್ಟದಿಂದ ಎದ್ದು ಕುಳಿತು, ತನ್ನ ಅತ್ತೆಯ ಪಾದಗಳನ್ನು ಗಟ್ಟಿಯಾಗಿ ಹಿಡಿದು, ಅತ್ಯಂತ ದಯಾಜನಕ ಸ್ವರದಿಂದ ಅಂದದ್ದೇನೆಂದರೆ:—" ಅತ್ತೆಯರೇ, ನಿರಪರಾಧಳಾದ ನನ್ನನ್ನು ಸುಮ್ಮನೆ ಗೋಳಾಡಿಸಬೇಡಿರಿ. ನನ್ನನ್ನು ಗೋಳಾಡಿಸುವದರಿಂದ ನಿಮಗಾದರೂ ಆಗುವ ಲಾಭವೇನು? ನಾನಾದ್ದರಿಂದಲೇ ನಿಮ್ಮ ಕಾಟವನ್ನು ತಾಳಿಕೊಂಡಿರುವೆನು. ಈ ಪ್ರಕಾರ ಮೇಲೆ ಮೇಲೆ ನನ್ನನ್ನು ಬಾಧಿಸದೆ, ಒಮ್ಮೆಲೇ ಈ ಜಗತ್ತಿನಲ್ಲಿ ಇಲ್ಲದಂತೆ ಮಾಡಿದರೆ ತಮ್ಮ ಉಪಕಾರವು ನನ್ನ ಮೇಲೆ ಬಹಳವಾಗುತ್ತದೆ. ಈ ಪ್ರಕಾರ ಮಾಡಿದ ನಿಮ್ಮ ಉಪಕಾರವನ್ನು ಈ ಜನ್ಮದಲ್ಲಿ ತೀರಿಸದಿದ್ದರೂ, ಮುಂದಿನ ಜನ್ಮದಲ್ಲಿಯಾದರೂ ತೀರಿಸುವೆನು " ಎಂದಳು.

ಕಲ್ಲು ಅಂದರೆ ರಾಧಾಬಾಯಿಯೇ ಕಲ್ಲು. ವಜ್ರವು ಕಾಠಿಣ್ಯವಾದ ಪದಾರ್ಥವಲ್ಲ. ನಿಜವಾದ ಕಾಠಿಣ್ಯವಾದ ವಸ್ತುವೆಂದರೆ ರಾಧಾಬಾಯಿಯೇ ಸರಿ. ಯಮುನೆಯು ದೀನೋಕ್ತಿಗಳಿಂದ ಮೊತ್ತಿಸಿದ್ದು ರಾಧಾಬಾಯಿಗೆ ಕೋಪವೆ ತಲೆಗೇರಿತು. ಅವಳು ಯಮುನೆಯ ಎರಡೂ ಗಲ್ಲಗಳನ್ನು ಎರಡು ಸಾರೆ ತಟ್ಟಿ, ಅಂದದ್ದೇನೆಂದರೆ:—" ಆಹಹ! ಯಮುನೇ ಏನು ನಿನ್ನ ಸೊಬಿಚಾರವು!! ನಿನಗೆ ಒಮ್ಮೆಲೇ ಇಷ್ಟು ಜೀವದ ಮೇಲೆ ವೈರಾಗ್ಯವು ಉತ್ಪನ್ನವಾಗಲಿಕ್ಕೆ ಬದಗಿದ ಅಂಥ ಮಹಾ ದುಃಖವಾದರೂ ಯಾವದು? ಸವಿಸವಿಯಾದ ಅನ್ನವನ್ನು ಉಣ್ಣಲಿಕ್ಕೂ, ಚಪ್ಪರ ಪಲಂಗದ ಮೇಲೆ ಮೊಳ ದಪ್ಪವಾದ-ತಡಿಯನ್ನು ಹಾಸಿಕೊಂಡು ಮಲಗಲಿಕ್ಕೂ, ಶಾದುರೆ, ಮೋಟಾರ ಗಳನ್ನು ಹತ್ತಿಕೊಂಡು ಓಡ್ಯಾಡಲಿಕೂ ನಿನಗೆ ಅನುಕೂಲವಿರಲು ನೀನು ಜೀವಕ್ಕೆ ಬೇಸರವಾದಿಯೊಕೆ? ನೀನು ಮನಬಂದಂತೆ ವೇಶ್ಯೆಯ ಹಾಗೆ ತಿರು

ಗೌಡಲಿಕ್ಕೆ ಹವಣಿಸುವಂತೆ ಕಾಣುತ್ತದೆ. ಆದರೆ ಈ ನಮ್ಮ ದೊಡ್ಡ ಮನೆತನದಲ್ಲಿ ಆ ಪದ್ಧತಿಯು ಯೋಗ್ಯವಾಗ್ದಲಾರದು" ಎಂದಳು.

ಯಮುನೆಯು ತನ್ನ ಎಲ್ಲ ಶಕ್ತಿಯನ್ನು ಒಂದು ಮಾಡಿ ಒಳ್ಳೇ ಕಷ್ಟದಿಂದ ಶಿಷ್ಟಾಚಾರದಂತೆ ಎದ್ದು ನಿಂತಿದ್ದಳು. ಅವಳು ರಾಕ್ಷಸಿಯಾದ ರಾಧಾಬಾಯಿಯ ಹೊಡೆತಗಳಿಂದ ತಿರುಗಿ ಹೊತ್ತುಕೊಂಡು ನೆಲಕ್ಕೆ ಬಿದ್ದಳು. ವಾಚಕರೇ, ಎಷ್ಟು ಯಮುನೆಯ ಕಷ್ಟ! ಎಷ್ಟು ಅವಳ ವಿಲಕ್ಷಣ ಯಾತನೆ!! ಎಷ್ಟು ಅವಳ ಭಯಂಕರ ಸ್ಥಿತಿಯು. ಅವಳ ಸರ್ವಾಂಗಕ್ಕೆ ಸ್ವಲ್ಪ ಕೈ ಮುಟ್ಟಿದರೆ ಅವಳಿಗೆ ಒಳ್ಳೇ ವ್ಯಥೆಯಾಗುತ್ತಿತ್ತು. ಇಂಥದರಲ್ಲಿ ರಾಧಾಬಾಯಿಯು ಹೊಡೆದದ್ದರಿಂದ, ಅವಳಿಗೆ ಪ್ರಾಣಾಂತಿಕ ವೇದನೆಯಾಗಿ ಅವಳು ಒಂದು ನಿಟ್ಟುಸುರನ್ನು ಬಿಟ್ಟು ಅಳಲಿಕ್ಕೆ ಆರಂಭಿಸಿದಳು. ಅವಳ ಕಣ್ಣುಗಳಿಂದ ಕಣ್ಣೀರು ಸುರಿಯಲಾರಂಭಿಸಿದವು. ಅವಳು ದೀನ ಸ್ವರದಿಂದ:—"ಅತ್ತೆಯವರೇ, ನಿಮ್ಮ ಪಾದಗಳಿಗೆ ಬಿದ್ದು ಬೇಡಿಕೊಳ್ಳುತ್ತೇನೆ. ನನಗೆ ಸುಮ್ಮನೆ ಗೋಳಾಡಿಸಬೇಡಿರಿ. ನನ್ನಿಂದ ಅಪರಾಧವೇನಾದರೂ ಆಗಿದ್ದರೆ, ಕ್ಷಮಿಸಿ ನನ್ನನ್ನು ಉದ್ಧರಿಸಿರಿ. ನೀವೇ ನನ್ನನ್ನು ಹೀಗೆ ಗೋಳಾಡಿಸಿದರೆ, ನನ್ನನ್ನು ಸಂರಕ್ಷಿಸುವವರಾದರೂ ಯಾರು? ನನ್ನ ಮೊರೆಯನ್ನು ಕೇಳುವವರಾದರೂ ಯಾರು? ಸರ್ವಕ್ಕೂ ನೀವೇ ನನ್ನ ಆಧಾರಸ್ತಂಭಿಗಳು. ಹಡೆದ ತಾಯಿಯನ್ನಿಗಲಿ ಬಂದ ನನಗೆ ನೀವೇ ಜನನಿಯರು" ಎಂದಳು.

ಯಮುನೆಯು ಅಂತಃಕರಣದಿಂದ ಹೊರಟ ಶಬ್ದಗಳಿಂದ ಕೋಣೆಯಲ್ಲಿದ್ದ ಗೋಡೆಯ ಕಲ್ಲುಗಳು ದ್ರವಿಸಿದವು; ಆದರೆ ರಾಧಾಬಾಯಿಯ ಮನಸ್ಸು ಸ್ವಲ್ಪಾದರೂ ಕರಗಲಿಲ್ಲ. ಅವಳು ಮನಸ್ಸಿಗೆ ಬಂದಂತೆ ಯಮುನೆಯನ್ನು ಬೈಯ್ಯುತ್ತ:—"ಯಮುನೇ, ನಿನ್ನ ಸಂರಕ್ಷಣೆ ಮಾಡಲಿಕ್ಕೆ ನಾನು ಯಾರು? ನಾನು ನಿನ್ನ ಜನನಿಯಾಗಲಿಕ್ಕೇನು ಸಂಬಂಧ? ನಿನ್ನ ತಿರಕ ತಂದೆತಾಯಿಗಳಿಗೆ ನಿನ್ನನ್ನು ಸಂರಕ್ಷಿಸಲಿಕ್ಕೆ ಅವರಿಗೇನು ಕಡಿಮೆಯಾಗಿದೆ. ಅಹಹ! ಏನು ನಮಗೆ ನೀವು ಹಾಳಾದ ಬೀಗರು ದೊರೆತಿರಿ!! ಎಂದೂ ನಿಮ್ಮ ಮನೆಯಲ್ಲಿ ಹಬ್ಬ ಮಾಡುವದಿಲ್ಲ, ವಾರ ಮಾಡುವದಿಲ್ಲ, ಎಂದೂ ಏನೂ ಮಾಡುವಂತಿಲ್ಲ. ಬಂಗಾರದಂಥ ಅಳಿಯನನ್ನು ಲಗ್ನವಾದಂದಿನಿಂದ ಎಂದಾದರೂ

ನಿನ್ನ ತಂದೆ-ತಾಯಿಗಳು ಊಟಕ್ಕೆ ಕರಕೊಂಡು ಹೋಗಿದ್ದರೆ ಅವರಿಗೆ ಆಣೆ. ಬಿಲ್ಲ-ಕೊರಚರ ಸ್ಥಿತಿಯು ನಿಮಗಿಂತಲೂ ಎಷ್ಟೋ ಮಟ್ಟಿಗೆ ಒಳ್ಳೇದು. ಅವರು ಸ್ವಲ್ಪಾದರೂ ತಮ್ಮ ಬೀಗರಿಗೆ ಮರ್ಯಾದೆ ಮಾಡುತ್ತಾರೆ, ಹಬ್ಬ ಮಾಡುತ್ತಾರೆ, ವಾರ ಮಾಡುತ್ತಾರೆ. ಆದರೆ ನಿನ್ನ ತಾಯಿ ತಂದೆಗಳು ಶುದ್ಧ ಕುಂಬಾರ ಕತ್ತೆಗಳಂತಿದ್ದಾರೆ. ಅವರನ್ನು ನೋಡಿದ ಕೂಡಲೆ ನನ್ನ ಮೈಯೆಲ್ಲ ಉರಿಯುತ್ತದೆ. ನಮಗಾದರೂ ಇರುವವನು ಒಬ್ಬನೇ ಒಬ್ಬ ಮಗನೆಂದೂ, ನಮ್ಮ ಬೀಗರಾದರೂ ಬಡವರಿರುವರೆಂದೂ ನೆನಿಸಿ, ನಿನ್ನ ತಂದೆ-ತಾಯಿಗಳಿಗೆ ಒಂದು ಪೈ ಖರ್ಚಾಗದಂತೆ ನಾವೇ ಬೇಕಾದಷ್ಟು ದುಡ್ಡು ಖರ್ಚು ಮಾಡಿದೆವು. ಆದರೆ ಅದರಲ್ಲಿ ನಮಗೆ ಸ್ವಲ್ಪಾದರೂ ಮರ್ಯಾದೆಯು ಬರಲಿಲ್ಲ. ನಿನ್ನ ತಂದೆ-ತಾಯಿಗಳು ಮರ್ಯಾದಾಪೂರ್ವಕವಾಗಿ ನನಗೆ ಒಂದು ಶಿರೆಯನ್ನು ಉಡಿಸದಿದ್ದರೂ ಚಿಂತೆಯಿಲ್ಲ. ಗೇಣು ಕುಬ್ಬಸವನ್ನಾದರೂ ಮಾಡಲಿಲ್ಲ. ಇಂಥ ತಿರಕರಂಬುವದೂ ಮಾನಗೇಡಿಗಳೆಂಬುವದೂ ನನಗೆ ಮೊದಲೇ ಗೊತ್ತಿದ್ದರೆ, ನಿಮ್ಮೊಡನೆ ಏಂದೂ ನಾನು ಬೀಗತನ ಮಾಡಗೊಡಿಸುತ್ತಿದ್ದಿಲ್ಲ. ಮುಖ್ಯವಾಗಿ ನಿನ್ನ ಹಣೆಯಲ್ಲಿ ಒಳ್ಳೇದು ಬರೆದಿತ್ತು. ಅದರಿಂದಲೇ ನಿನಗೆ ಇಂಥ ಶ್ರೀಮಂತರ ಮನೆಯು ಸಿಕ್ಕಿರುವದು. ಹೀಗಿದ್ದರೂ ನೀನು ಆ ಬಗ್ಗೆ ಸ್ವಲ್ಪಾದರೂ ಉಪಕಾರ ಮಾನಿಸುವಂತಿಲ್ಲ. ಬಡವರ ಮನೆಗೆ ಬಿದ್ದಿದ್ದರೆ ನಿನಗೆ ಗೊತ್ತಾಗುತ್ತಿತ್ತು" ಎಂದಳು.

ಯಮುನೆಯು ನಿರ್ಮಲವಾದ ಮನಸ್ಸಿನಿಂದ ನುಡಿದಳೇನೆಂದರೆ:— "ಶ್ಯಶ್ರೂದೇವಿಯರೇ, ಐಶ್ವರ್ಯವು ಮನುಷ್ಯನ ಸುಖ-ಸಮಾಧಾನಗಳಿಗೆ ಕಾರಣವಾದದ್ದಲ್ಲ. ಮುರಕಹರಹ ಚಪ್ಪರದಲ್ಲಿ ವಾಸಮಾಡುವಂಥ, ಕಡಲೆಕಲರೊಟ್ಟಿ, ಕಾರದ ಹಿಂಡಿಯನ್ನು ತಿನ್ನುವಂಥ, ಚಿನ್ನಾಬಿಡಿರಿ ಅರಿವೆಯನ್ನು ಸುತ್ತಿಕೊಂಡಂಥ ಕೊರಚ-ಕುಂಜೀ ಜೋಗಿಯೆರು ಮೊದಲಾದವರಿಗೆ ನಿಮ್ಮಷ್ಟು ಸಂಪತ್ತು ಎಲ್ಲಿ ಇರುತ್ತದೆ? ಆದರೂ ನಿಶ್ಚಯವಾಗಿ ಅವರು ಸುಖ-ಸಮಾಧಾನಗಳಿಂದ ಕಾಲಹರಣ ಮಾಡುತ್ತಾರೆ. ಅವರೆ ಮುರಕ ಚಪ್ಪರದಲ್ಲಿ ಎಷ್ಟು ಸುಖವದೆಯೋ, ಅದರ ಒಂದು ಲಕ್ಷಾಂಶವಾದರೂ ನಿಮ್ಮ ಭವ್ಯವಾದ ಮಂದಿರದಲ್ಲಿ ಕಾಣಿಸುವದಿಲ್ಲ! ಯಾವಾಗಲೂ ಕಣ್ಣಿಗೆ

೨. ನನ್ನ ತಾಯಿ (೩ನೆಯ ಆವೃತಿ) ಬೆಲೆ ೮ಃ॥

೩. ನಾಡನೆಲೆಗಾರ ಬೆಲೆ ೯೯

೪. ಭೂಮಂಡಲಬೋಧಿನಿ (ಹೊಸ ಪದ್ಧತಿಯ ೪ನೆಯ ಇಯತ್ತೆಯ ಭೂಗೋಲ.)

ಇವು ಮೂರೂ ಸರಕಾರದಿಂದ ಮಂಜೂರ ಮಾಡಲ್ಪಟ್ಟವೆ. ಈ ನಾಲ್ಕು ಪುಸ್ತಕ ಒಮ್ಮಿಗೆಲೆ ತರಿಸಿಕೊಂಡರೆ ೩-೩-೦. ಅಂಚೆವೆಚ್ಚ ಸಹಿತ.

ಪತ್ತೆ— ಶಿವರುದ್ರಪ್ಪ ಸೋಮಪ್ಪ ಕುಲಕರಣಿ ಶಾಲಾ ಮಾಸ್ತರ
ಬಂಕಾಪುರ, ಜಿಲ್ಲಾ ಧಾರವಾಡ.

(೨)

ದ್ವಾದಶ ಮಾಸಗಳ ಭವಿಷ್ಯತ್ಫಲೋದಯ.

ಲೋಕಾಭಿನಾನಿಗಳೇ, ನಿಮ್ಮ ವಯಸ್ಸು ಹೆಸರನ್ನು ಮಾತ್ರ ಬರೆದು ಪತ್ರದ್ವಾರದಿಂದ ತಿಳುಹಿಸಿದರೆ ನಿಮ್ಮ ಜನ್ಮ ತಲ್ಪಿದ ಮಾಸ ಮೊದಲ್ಗೊಂಡು ಮುಂದೆ ೧೨ ಮಾಸಗಳವರೆಗೆ ಒದಗುವ ಸುಖ-ದುಃಖ ಲಾಭ-ನಷ್ಟ ದೇಹ ಪೀಡೆ ಪರಿಹಾರಕ್ಕೆ ಮಾಡತಕ್ಕ ಶಾಂತಿಕ್ರಮ ಇವೆಲ್ಲವನ್ನು ಸವಿಸ್ತಾರವಾಗಿ ಬರೆದು ಕಳುಹಿಸುತ್ತೇವೆ. ಇದಕ್ಕೆ ಚಾರ್ಜು ೨ ರೂಪಾಯಿ. ಮತ್ತು ನಿಮ್ಮ ಮನೆಗಳಲ್ಲಿ ಶಿಸುಗಳು ಜನಿಸಿದ ವೇಳೆ, ವಾರ, ತಿಥಿ, ಮಾಸ ಇವೆಲ್ಲವನ್ನು ವಿಶದವಾಗಿ ತಿಳಿಸಿದರೆ ಜನ್ಮಪತ್ರಿಕೆಯೆನ್ನು ಬರೆದು ಕಳುಹಿಸುತ್ತೇವೆ. ಚಾರ್ಜು ೧ ರೂಪಾಯಿ ೪ ಆಣೆ. ಮತ್ತು ಕೆಲವು ಸಿದ್ಧಾಂತ ಗ್ರಂಥಗಳ ರೀತಿಯಿಂದ ಜಾತಕವನ್ನು ತಯಾರಿಸಿ ಕಳುಹಿಸುತ್ತೇವೆ, ಇದಕ್ಕೆ ಚಾರ್ಜು ೫ ರೂಪಾಯಿ. ಮತ್ತು ಸಂಪೂರ್ಣ ಜಾತಕಕ್ಕೆ ಚಾರ್ಜು ೧೫ ರೂಪಾಯಿಗಳು. ಈ ಸಂಪೂರ್ಣ ಜಾತಕವನ್ನು ಬರಿಸತಕ್ಕವರು ೫ ರೂಪಾಯಿಗಳನ್ನು ಮುಂದಾಗಿ ಕಳುಹಿಸರಿ. ಮತ್ತು ಸ್ತ್ರೀಯರಿಗೆ ಪ್ರಥಮ ಋತುಫಲವೇ ಮುಖ್ಯವಾದ ಮೂಲಕ ನಿಮ್ಮ ಮನೆಗಳಲ್ಲಿ ಸ್ತ್ರೀಯರು ಪ್ರಥವ ಋತುವಾದ ವೇಳೆ, ಮಾಸ. ತಿಥಿ, ವಾರ ಇವುಗಳನ್ನು ತಿಳಿಸಿದರೆ ಋತುಫಲವನ್ನು ಬರೆದು ಕಳುಹಿಸುತ್ತೇವೆ. ಇದಕ್ಕೆ ಚಾರ್ಜು ೨ ರೂಪಾಯಿ. ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಿರಿ. ನಿಮ್ಮ ಪತ್ತಾ ಪೂರ್ಣವಿರಲಿ. ನಾಟಪೇಡ ಪತ್ರವನ್ನು ಸ್ವೀಕರಿಸುವದಿಲ್ಲ.

ನಮ್ಮ ಪತ್ತಾ:—ಎಸ್. ಎಮ್. ಸಿದ್ಧಾಂತಿ ಹಿರೇಮಠ,
ಮುಕಾಂ—ಹೂಲಿ. ಪೋಷ್ಟ—ಮಸ್ಕೊಲ್ಲಿ.
ಡಿಸಿ ಕ್ಟ—ಬೆಳಗಾವ

ಪ್ರಸಿದ್ಧ ಪತ್ರಿಕಾ.

ವಾತುಲಾಗಮ ಸೂಕ್ಷ್ಮಾಗಮ ಪಾರಮೇಶ್ವರಾಗಮ	}	೧–೮–೦
ವಿಶೇಷಾರ್ಥ ಪ್ರಕಾಶಿಕಾ		೦–೬–೦

ಈ ಗ್ರಂಥಗಳನ್ನಪೇಕ್ಷಿಸುವವರು ನಮಗೆ ಪತ್ರ ಬರಕೊಂಡರೆ ವಿ. ಪಿ. ಮೂಲಕ ರವಾನಿಸುತ್ತೇವೆ.

ಮುದ್ರಿಸತಕ್ಕ ಗ್ರಂಥಗಳು.

ಕಾಮಿಕಾಗಮ ಕುಮಾರತಂತ್ರ ಪೌಷ್ಕರಾಗಮ ಮೃಗೇಂದ್ರಾಗಮ ಸುಪ್ರಭೇದಾಗಮ	ಈ ಗ್ರಂಥಗಳು ನಮ್ಮಲ್ಲಿರುತ್ತವೆ. ಇವುಗಳನ್ನು ಸ್ವಲ್ಪ ದಿವಸಗಳಲ್ಲಿಯೇ ಮುದ್ರಿಸುವದಕ್ಕೆ ಕೊಡುತ್ತೇವೆ. ಇವು ಅಕ್ಷುದ್ರಾಗಿರುವದರಿಂದ ಬೇರೆ ಪ್ರತಿಗಳನ್ನು ಅವೇಕ್ಷಿಸಬೇಕಾಗಿದೆ. ಯಾರಲ್ಲಾದರು ಇದ್ದರೆ ಕಳುಹಿಸಬೇಕಾಗಿ ಅಥವಾ ತಿಳಿಸಿಸಬೇಕು.

೧೨–೩ ಶಂಕರಪ್ಪ ಟೊಪಗಿ, ಹುಬಳಿ.

ಪ್ರಕಟನೆಯ ದರಗಳು.

	ವರ್ಷಾವಧಿ.	ಮಾಸಾವಧಿ.
ಪೂರ್ಣ ಪುಟದ ಪ್ರಕಟನೆಗೆ	೨೪—೦—೦	೩—೦—೦
ಅರ್ಧ ,, ,,	೧೫—೦—೦	೨—೦—೦
ಕಾಲು ,, ,,	೮—೦—೦	೧—೦—೦

ಕಾಲು ಪುಟಕ್ಕಿಂತ ಕಡಿಮೆಯುಳ್ಳ ಪ್ರಕಟನೆಗೆ ಪಂಜ್ರಿಯೊಂದಕ್ಕೆ ೪ ಆಣೆ ಬೇಳುವದು. ಜಾಹೀರಾತನ್ನು ಕಳಿಸುವವರು ಮುಂಗಡವಾಗಿಯೇ ಪತ್ರದ್ವಾರದಿಂದ ದರಗಳನ್ನು ಗೊತ್ತುಮಾಡಿಕೊಳ್ಳತಕ್ಕದ್ದು.

ಪ್ರಕಟನೆಯ ಕೂಡ ಹಣ ಕಳಿಸತಕ್ಕದ್ದು.

ಈ ಪತ್ರಿಕೆಯೊಡನೆ ಹಂಚತಕ್ಕ ಪತ್ರಿಕೆಗಳಿಗೆ ೧೦೦ಕ್ಕೆ ೪ ಆಣೆಯಂತೆ ದರಗಳನ್ನು ತೆಗೆದುಕೊಂಡು ಹಂಚಲ್ಪಡುವವು. ಬೇಕಾದವರು ಕೆಳಗಿನ ವಿಳಾಸಕ್ಕೆ ಹಣ ಸಹಿತ ಪ್ರಕಟನೆಗಳನ್ನು ಕಳಿಸಬೇಕು.

ಮ್ಯಾನೇಜರ ಧರ್ಮತರಂಗಿಣಿ ಪ್ರೆಸ್, ಧಾರವಾಡ.

Edited and published by H. S. Shivaling Shastri,
Manager Dharmatarangini Office, Dharwar.